ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ
ಹಾರೂಗೇರಿ ಗ್ರಾಮ ಪಂಚಾಯತಿ ಒಂದು ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕರು :

ಚಿದಾನಂದ ಉಮೇಶ ಧವಳೇಶ್ವರ

ಮಾರ್ಗದರ್ಶಕರು :

ಡಾ|| ಎಸ್. ಬಿ. ದಾಸೋಗ

ಎಂ.ಎಂ.ಎಸ್. ಮಹಾವಿದ್ಯಾಲಯ, ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ - ೫೯೧ ೨೨೦

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ

೨೦೦೯

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ
ಹಾರೂಗೇರಿ ಗ್ರಾಮ ಪಂಚಾಯತಿ ಒಂದು ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ
ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕರು :
ಚಿದಾನಂದ ಉಮೇಶ ಧವಳೇಶ್ವರ

ಮಾರ್ಗದರ್ಶಕರು :
ಡಾ॥ ಎಸ್. ಬಿ. ದಾಸೋಗ
ಎಂ.ಎಂ.ಎಸ್. ಮಹಾವಿದ್ಯಾಲಯ, ಬೆಳಗಾವಿ

ಮಾತೇಂಬುದು ಜ್ಯೋತಿರ್ಲಿಂಗ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ - ೫೯೧ ೨೨೦
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

ಘೋಷಣಾ ಪತ್ರ

" **ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ" ಹಾರೂಗೇರಿ ಗ್ರಾಮಪಂಚಾಯತಿ ಒಂದು ಅಭಿವೃದ್ಧಿ ಅಧ್ಯಯನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ಎಸ್.ಬಿ.ದಾಸೋಗ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ (ಸಮಾಜ ಕಾರ್ಯ) ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಮತ್ತು ಈ ಮೊದಲು ಇಡೀಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : ೨೯.೦೯.೨೦೦೯

ಶ್ರೀ ಚಿದಾನಂದ ಉಮೇಶ ಧವಳೇಶ್ವರ
ಎಂ.ಫಿಲ್ ವಿದ್ಯಾರ್ಥಿ,
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಚಿದಾನಂದ ಉಮೇಶ ಹವಳೇಶ್ವರ ಇವರು "ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ" ಹಾರೂಗೇರಿ ಗ್ರಾಮಪಂಚಾಯತಿ ಒಂದು ಅಭಿವೃದ್ಧಿ ಅಧ್ಯಯನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ (ಸಮಾಜ ಕಾರ್ಯ) ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಮತ್ತು ಈ ಮೊದಲು ಇಡೀಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೯.೦೯.೨೦೦೯

ಡಾ ಎಸ್ ಬಿ ಬಾಸೋಗಿ
ಮಾರ್ಗದರ್ಶಕರು
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ಮತ್ತು
ಸಮಾಜಶಾಸ್ತ್ರದ ಪ್ರಾಧ್ಯಾಪಕರು.
ಎಮ್.ಎಮ್.ಎಸ್.ಕಲಾ, ವಾಣಿಜ್ಯ, ವಿಜ್ಞಾನ ಹಾಗೂ
ಗೃಹವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

೧.೧ ಸಂಶೋಧನೆಯ ವಿಷಯ

೧.೨ ಸಂಶೋಧನೆಯ ಉದ್ದೇಶಗಳು

೧.೩ ಸಂಶೋಧನೆಯ ಪ್ರಾಕಲ್ಪನೆ

೧.೪ ಸಂಶೋಧನೆ ವಿಧಾನ

೧.೫ ಸಂಶೋಧನ ಕ್ಷೇತ್ರ

೧.೬ ಮಾದರಿ ನಮೂನೆ ಆಯ್ಕೆ

೧.೭ ದತ್ತಾಂಶ ಸಂಗ್ರಹಣೆಯ ವಿಧಾನಗಳು

[illegible]

[illegible]

[illegible] [illegible]
[illegible] [illegible]
[illegible] [illegible]
[illegible] [illegible]
[illegible] [illegible]
[illegible] [illegible]
[illegible] [illegible]

1.1 ಸಂಶೋಧನೆಯ ವಿಷಯ :

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಸಭೆಯ ಪಾತ್ರ ಎಂಬ ವಿಷಯ ಈಗ ಬಹು ಚರ್ಚಿತವಾದದ್ದು. ಏಕೆಂದರೆ. ಒಂದುಗ್ರಾಮದ ಸರ್ವಾಂಗೀಣ ಅಭಿವೃದ್ಧಿ ಹಿಂದೆ ಆ ಗ್ರಾಮದ ಜನರ ಸಾಮೂಹಿಕ ಯೋಜನೆ ತೀರ್ಮಾನಗಳು ಬಹಳ ಉಪಯುಕ್ತ ಹಾಗೂ ಅನಿವಾರ್ಯವಾಗಿವೆ. ಈ ಕಾರಣಕ್ಕಾಗಿಯೇ ಗ್ರಾಮದ ಜನರನ್ನೆಲ್ಲ ಒಟ್ಟು ಸೇರಿಸಿ. ಗ್ರಾಮಸಭೆ ನಡೆಸಿ. ಅವರ ಸಮಸ್ಯೆಗಳನ್ನು ಆಲಿಸಿ. ಸಮಸ್ಯೆಗಳ ನಿಯಂತ್ರಣ ಹಾಗೂ ನಿವಾರಣೆಗೆ ಕ್ರಿಯಾಯೋಜನೆ ತಯಾರಿಸುವ ಯೋಚನೆ ಆಧುನಿಕ ಭಾರತದ ಆಡಳಿತಗಾರರಿಗೆ ಹೊಳೆಯಿತು.

ಈ ನಿಟ್ಟಿನಲ್ಲಿ ಇಂಥಹ ಗ್ರಾಮಸಭೆಗಳನ್ನು ಕೇವಲ ಒಂದು ಅನೌಪಚಾರಕ ಸಭೆ ಮಾಡಬೇಕೋ ಅಥವಾ ಅದನ್ನು ಕಾನೂನಿನ ಮಿತಿಗೆ ಒಳಪಡಿಸಿ. ಕಡ್ಡಾಯ ಮಾಡಬೇಕೋ? ಎಂಬ ಅಂಶಗಳು ವಿವೇಚನೆಗೆ ಬಂದವು. ನಮ್ಮಲ್ಲಿ ಪುರಾತನ ಕಾಲದಿಂದಲೂ ಗ್ರಾಮೀಣ ಪಂಚಾಯತಿ ವ್ಯವಸ್ಥೆ ಇದ್ದು ಇಂತಹ ಪಂಚಾಯತಿಗಳು ಬಹುಮಟ್ಟಿಗೆ ಗ್ರಾಮೀಣ ಸಾಮಾಜಿಕ ಸ್ವಾಸ್ಥ್ಯ ಕಾಪಾಡಲು ಪ್ರಯತ್ನಿಸುತ್ತಿದ್ದವು. ಅದರ ಹೊರತಾಗಿ ಬೇರೆ ಯಾವುದೇ ಗ್ರಾಮೀಣ ಅಭಿವೃದ್ಧಿ ಪರ ಅಂಶಗಳನ್ನು ಈ ಪಂಚಾಯತಿಗಳು ಹೊಂದಿರಲಿಲ್ಲ. ಅಲ್ಲದೇ ಆಧುನಿಕ ಯುಗದಲ್ಲಿ ಗ್ರಾಮದ ಜನರ ಮೇಲೆ ಪಂಚಾಯತಿಗಳು ನಿಯಂತ್ರಣ ಸಾಧಿಸಲು ಕೂಡ ವಿಫಲವಾದವು. ಈ ಅಂಶವನ್ನು ಮನಗಂಡು ಪಂಚಾಯತಿ ಹಾಗೂ ಅದರ ಕಾರ್ಯಚಟುವಟಿಕೆಗಳನ್ನು ಕಾನೂನಿನ ಮಿತಿಗೆ ಒಳಪಡಿಸಲಾಯಿತು. ಪಂಚಾಯತಿಯ ಕಾರ್ಯಚಟುವಟಿಕೆ ಸರಾಗವಾಗಿ ಸಾಗಲು ಕಾನೂನಿನ ಮೂಲಕ ಅಗತ್ಯ ಮಾರ್ಗದರ್ಶನ ನೀಡಿ. ಸಂಪನ್ಮೂಲ ಒದಗಿಸಿ. ಆಡಳಿತಾಧಿಕಾರಿಗಳನ್ನು ನೇಮಿಸಲಾಯಿತು. ಜೊತೆಗೆ ಗ್ರಾಮೀಣ ಜನರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿ. ಗ್ರಾಮ ಸಭೆಯ ಮೂಲಕ ತಮ್ಮ ಕುಂದು ಕೊರತೆಗಳನ್ನು ಚರ್ಚಿಸಿ. ಅವುಗಳ ಪರಿಹಾರದ ಜೊತೆಗೆ ಗ್ರಾಮೀಣಾಭಿವೃದ್ಧಿಗೆ ಅವಶ್ಯಕವಾದ ಕ್ರಿಯಾಯೋಜನೆ ತಯಾರಿಸುವ ಪರಮಾಧಿಕಾರವನ್ನು 1993ರ ಕರ್ನಾಟಕ ಪಂಚಾಯತ ರಾಜ್ ಕಾಯ್ದೆಯಲ್ಲಿ ನೀಡಲಾಯಿತು. ಜೊತೆಗೆ ಒಂದು ವರ್ಷಕ್ಕೆ ಕನಿಷ್ಟ ಎರಡು ಬಾರಿ ಗ್ರಾಮಸಭೆ ನಡೆಸಲೇಬೇಕೆಂಬ ತೀರ್ಮಾನಕ್ಕೆ ಬಂದು ಅದರಲ್ಲಿ ಜನರ ಸಹಭಾಗಿತ್ವ ಮತ್ತು ಸಭಾ ಪ್ರಕ್ರಿಯೆಗಳ ಬಗೆಗೂ ಕೂಡ ಕರ್ನಾಟಕ ಸರಕಾರ ಅಗತ್ಯ ಮಾರ್ಗದರ್ಶನಗಳನ್ನೂ ಒದಗಿಸಿತು.

ಸರಕಾರದ ಇಷ್ಟೆಲ್ಲ ಯೋಜಿತ ಪ್ರಯತ್ನಗಳ ಮೇಲೆ ನಿಜವಾಗಿಯೂ ಗ್ರಾಮಸಭೆ ನಡೆಯುತ್ತಿವೆಯೇ? ಜನರ ಸಹಭಾಗಿತ್ವ ಯಾವ ಮಟ್ಟದಲ್ಲಿ ಇದೆ ? ಗ್ರಾಮಸಭೆಯ ಬಗ್ಗೆ ಜನರ ಅಭಿಪ್ರಾಯವೇನು? ಗ್ರಾಮಸಭೆಯ ಮೂಲಕ ಗ್ರಾಮೀಣಾಭಿವೃದ್ಧಿ ಸಾಧಿಸಬಹುದೇ ? ಎಂಬ ಇತ್ಯಾದಿ ಪ್ರಶ್ನೆಗಳು ಸಂಶೋಧಕನಿಗೆ ಉದ್ಭವಿಸದೇ ಇರಲಾರವು. ಹಾಗಾಗಿ ಈ ಅಂಶಗಳ ಸತ್ಯಾಸತ್ಯತೆಗಳನ್ನು ಹುಡುಕುವ ಸಲುವಾಗಿ **"ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ"** - ಹಾರೂಗೇರಿ

ಗ್ರಾಮಪಂಚಾಯತಿ ಒಂದು ಅಭಿವೃದ್ಧಿ ಅಧ್ಯಯನ. ಎಂಬ ವಿಷಯವನ್ನು ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದೇನೆ.

ಈ ಸಂಶೋಧನೆಯನ್ನು ನಾನು ಕೆಲವು ಮಿತಿಗಳಿಗೆ ಒಳಪಡಿಸಿಕೊಂಡಿದ್ದೇನೆ. ಪೂರ್ಣ ಪ್ರಮಾಣದಲ್ಲಿ ಗ್ರಾಮಸಭೆಯ ಬಗ್ಗೆ ಅಷ್ಟೇ ಚರ್ಚಿಸದೇ. ಪಂಚಾಯತಿಯ ಕಾರ್ಯಚಟುವಟಿಕೆಗಳನ್ನು ಅರ್ಥೈಸಿಕೊಂಡು ಅದರಲ್ಲಿ ಗ್ರಾಮಸಭೆ ಯಾವ ರೀತಿ ಕಾರ್ಯನಿರ್ವಹಿಸಬೇಕು? ಅದರ ಸಾಮಾನ್ಯ ನಿಯಮಾವಳಿಗಳೇನು ? ಗ್ರಾಮಸಭೆಯ ಬಗ್ಗೆ ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ ಜಾಗೃತಿಯಿದೆ? ಅದರ ಕಾರ್ಯಚಟುವಟಿಕೆ ಪ್ರಕ್ರಿಯೆಗಳಲ್ಲಿ ಸಾರ್ವಜನಿಕ ಸಹಭಾಗಿತ್ವ ಹೇಗಿದೆ? ಮತ್ತು ಗ್ರಾಮಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಪಾಲ್ಗೊಳ್ಳಲು ಏನು ಮಾಡಬಹುದು ? ಮತ್ತು ಗ್ರಾಮಸಭೆ ಜನರ ಸಹಭಾಗಿತ್ವ ಮತ್ತು ಗ್ರಾಮೀಣ ಅಭಿವೃದ್ಧಿ ಅಂಶಗಳ ಸಹ ಸಂಬಂಧ ಹೇಗಿದೆ ? ಎಂಬುದನ್ನು ಈ ಅಧ್ಯಯನದ ಮೂಲಕ ಸಂಶೋಧಿಸುವ ಪ್ರಯತ್ನ ಮಾಡಿದ್ದೇನೆ.

1.2 ಸಂಶೋಧನಾ ಉದ್ದೇಶಗಳು

ಸಂಶೋಧನೆ ಎಂಬುದು ಒಂದು ನಿರಂತರ ಪ್ರಕ್ರಿಯೆ. ಅದು ತನ್ನ ವ್ಯಾಪ್ತಿಯನ್ನು ಮಿತಿಗೆ ಒಳಪಡಿಸಿಕೊಳ್ಳದೇ ವಿಶಾಲವಾಗಿ ನಡೆದುಕೊಂಡು ಹೋಗುವಂತಹ ಒಂದು ಶುದ್ಧ ವಿಜ್ಞಾನ. ಪ್ರತಿಯೊಂದು ಸಂಶೋಧನೆಗೂ ತನ್ನದೇ ಆದ ಅಗತ್ಯತೆಗಳಿರುತ್ತವೆ. ಅವುಗಳನ್ನು ಪೂರೈಸಿಕೊಳ್ಳಲು ನಿಶ್ಚಿತ ಉದ್ದೇಶಗಳೂ ಕೂಡ ಇರುತ್ತವೆ. ಸಾಮಾಜಿಕ ಸಂಶೋಧನೆಯೂ ಕೂಡ ಈ ಮಿತಿಗಳಿಂದ ಹೊರತಾಗಿಲ್ಲ. ಸಂಶೋದನೆಯ ಪರಮಗುರಿ ಜ್ಞಾನವನ್ನು ಹೆಚ್ಚಿಸುವುದಾಗಿದೆ. ಸತ್ಯವನ್ನು ಹೊರಗೆಳೆಯುವದಾಗಿದೆ. ಈ ನಿಟ್ಟಿನಲ್ಲಿ ಸಧ್ಯದ ಗ್ರಾಮಸಭೆಗಳ ಕಾರ್ಯಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುತ್ತಿವೆಯೇ? ಜನರ ಸಹಭಾಗಿತ್ವ ಹೇಗಿದೆ? ಮತ್ತು ಗ್ರಾಮೀಣಾಭಿವೃದ್ಧಿಗೆ ಗ್ರಾಮಸಭೆ ಪೂರಕವಾಗಿರಲು ಏನು ಮಾಡಬಹುದು? ಎಂಬ ಅಂಶಗಳನ್ನು ಸಂಶೋಧಿಸುವ ಸಲುವಾಗಿ ಈ ಕೆಳಗಿನ ಉದ್ದೇಶಗಳನ್ನು ನನ್ನ ಸಂಶೋಧನೆಗೆ ಅಳವಡಿಸಿಕೊಂಡಿದ್ದೇನೆ.

1) ಗ್ರಾಮ ಪಂಚಾಯತಿ ಮತ್ತು ಗ್ರಾಮಸಭೆಯ ಚಿತ್ರಣವನ್ನು ಅರ್ಥೈಸಿಕೊಳ್ಳುವುದು.
2) ಗ್ರಾಮಸಭೆಯ ಕಾರ್ಯ ಚಟುವಟಿಕೆಗಳನ್ನು ಪರಿಶೋಧಿಸುವುದು.
3) ಗ್ರಾಮಸಭೆಯಲ್ಲಿ ಜನರ ಸಹಭಾಗಿತ್ವವನ್ನು ಪರೀಕ್ಷಿಸುವುದು.

4) ಗ್ರಾಮೀಣಾಭಿವೃದ್ಧಿ ಸಾಧಿಸುವಲ್ಲಿ, ಗ್ರಾಮಸಭೆಯ ಪರಿಣಾಮಕಾರಿ ಕಾರ್ಯಚಟುವಟಿಕೆಗಳಿಗೋಸ್ಕರ ಅಭಿಪ್ರಾಯ ಸಂಗ್ರಹಿಸುವುದು.

1.3 ಸಂಶೋಧನೆಯ ಪ್ರಾಕಲ್ಪನೆ

ನನ್ನ ಸಂಶೋಧನಾ ಪ್ರಾಕಲ್ಪನೆ

1) ಗ್ರಾಮಸಭೆ ಎಂಬ ಅಂಶದ ಕುರಿತು ಗ್ರಾಮೀಣ ಜನರಿಗೆ ಮಾಹಿತಿ ಮತ್ತು ಜಾಗೃತಿ ಇಲ್ಲ.

2) ಗ್ರಾಮಸಭೆಗಳು ವ್ಯವಸ್ಥಿತವಾಗಿ, ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಒಂದು ವೇಳೆ ನಡೆದರೂ ಕೂಡ ಸಾರ್ವಜನಿಕರ ಸಹಭಾಗಿತ್ವ ಉತ್ತಮಮಟ್ಟದಾಗಿಲ್ಲ.

1.4 ಸಂಶೋಧನಾ ವಿಧಾನ

ಈ ಸಂಶೋಧನೆಗೆ ಎರಡು ಪ್ರಕಾರದ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಂಡಿದ್ದೇನೆ. ಅವುಗಳೆಂದರೆ,

1) ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನೆ.

2) ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನೆ.

1.5 ಸಂಶೋಧನಾ ಕ್ಷೇತ್ರ

ಸಂಶೋಧನೆಗಾಗಿ ಹಾರೂಗೇರಿ ಗ್ರಾಮಪಂಚಾಯತಿಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನಲ್ಲಿ ಇರುವ ಇದು ಕರ್ನಾಟಕದ ಅತೀ ದೊಡ್ಡ ಗ್ರಾಮ ಪಂಚಾಯತಿ ಎಂಬ ಅಗ್ಗಳಿಕೆಯನ್ನು ಹೊಂದಿದೆ. 15 ವಾರ್ಡುಗಳು, 72 ಪಂಚಾಯತಿ ಸದಸ್ಯರು, ಹಾಗೂ 17,000 ಮತದಾರರನ್ನು ಹೊಂದಿರುವ ಈ ಪಂಚಾಯತಿ ಗ್ರಾಮೀಣಾಭಿವೃದ್ಧಿ ಸಾಧಿಸಲು, ಗ್ರಾಮಸಭೆಯನ್ನು ಹೇಗೆ ವೇದಿಕೆಯನ್ನಾಗಿ ಮಾರ್ಪಡಿಸಿಕೊಂಡಿದೆ ಎಂಬ ಕುತೂಹಲದಿಂದ ಈ ಕ್ಷೇತ್ರದ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹೆಚ್ಚಿನ ವಿದ್ಯಾಭ್ಯಾಸ ಹೊಂದಿದವರು ಹಾಗೂ ದೊಡ್ಡ ಕೃಷಿ ಹಿಡುವಳಿದಾರರು ವಿಭಿನ್ನ ಸಮುದಾಯದ ಜನರು ಇದ್ದಾರೆ. ಉತ್ತಮ ನೀರಾವರಿ ಸೌಲಭ್ಯಗಳಿರುವುದರಿಂದ ರೈತರು ಕಬ್ಬು, ಅರಿಶಿಣ, ಸೂರ್ಯಕಾಂತಿ ಹಾಗೂ ಸೊಯಾಬೀನ್ ನಂತಹ

ವಾಣಿಜ್ಯ ಬೆಳೆಗಳನ್ನು ಬೆಳೆಯುವದರಿಂದ ತಕ್ಕ ಮಟ್ಟಿಗೆ ಆರ್ಥಿವಾಗಿ ಸಧೃಢರಾಗಿದ್ದಾರೆ. ಜೊತೆಗೆ ಅಸಂಘಟಿತ ಕೃಷಿ ಕಾರ್ಮಿಕರು ಸಹ ಸುಶಿಕ್ಷತರು ಹಾಗೂ ಆಧುನಿಕ ಮನೋಭಾವ ಹೊಂದಿರುವರು. ಇರುವದರಿಂದ ಅಧ್ಯಯನಕ್ಕೆ ಉಪಯುಕ್ತ ಸಹಕಾರ ಹಾಗೂ ಮಾಹಿತಿ ದೊರೆಯುವದೆಂಬ ಪೂರ್ವಚಿಂತನೆ ಈ ಕ್ಷೇತ್ರದ ಆಯ್ಕೆಗೆ ಸಹಕಾರಿಯಾಯಿತು.

1.6 ಮಾದರಿ ನಮೂನೆಯ ಆಯ್ಕೆ

ಈ ಸಂಶೋಧನಾ ಕಾರ್ಯಕ್ಕೆ ಹಾರೂಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಾರೂಗೇರಿ. ಹಾರೂಗೇರಿ ಕ್ರಾಸ. ಬ್ಯಾಕೂಡ ಗ್ರಾಮಗಳನ್ನು ಒಳಗೊಂಡ ೧೨೦ ಜನ ಪ್ರತಿವಾದಿಗಳನ್ನು ಆಯ್ಕೆ

ಮಾಡಿಕೊಂಡಿದ್ದೇನೆ. ಸರಳ ಯಾದೃಚ್ಛಿಕ ವಿಧಾನದ ಮೂಲಕ ವಿವಿಧ ಸ್ತರದ ಸಮುದಾಯದ ವರ್ಗದ ಜನರನ್ನು ನಾನಿಲ್ಲ ಪ್ರತಿಸ್ಪಂದಿಗಳಾಗಿ ಸ್ವೀಕರಿಸಿದ್ದೇನೆ.

1.7 ದತ್ತಾಂಶ ಸಂಗ್ರಹಣಾ ವಿಧಾನ

ಸಂಶೋಧನೆಗೆ ಬೇಕಾಗಿರುವ ದತ್ತಾಂಶಗಳನ್ನು ಸಂಗ್ರಹಣೆ ಮಾಡಲು ಮುಖ್ಯವಾಗಿ ಎರಡು ವಿಧಾನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

1) ಪ್ರಶ್ನಾವಳಿ ವಿಧಾನ.
2) ಸಂದರ್ಶನಾ ವಿಧಾನ.

ಅಧ್ಯಾಯ ೨

ಗ್ರಾಮ ಪಂಚಾಯತಿಯ ರಚನೆ ಹಾಗೂ ಕಾರ್ಯಗಳು

೨.೧ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ "ಒಂದು ಹಿನ್ನೋಟ"

೨.೨ ಗ್ರಾಮ ಪಂಚಾಯತ ಅರ್ಥ –ವ್ಯಾಖ್ಯೆ

೨.೩ ಹಾರೂಗೇರಿ ಗ್ರಾಮ ಪಂಚಾಯತ ಐತಿಹಾಸಿಕ ಹಿನ್ನೆಲೆ

೨.೪ ಗ್ರಾಮ ಪಂಚಾಯತ ರಚನೆ

೨.೫ ಗ್ರಾಮ ಪಂಚಾಯತ ಕಾರ್ಯ ಚಟುವಟಿಕೆಗಳು

ಪೀಠಿಕೆ :

ಗ್ರಾಮ ಪಂಚಾಯತ ವ್ಯವಸ್ಥೆ ಭಾರತೀಯ ಸನ್ನಿವೇಶದಲ್ಲಿ ದೊಡ್ಡ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಸಿಂಧೂ ನಾಗರಿಕತೆಯಿಂದ ಐತಿಹಾಸಿಕ ದಾಖಲೆಹೊಂದಿರುವ ಈ ಗ್ರಾಮ ಆಡಳಿತ ನೀತಿ ತೀರಾ ಇತ್ತೀಚೆಗೆ ವಿಶೇಷವಾಗಿ ಸ್ವಾತಂತ್ರ್ಯಾನಂತರ ಸಾಂವಿಧಾನಿಕ ಅರ್ಹತೆ ಪಡೆಯುವ ಮೂಲಕ ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತಿದೆ.

'ಗ್ರಾಮ ಪಂಚಾಯತಿ' ಹೆಸರೇ ಸೂಚಿಸುವಂತೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮದ ಪ್ರಮುಖ ಐವರು ಸೇರಿ ರಚಿಸಿದ ನ್ಯಾಯ ನಿರ್ಣಯ ವ್ಯವಸ್ಥೆಯೇ ಪಂಚಾಯತ ಆಗಿತ್ತು. ಪಂಚರು ಎಂದರೆ.

ಪರಮೇಶ್ವರನ ಸ್ವರೂಪವೆಂಬ ಭಾವ ಗ್ರಾಮೀಣ ಜನರಲ್ಲಿತ್ತು. ಸಂಘ ಜೀವಿಯಾಗಿ ಬದುಕತೊಡಗಿದ ಮಾನವ ತನ್ನ ಜೀವ ವ್ಯವಸ್ಥೆಗೊಂದು ಕಟ್ಟುಪಾಡನ್ನು ರಚಿಸಿಕೊಂಡ. ಆರಂಭದಲ್ಲಿ ಆಡಳಿತ ಒಂದು ನಿಯಂತ್ರಣವೆಂದು ಭಾವಿಸದೇ ಅಘೋಷಿತ ಶಿಸ್ತಿಗೆ ಒಳಪಟ್ಟು ಕಾಲಾನಂತರ ಈ ಶಿಸ್ತು ಆಡಳಿತ ರೂಪ ಪಡೆದುಕೊಂಡಿತು. ವಿವಿಧ ಸಮೂಹಗಳಾಗಿ ಕಾಡು ಹಾಗೂ ನಾಡಿನಲ್ಲಿ ಬದುಕುತ್ತಿದ್ದ ಮನುಷ್ಯ ತನ್ನಲ್ಲಿಯ ಅವ್ಯವಸ್ಥೆಗೊಂದು ವ್ಯವಸ್ಥೆ ಅಳವಡಿಸಿಕೊಂಡ. ಈ ವ್ಯವಸ್ಥೆಯೇ ಮುಂದೆ ಆಡಳಿತ, ಆಡಳಿತ ಪದ್ಧತಿ ಅಧಿಕಾರ, ಕರ್ತವ್ಯಗಳಾಗಿ ಹೆಸರು ಪಡೆದುಕೊಂಡಿತು. ಈ ಆಡಳಿತವು ಸಾಮಾನ್ಯ ಸಂಘದಿಂದ ಹಿಡಿದು ರಾಷ್ಟ್ರಪತಿಯ ಕಛೇರಿಯವರೆಗೂ ವ್ಯವಸ್ಥೆಗೊಂಡಿತು.

ಭಾರತ ಪರೋಕ್ಷ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಅವರ ಮೂಲಕ ಆಡಳಿತ ನಡೆಸುತ್ತಾರೆ. ಪ್ರಜಾಪ್ರಭುತ್ವವು ರಾಷ್ಟ್ರದ ಕಡೆಯ ಘಟಕವಾದ ಗ್ರಾಮದಲ್ಲಿ ಬೇರೂರಿದಾಗ ಅದು ರಾಷ್ಟ್ರದಲ್ಲಿ ಬಲಿಷ್ಠವಾಗುತ್ತದೆ. ಸ್ಥಳೀಯ ಸರಕಾರಗಳು ಜನರಿಗೆ

ರಾಜಕೀಯ ಪ್ರಜ್ಞೆ, ಜವಾಬ್ದಾರಿಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಸಮಾಜದ ಕೆಳಗಿನ ಹಂತದಿಂದ ಮೇಲಿನ ಹಂತದವರೆಗೂ ಎಲ್ಲಾ ವರ್ಗದ ಜನರೂ ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವದರಿಂದ ರಾಜಕೀಯ ವ್ಯಕ್ತಿಗಳ ಮತ್ತು ಅಧಿಕಾರಿಗಳ ನಿರಂಕುಶತ್ವ ತಡೆಗಟ್ಟಲ್ಪಡುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತವೆ. ಹೀಗಾಗಿ ಗ್ರಾಮಗಳಿಗೆ ಜನರ ಪಾಲ್ಗೊಳ್ಳುವಿಕೆಯ ಮೂಲಕ ಪಂಚಾಯತ ಆಡಳಿತವನ್ನು ಕಾರ್ಯರೂಪಕ್ಕೆ ತರುವ ಯತ್ನ ನಡೆದಿದೆ.

ವಿಶ್ವವ್ಯಾಪಿ ಪ್ರಜೆಗಳಿಗೆ ಆಳ್ವಿಕೆಯ ಹಕ್ಕು ಸುಲಭವಾಗಿ ಸಿಕ್ಕಿಲ್ಲ. ಬಹುತೇಕ ರಾಷ್ಟ್ರಗಳಲ್ಲಿ ಜನರ ನಿರಂತರ ಹೋರಾಟದಿಂದಲೇ ನಿರಂಕುಶ ಪ್ರಭುತ್ವದ ಹಿಡಿತದಿಂದ ಬಿಡುಗಡೆಯಾಗಿ ಪ್ರಜಾಪ್ರಭುತ್ವವನ್ನು ಸಾಧಿಸಿದ್ದಾರೆ. ಈ ನಿಟ್ಟಿನಲ್ಲಿ ಬ್ರಿಟಿಷರ ವಿರುದ್ಧ ನಡೆದ ಭಾರತದ ಸ್ವತಂತ್ರ ಸಂಗ್ರಾಮ ಒಂದು ಮೈಲುಗಲ್ಲು. ಪ್ರಜಾಪ್ರಭುತ್ವದ ಮೂಲತತ್ವವಾದರೂ ಜನರ ಕಲ್ಯಾಣಕ್ಕೆ ನಾಂದಿ ಮಾತ್ರ. ಆದರ ಅಂತಿಮವಾದ ಗುರಿಯಲ್ಲ. ಸ್ವಾತಂತ್ರ್ಯ ಕನಸಾಗಿದ್ದಾಗಲೇ, ಗಾಂಧೀಜಿಯವರು ಈ ಸತ್ಯವನ್ನು ಅರಿತಿದ್ದರು. ಪ್ರಜಾಪ್ರಭುತ್ವಕ್ಕೆ ಅರ್ಥಬರುವದು ಅಂತ್ಯೋದಯದಿಂದ ಮಾತ್ರ ಎಂಬುದು ಅವರ ಕಲ್ಪನೆಯಾಗಿತ್ತು. ಸಮಾಜದಲ್ಲಿ ಶೋಷಿತರು, ದುರ್ಬಲರು ಶಕ್ತರಾಗಬೇಕು. ಆಡಳಿತದಲ್ಲಿ ಜನರು ಸಹ-ಭಾಗಿಗಳಾಗಬೇಕು. ಅಧಿಕಾರ ಜನಸಾಮಾನ್ಯರ ವಶಕ್ಕೆ ಬಂದಾಗ ಮಾತ್ರ ಭಾರತದ ಸ್ವಾತಂತ್ರ್ಯ ಅರ್ಥಪೂರ್ಣವೆಂದು ಗಾಂಧೀಜಿಯವರು ನಂಬಿದ್ದರು. ಅವರ ಕಲ್ಪನೆಯಲ್ಲಿ ಆಡಳಿತ ಸಂಪೂರ್ಣವಾಗಿ

ವಿಕೇಂದ್ರೀಕರಣವಾಗಬೇಕು. ಹಾಗೆಯೇ ಗ್ರಾಮಗಳಿಗೆ ತಮ್ಮನ್ನು ತಾವು ಆಳುವ ಹಕ್ಕು ದೊರೆಯಬೇಕು. ಇದೇ ಪ್ರಜಾಪ್ರಭುತ್ವದ ನಿಜವಾದ ಚಿನ್ಹೆ. ಗಾಂಧೀಜಿಯವರ ಕಲ್ಪನೆಯ ಬುನಾದಿಯೆಂದರೆ, – "ಭಾರತದ ಪಂಚಾಯತ ಪರಂಪರೆ. ಅದು ಗ್ರಾಮದ ಆಡಳಿತದ ವತಿಯಿಂದ ನಡೆಯುತ್ತದೆ. ಪಂಚಾಯತಿಯಲ್ಲಿ 5 ಜನ ಚುನಾಯಿತ ಸದಸ್ಯರು ಇರುತ್ತಾರೆ. ಮಹಿಳೆಯರು ಹಾಗೂ ಪುರುಷರು ಇವರು ಕನಿಷ್ಠ ಅರ್ಹತೆಯನ್ನು ಪಡೆದಿರುತ್ತಾರೆ. ಪಂಚಾಯತ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕರ್ತವ್ಯಗಳನ್ನು ನಿರ್ವಹಿಸುತ್ತದೆ. ಇವರ ಕಾಲಾವಧಿ ಒಂದು ವರ್ಷ. ಪ್ರಸ್ತುತ ನಾವು ಒಪ್ಪಿಕೊಂಡಿರುವ ದಂಡನೀತಿ ಇಲ್ಲಿರುವದಿಲ್ಲ. ಪ್ರತಿಗ್ರಾಮವೂ ಒಂದು ಗಣರಾಜ್ಯವಾಗುವ ಸಾಧ್ಯತೆ ಇದೆ. ಈಗಿನ ಸರಕಾರ ಗ್ರಾಮದೊಡನೆ ಸ್ಪಂದಿಸುವುದು ಕಂದಾಯ ವಸೂಲಿಗೆ ಮಾತ್ರ. ಈ ಅನವಶ್ಯಕ ಮಧ್ಯಸ್ಥಿಕೆಯಿಲ್ಲದೇ ಗ್ರಾಮವು ಗಣರಾಜ್ಯವಾಗಿ ಬೆಳೆಯಬಹುದು." **(ಪ್ರೊ. ಜಿ. ಶಿವರುದ್ರಪ್ಪ – ಪ್ರಜೆಗಳೇ ಪ್ರಭುಗಳು.)**

ಭಾರತದ ಸಂವಿಧಾನದಲ್ಲಿ 40ನೇ ವಿಧಿ ಸೇರ್ಪಡೆಯಾಗಿದ್ದು, ಗಾಂಧೀಜಿಯವರ ಚಿಂತನೆಯ ಪ್ರಭಾವದಿಂದ. ಗ್ರಾಮಗಳಲ್ಲಿ ಪಂಚಾಯತಿಯ ವ್ಯವಸ್ಥೆಯನ್ನು ನಿರ್ಮಾಣಮಾಡಿ ಅವುಗಳಿಗೆ ಅಧಿಕಾರ

ಮತ್ತು ಸ್ವಯಂ ಆಡಳಿತ ನಿರ್ವಹಿಸುವ ಶಕ್ತಿಯನ್ನು ನೀಡುವಂತೆ ಸರ್ಕಾರ ಕ್ರಮ ಕೈಕೊಳ್ಳತಕ್ಕದ್ದು ಎಂಬ ಕನಸು ಪ್ರಸ್ತುತ ಗ್ರಾಮ ಪಂಚಾಯತಿಯ ಮೂಲಕ ಸಾಕಾರವಾಗಿದೆ.

2.1 ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ : ಒಂದು ಹಿನ್ನೋಟ

1983ರ ವರ್ಷದಲ್ಲಿ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಕ್ಷೇತ್ರದಲ್ಲಿ ಆಡಳಿತ ವಿಕೇಂದ್ರೀಕರಣ ಕಕ್ಷೆಗೆ ಮೂಲಕವಾಗಿ ಮಹತ್ವದ ಬದಲಾವಣೆಗಳಾದವು. ಅದುವರೆಗೆ ಅಸ್ತಿತ್ವದಲ್ಲಿದ್ದ "ಮೈಸೂರು ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳ ಶಾಸನ-1959"ಕ್ಕೆ ಬಹಳ ಮುಖ್ಯವಾದ ತಿದ್ದುಪಡಿಗಳನ್ನು ತಂದು ಅದನ್ನು ಅನುಷ್ಠಾನಕ್ಕೆ ತರಲಾಯಿತು.

1983ರಲ್ಲಿ ಕರ್ನಾಟಕದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ "ಜನತಾ ಪಕ್ಷ" ಸರ್ಕಾರವು ಗ್ರಾಮಾಭಿವೃದ್ಧಿ ಸಚಿವ ಅಬ್ದುಲ್ ನಜೀರ್‌ಸಾಬ್‌ರವರು ವಹಿಸಿದ ಆಸಕ್ತಿ, ಮಾಡಿದ ಅಧ್ಯಯನ ಹಾಗೂ ಸಂಗ್ರಹಿಸಿದ್ದ ಮಾಹಿತಿಯ ಹಿನ್ನೆಲೆಯಲ್ಲಿ ಹೊಸ ಪಂಚಾಯತಿ ಮಸೂದೆಯನ್ನು ರೂಪಿಸಿತು. ಈ ಹೊಸ ಕಾಯ್ದೆಯು "ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಕಾಯಿದೆ-1983" ಆಗಿ 1984ರಲ್ಲಿ ಅಂಗೀಕೃತವಾಗಿ 1985ರಲ್ಲಿ ರಾಷ್ಟ್ರಪತಿಗಳ ಒಪ್ಪಿಗೆ ಪಡೆದು ಜಾರಿಗೆ ಬಂದಿತು.

1985ರಲ್ಲಿ ಜಿಲ್ಲಾ ಪಂಚಾಯತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಚುನಾವಣೆಗಳು ನಡೆದು ಗ್ರಾಮಾಂತರ ಸ್ವಯಂ ಆಡಳಿತ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಆದರೆ ರಾಮಕೃಷ್ಣ ಹೆಗಡೆಯವರ ಸರ್ಕಾರದ ಪತನದ ಅಧಿಕಾರಕ್ಕೆ ಬಂದ ಕಾಂಗ್ರೆಸ್(ಐ) ಪಕ್ಷವು ಸ್ವಯಂ ಆಡಳಿತ ಸಂಸ್ಥೆಗಳಿಗೆ ಬೆಂಬಲ ನೀಡದೇ ಇದ್ದುದರಿಂದ 1983ರ ಕಾಯ್ದೆ ನಿರುಪಯುಕ್ತವಾಯಿತು. ಒಂದು ಹಂತದಲ್ಲಿ ವಿಫಲವಾಗಿದ್ದರೂ, ಕರ್ನಾಟಕದ ಉದಾಹರಣೆ ಮಾತ್ರ ಇತರ ರಾಜ್ಯಗಳಿಗೊಂದು ಮಾದರಿಯಾಯಿತು. ಕೇಂದ್ರ ಸರ್ಕಾರ ಕೂಡ ಈ ಮಾದರಿಯಿಂದ ಸ್ಫೂರ್ತಿಗೊಂಡು 1993ರಲ್ಲಿ ಸಂವಿಧಾನಕ್ಕೆ ತಿದ್ದುಪಡಿಯೊಂದನ್ನು ತರುವುದರ ಮೂಲಕ ಪಂಚಾಯತ್ ರಾಜ್ ಸಂಸ್ಥೆಗೆ ಸಾಂವಿಧಾನಿಕ ಅಂತಸ್ತನ್ನು ನೀಡುವಲ್ಲಿ ಸಫಲವಾಯಿತು. ಸಂವಿಧಾನದ 73ನೇ ತಿದ್ದುಪಡಿಯ ನಂತರ ಕರ್ನಾಟಕವೂ ಕೂಡ ಅಧಿಕಾರದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಅವಕಾಶ ಮಾಡಿಕೊಡುವಸಲುವಾಗಿ "ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ-1993"ನ್ನು ಅಳವಡಿಸಿಕೊಂಡಿತು. 1983ರ ಹಳೆಯ ಕಾಯ್ದೆಯು "ಜಿಲ್ಲಾ ಪರಿಷತ್" ಮತ್ತು "ಮಂಡಲ ಪಂಚಾಯತಿ"ಗಳೆಂಬ ಎರಡು ಸ್ತರಗಳನ್ನು ಮಾತ್ರ ಹೊಂದಿದ್ದರೆ 1993ರ ಕಾಯ್ದೆಯು 73ನೇ ತಿದ್ದುಪಡಿಯ ಪರಿಣಾಮವಾಗಿ 3 ಸ್ತರಗಳನ್ನು ಹೊಂದಿದೆ.

i) ಗ್ರಾಮ ಪಂಚಾಯತಿ
ii) ತಾಲೂಕು ಪಂಚಾಯತಿ
iii) ಜಿಲ್ಲಾ ಪಂಚಾಯತಿ

2.2 ಗ್ರಾಮ ಪಂಚಾಯತಿಯ ಅರ್ಥ ಮತ್ತು ವ್ಯಾಖ್ಯೆ

ಶ್ರೀ ಸಿ.ಎನ್.ಶಂಕರರಾವರವರ ಪ್ರಕಾರ :-

- ಪಂಚಾಯತ ಎಂಬ ಪದದ ಅರ್ಥ : "ಗ್ರಾಮದ ಜನರಿಂದ ಚುನಾಯಿತರಾದ ಐವರು ಹಿರಿಯ ಅನುಭವಿ ವ್ಯಕ್ತಿಗಳ ಸಮಿತಿಯೇ ಪಂಚಾಯತ. "ಪಂಚಾಯತಿ ಎಂದರೆ, ಐವರ ಸಮಿತಿ ಎಂದು ಹೇಳಬಹುದು."

- ಆಧುನಿಕ ಅರ್ಥದಲ್ಲಿ ಪಂಚಾಯತ ರಾಜ್ ಎಂಬ ಪರಿಕಲ್ಪನೆಯು "ಸ್ಥಳೀಯ ಸ್ಥರಗಳಲ್ಲಿ ಕಾನೂನು ಕಾಯ್ದೆಗಳಿಗೆ ಬದ್ಧವಾದ ಹಾಗೂ ಸ್ವಯಂ ಅಧಿಕಾರವುಳ್ಳ ಪ್ರಜಾಸತ್ತಾತ್ಮಕ ಸಂಸ್ಥೆಗಳ ರಚನೆ ಹಾಗೂ ಕಾರ್ಯವಿಧಾನವನ್ನು ಸೂಚಿಸುವುದು."

- ಸರಳ ಅರ್ಥದಲ್ಲಿ "ಸ್ವಯಂ ಆಡಳಿತ ಗ್ರಾಮೀಣ ಸ್ಥಳೀಯ ಘಟಕಗಳನ್ನು ಭಾರತೀಯ ಸನ್ನಿವೇಶದಲ್ಲಿ ಪ್ರಜಾಸತ್ತಾತ್ಮಕ. ವಿಕೇಂದ್ರೀಕರಣದ ಘಟಕಗಳು ಅಥವಾ ಪಂಚಾಯತ ರಾಜ್" ಎಂದು ಹೇಳಬಹುದು.

- ಗ್ರಾಮ ಪಂಚಾಯತಿಯ ಸರಳ ವ್ಯಾಖ್ಯೆ : "ಒಂದು ಸ್ಥಳೀಯ ಸ್ವಯಂ ಆಡಳಿತದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಪ್ರಜಾಸತ್ತಾತ್ಮಕವಾಗಿ ರೂಪಿತವಾದ ಗ್ರಾಮೀಣ ಹಂತದ ಆಡಳಿತಾತ್ಮಕ ಘಟಕವನ್ನು ಗ್ರಾಮಪಂಚಾಯತ ಎಂದೆನ್ನಬಹುದು."

2.3 ಹಾರೂಗೇರಿ ಗ್ರಾಮ ಪಂಚಾಯತ ಐತಿಹಾಸಿಕ ಹಿನ್ನೆಲೆ.

ಹಾರೂಗೇರಿ ಗ್ರಾಮವು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನಲ್ಲಿ ಇದ್ದು. ಇದು ಕರ್ನಾಟಕದ ಅತೀ ದೊಡ್ಡ ಗ್ರಾಮ ಪಂಚಾಯತಿ ಎಂಬ ಅಗ್ಗಳಿಕೆಯನ್ನು ಹೊಂದಿದೆ. 15 ವಾರ್ಡುಗಳು, 72 ಪಂಚಾಯತಿ ಸದಸ್ಯರು. ಹಾಗೂ 17.000 ಮತದಾರರನ್ನು ಹೊಂದಿದೆ. ಗ್ರಾಮ ಪಂಚಾಯತಿ ವ್ಯವಸ್ಥೆಗಿಂತ ಮುಂಚೆ ಇದು ದೊಡ್ಡ ಮಂಡಲ ಪಂಚಾಯತಿಯನ್ನೂ ಕೂಡ ಹೊಂದಿತ್ತು ಎಂಬುದು ವಿಶೇಷ ಸಂಗತಿ. ರಾಯಬಾಗ ತಾಲೂಕಿನಲ್ಲಿ ಅತೀ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ ಈ ಗ್ರಾಮ 1993ರ ಪಂಚಾಯತ ರಾಜ್ ಅಧಿನಿಯಮದನ್ವಯ ಗ್ರಾಮ ಪಂಚಾಯತಿಯ ವ್ಯವಸ್ಥೆಯನ್ನು ಇಲ್ಲಿ ಅಳವಡಿಸಲಾಯಿತು. ಆರಂಭದಲ್ಲಿ 56 ಸದಸ್ಯರನ್ನು ಒಳಗೊಂಡಿದ್ದ ಇದು ಅವಶ್ಯಕತೆಗೆ

ಅನುಗುಣವಾಗಿ ಸದ್ಯಕ್ಕೆ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಹೊಂದಿದೆ. ಗ್ರಾಮೀಣಾಭಿವೃದ್ಧಿಯಲ್ಲಿ ತನ್ನದೇ ಆದ ವಿಶಿಷ್ಟ ಯೋಜನೆಗಳ ಮೂಲಕ ಗಮನ ಸೆಳೆದಿದೆ.

2.4 ಗ್ರಾಮ ಪಂಚಾಯತ ರಚನೆ

1993 ಪಂಚಾಯತ್ ರಾಜ್ ಅಧಿನಿಯಮದನ್ವಯ ಅಧ್ಯಾಯ 3 ರಲ್ಲಿ ವಿವರಿಸಿದಂತೆ ಗ್ರಾಮ ಪಂಚಾಯತಿಯ ರಚನೆ ಪ್ರಕ್ರಿಯೆ ಈ ರೀತಿ ಇದೆ.

ಪಂಚಾಯತಿ ಪ್ರದೇಶದ ಘೋಷಣೆ ಮತ್ತು ಗ್ರಾಮ ಪಂಚಾಯತಿಗಳ ಸ್ಥಾಪನೆ.

(1) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಅವರು ಐದುಸಾವಿರಕ್ಕಿಂತ ಕಡಿಮೆ ಇಲ್ಲದ ಮತ್ತು ಏಳು ಸಾವಿರಕ್ಕೆ ಹೆಚ್ಚಿಗೆ ಇಲ್ಲದ ಜನಸಂಖ್ಯೆಯನ್ನುಳ್ಳ

ಒಂದು ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸಬಹುದು. ಮೊದಲೇ ಪ್ರಕಟಣೆ ಹೊರಡಿಸಿದ ತರುವಾಯ ಅಂಥ ಪ್ರದೇಶವನ್ನು ಪಂಚಾಯಿತಿ ಪ್ರದೇಶವೆಂದು ಈ ಅಧಿನಿಯಮದ ಉದ್ದೇಶಗಳಿಗಾಗಿ ಘೋಷಿಸಬಹುದು ಮತ್ತು ಅದರ ಕೇಂದ್ರ ಕಾರ್ಯಸ್ಥಾನವನ್ನು ಕೂಡ ನಿಗದಿಪಡಿಸಬಹುದು.

ಆದರೆ, ಸರ್ಕಾರವು, ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಹಾವೇರಿ, ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ಎರಡು ಸಾವಿರದ ಐನೂರಕ್ಕಿಂತ ಕಡಿಮೆಯಲ್ಲದ ಜನಸಂಖ್ಯೆಯುಳ್ಳ ಪ್ರದೇಶವನ್ನು ಪಂಚಾಯಿತಿ ಪ್ರದೇಶವೆಂದು ಘೋಷಿಸಬಹುದೆಂದು ಆದೇಶಿಸಬಹುದು:

ಅಷ್ಟೇ ಅಲ್ಲದೇ, ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ, ಅವಶ್ಯಕ ಎಂದು ಕಂಡುಬರುವಲ್ಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು, ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ಐದು ಕಿಲೋಮೀಟರುಗಳ ತ್ರಿಜ್ಯದ (ಹತ್ತು ಕಿಲೊಮೀಟರುಗಳ ವ್ಯಾಸದ) ಒಳಗಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸಬಹುದೆಂದು ಆದೇಶಿಸಬಹುದು: ಅದೂ ಅಲ್ಲದೆ, ಡೆಪ್ಯುಟಿ ಕಮಿಷನರ್ ಅವರು, ಸರ್ಕಾರದ ಅನುಮತಿಯನ್ನು ಪಡೆದು ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಅಥವಾ

ಏಳು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಪಂಚಾಯಿತಿ ಪ್ರದೇಶವೆಂದು ಘೋಷಿಸಬಹುದು.

(2) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಡೆಪ್ಯುಟಿ ಕಮೀಷನರ್ ಅವರು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ವಿನಂತಿಯ ಮೇಲೆ ಅಥವಾ ಅನ್ಯಥಾ ಮತ್ತು ಅಧಿಸೂಚನೆಯ ಮೂಲಕ ಪ್ರಸ್ತಾವವನ್ನು ಮೊದಲೇ ಪ್ರಕಟಿಸಿದ ತರುವಾಯ, ಯಾವುದೇ ಸಮಯದಲ್ಲಿ-

(ಎ) ಯಾವುದೇ ಪಂಚಾಯಿತಿ ಪ್ರದೇಶವನ್ನು ಅಂಥ ಪಂಚಾಯಿತಿ ಪ್ರದೇಶದೊಳಗೆ ಯಾವುದೇ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಸೇರಿಸುವ ಮೂಲಕ ಹೆಚ್ಚಿಸಬಹುದು:

(ಬಿ) ಯಾವುದೇ ಪಂಚಾಯಿತಿ ಪ್ರದೇಶವನ್ನು ಅಂಥ ಪಂಚಾಯಿತಿ ಪ್ರದೇಶದಿಂದ ಯಾವುದೇ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಹೊರತುಪಡಿಸುವ ಮೂಲಕ ಕಡಿಮೆ ಮಾಡಬಹುದು:

(ಸಿ) ಯಾವುದೇ ಪಂಚಾಯತಿ ಪ್ರದೇಶದ ಕೇಂದ್ರ ಕಾರ್ಯಸ್ಥಾನವನ್ನು ಬದಲಾಯಿಸಬಹುದು:

(ಡಿ) ಯಾವುದೇ ಪಂಚಾಯಿತಿ ಪ್ರದೇಶದ ಹೆಸರನ್ನು ಬದಲಾಯಿಸಬಹುದು: ಅಥವಾ

(ಇ) ಯಾವುದೇ ಪಂಚಾಯತಿ ಪ್ರದೇಶವನ್ನು ಅದು ಪಂಚಾಯತಿ ಪ್ರದೇಶವಾಗಿರುವುದು ನಿಂತು ಹೋಗತಕ್ಕದ್ದೆಂದು ಘೋಷಿಸಬಹುದು.

(3) ಕಮಿಷನರ್ ಅವರು, ಅಂಥ ಅಧಿಸೂಚನೆಯಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಧಿಸೂಚನೆಯ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ ಮಾಡಿಕೊಂಡ ಅರ್ಜಿಯ ಮೇಲಾಗಲೀ ಅಥವಾ ತಾನಾಗಿಯೇ ಆಗಲಿ ಮತ್ತು ಅರ್ಜಿದಾರನಿಗೆ ಅಥವಾ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿನ ಡೆಪ್ಯೂಟಿ ಕಮಿಷನರ್ ಅವರ ಆದೇಶಗಳನ್ನು ಪರಿಷ್ಕರಿಸಬಹುದು: ಮತ್ತು ಅವರು, ಅವಶ್ಯಕ ಎಂದು ಪರ್ಯಾಲೋಚಿಸಿದರೆ (1)ನೇ ಉಪ- ಪ್ರಕರಣದ ಮೂರನೇ ಆದೇಶದಲ್ಲಿ ಹೇಳಿರುವಂತೆ ಅದನ್ನು ಮಾರ್ಪಾಟು ಸಹ ಮಾಡಬಹುದು. ಡೆಪ್ಯುಟಿ ಕಮಿಷನರ್ ಅವರ ಆದೇಶವನ್ನು ಪರಿಷ್ಕರಿಸಿ ಅಥವಾ ಮಾರ್ಪಾಟು ಮಾಡಿ ಹಾಗೆ ಮಾಡಿದ ಪ್ರತಿಯೊಂದು ಆದೇಶವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಹಾಗೆಂದು ಘೋಷಿಸಿದ ಪ್ರತಿಯೊಂದು ಪಂಚಾಯತಿ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯನ್ನು ಸ್ಥಾಪಿಸತಕ್ಕದ್ದು.

ಗ್ರಾಮ ಪಂಚಾಯಿತಿ ರಚನೆ

(1) ಪಂಚಾಯತಿ ಪ್ರದೇಶ ಜನಸಂಖ್ಯೆಯ ಪ್ರತಿ ನಾಲ್ಕು ನೂರು ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ, ರಾಜ್ಯ ಚುನಾವಣಾ ಆಯೋಗವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು ಗ್ರಾಮ ಪಂಚಾಯಿತಿಯು ಹೊಂದಿರತಕ್ಕದ್ದು: ಆದರೆ, ಮೇಲೆ ಹೇಳಿದಂತೆ ನಿರ್ಧರಿಸಿರುವ ಸಂಖ್ಯೆಯು ಆಗ ಅಧಿಕಾರದಲ್ಲಿದ್ದ ಚುನಾಯಿತ ಸದಸ್ಯರ ಹುದ್ದೆಯ ಅವಧಿಯು ಮುಕ್ತಾಯವಾಗುವವರೆಗೆ, ಗ್ರಾಮ ಪಂಚಾಯಿತಿಯ ಆಗಿನ ರಚನೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಸ್ಥಾನಗಳನ್ನು ರಾಜ್ಯ ಚುನಾವಣ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು ಡೆಪ್ಯೂಟಿ ಕಮಿಶನರ್ ಮೀಸಲಿರಿಸತಕ್ಕದ್ದು ಗ್ರಾಮ ಪಂಚಾಯಿತಿಯಲ್ಲಿ.

(ಎ) ಅನುಸೂಚಿತ ಜಾತಿಗಳಿಗಾಗಿ: ಮತ್ತು

(ಬಿ) ಅನುಸೂಚಿತ ಪಂಗಡಗಳಿಗಾಗಿ

ಮತ್ತು ಪಂಚಾಯತಿ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಸಂಖ್ಯೆಯು ಯಾವ ಅನುಪಾಡದಲ್ಲಿದೆಯೋ ಹಾಗೆ ಮೀಸಲಿಡಲಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು: ಆದರೆ, ಪ್ರತಿ ಗ್ರಾಮ ಪಂಚಾಯತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಟ ಒಂದೊಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು: ಮತ್ತು ಆದರೆ, ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡತಕ್ಕದ್ದು.

(3) ಗ್ರಾಮ ಪಂಚಾಯತಿಯ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಪ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮಿಷನರ್ ಮೀಸಲಿರಿಸತಕ್ಕದ್ದು: ಆದರೆ, ಈ ಉಪ--ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿನ ಶೇಕಡ ಎಂಬತ್ತರಷ್ಟು ಸ್ಥಾನಗಳನ್ನು ಎ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಪ ಆದೇಶಕ್ಕೆ

ಒಳಪಟ್ಟು, ಡಿಪ್ಯುಟಿ ಕಮಿಷನರ್ ಮೀಸಲಿರಿಸತಕ್ಕದ್ದು; ಮತ್ತು ಉಳಿದ ಶೇಕಡ ಇಪ್ಪತ್ತರಷ್ಟು ಸ್ಥಾನಗಳನ್ನು ಬಿ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮಿಷನರ್ ಮೀಸಲಿರಿಸತಕ್ಕದ್ದು: ಮತ್ತು ಆದರೆ ಎ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು ಬಿ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು. ಹಾಗೆಯೇ ಬಿ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು ಎ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(4) ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ, ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಸ್ಥಾನಗಳಲ್ಲಿ ಮತ್ತು ಮೀಸಲಿಟ್ಟಿರುವ ಸ್ಥಾನಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡಿಪ್ಯುಟಿ ಕಮಿಷನರ್ ಮೀಸಲಿರಿಸತಕ್ಕದ್ದು: ಆದರೆ, (2),(3) ಮತ್ತು (4)ನೇ ಉಪ-ಪ್ರಕರಣಗಳ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳನ್ನು ಪಂಚಾಯಿತಿ ಪ್ರದೇಶದಲ್ಲಿನ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿ ಪ್ರಕಾರ ಹಂಚಿಕೆ ಮಾಡತಕ್ಕದ್ದು. ಅಷ್ಟೇ ಅಲ್ಲದೆ, ಈ ಪ್ರಕರಣದಲ್ಲಿರುವುದು ಯಾವುದೋ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಅಥವಾ ಹಿಂದುಳಿತ ವರ್ಗಗಳ ವ್ಯಕ್ತಿಗಳಿಗಾಗಿ ಗ್ರಾಮ ಪಂಚಾಯತಿಯಲ್ಲಿ ಮೀಸಲಿಡಿಸಿಲ್ಲದ ಯಾವುದೇ ಸ್ಥಾನಗಳಿಗೆ ಚುನಾವಣೆಗೆ ನಿಲ್ಲದಂತೆ ತಡೆಯುಂಟು ಮಾಡುತ್ತದೆಯೆಂದು ಭಾವಿಸತಕ್ಕದ್ದಲ್ಲ.

(5) (2),(3) ಮತ್ತು (4)ನೇ ಉಪ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಹಾಗೂ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮಿಷನರ್ ಅಧಿಸೂಚನೆಯ ಮೂಲಕ.-

(ಎ) ಪ್ರತಿಯೊಂದು ಗ್ರಾಮ ಪಂಚಾಯತಿಗೆ ಚುನಾವಣೆ ನಡೆಸುವ ಉದ್ದೇಶದಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶವನ್ನು ವಿಶೇಷ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಬಹುದೆಂಬುದನ್ನು;

(ಬಿ) ಪ್ರತಿಯೊಂದು ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು;

(ಸಿ) ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಅನುಸೂಚಿತ ಜಾತಿಗಳಿಗಾಗಿ ಮತ್ತು ಅನುಸೂಚಿತ ಪಂಗಡಗಳಾಗಿ ಮತ್ತು ಹಿಂದುಳಿದ ವರ್ಗಗಳಿಗಾಗಿ ಅಥವಾ ಮಹಿಳೆಯರಿಗಾಗಿ ಸ್ಥಾನಗಳನ್ನೇನಾದರೂ ಮೀಸಲಿರಿಸಿದ್ದರೆ ಅವುಗಳ ಸಂಖ್ಯೆ ಎಷ್ಟು ಎಂಬುದನ್ನು;

(ಡಿ) ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೂ ಎಷ್ಟು ಸ್ಥಾನಗಳನ್ನು ಹಂಚಬೇಕೆಂಬುದನ್ನು ಅದು ಒಂದೇ ಅಥವಾ ಅದಕ್ಕೂ ಹೆಚ್ಚೇ ಎಂಬುದನ್ನು, ನಿರ್ಧರಿಸತಕ್ಕದ್ದು.

(6) ಯಾವುದೇ ಕಾರಣದಿಂದ ಗ್ರಾಮ ಪಂಚಾಯತಿಗೆ ನಡೆದ ಚುನಾವಣೆಯಲ್ಲಿ (1) ನೇ ಉಪ-ಪ್ರಕರಣದಲ್ಲಿ ನಿಗದಿಪಡಿಸಿದಂತೆ ಅಗತ್ಯಪಡಿಸಿದಷ್ಟು ಸಂಖ್ಯೆಯ ಸದಸ್ಯರು ಚುನಾಯಿತರಾಗದಿದ್ದರೆ, ಡೆಪ್ಯುಟಿ ಕಮಿಷನರ್(8) ನೇ ಉಪ-ಪ್ರಕರಣದ ಮೇರೆಗೆ ತಾನು ಚುನಾಯಿತಿ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಗಾಗಿ, ಅಗತ್ಯ ಪಡಿಸಿರುವಷ್ಟು ಸಂಖ್ಯೆಯ ಸದಸ್ಯರ ಚುನಾವಣೆಗಾಗಿ ಮತ್ತೊಂದು ಚುನಾವಣೆಗೆ ವ್ಯವಸ್ಥೆ ಮಾಡತಕ್ಕದ್ದು.

(7) (1) ಮತ್ತು 6ನೇ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ಆದರೆ, ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶಿಷ್ಟ ಆದೇಶಗಳಿಗೆ ಒಳಪಟ್ಟ, ಯಾವುದೇ ಗ್ರಾಮ ಪಂಚಾಯಿತಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡು ಭಾಗದಷ್ಟು ಸದಸ್ಯರು ಚುನಾಯಿತರಾಗಿರುವಲ್ಲಿ, ಆ ಗ್ರಾಮ ಪಂಚಾಯತಿಯು ಈ ಅಧಿನಿಯಮದ ಅಡಿಯಲ್ಲಿ ಕ್ರಮಬದ್ಧವಾಗಿ ರಚಿತವಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(8) ಡೆಪ್ಯುಟಿ ಕಮಿಷನರ್, ಚುನಾಯಿತರಾದ ಸದಸ್ಯರ ಅಥವಾ ಕ್ರಮಬದ್ಧವಾಗಿ ಚುನಾಯಿತರಾಗಿರುವುದರಿಂದ ಭಾವಿಸಲಾದ ಸದಸ್ಯರ ಹೆಸರುಗಳನ್ನು ಗೊತ್ತುಪಡಿಸಿರುವ ರೀತಿಯಲ್ಲಿ ಪ್ರಕಟಿಸತಕ್ಕದ್ದು.

ಗ್ರಾಮ ಪಂಚಾಯತಿಯನ್ನು ನಿಗಮಿತಗೂಳಿಸುವುದು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರನ್ವಯ ಪಂಚಾಯತಿಯನ್ನು ಈ ಕೆಳಗಿನಂತೆ ನಿಗಮಿತಗೊಳಿಸಬಹುದು.

ಪ್ರತಿಯೊಂದು ಗ್ರಾಮ ಪಂಚಾಯತಿಯು __ ಗ್ರಾಮ ಪಂಚಾಯತಿ ಎಂಬ ಹೆಸರಿನ ನಿಗಮ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಿರುವಂಥ ನಿರ್ಬಂಧಗಳಿಗೆ ಒಳಪಟ್ಟು, ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ ಮತ್ತು ಅಧಿಕಾರಿ ವ್ಯಾಪ್ತಿಯನ್ನು ಹೊಂದಿರುವಂಥ

ಪ್ರದೇಶದ ಪರಿಮಿತಗಳ ಹೊರಗೆ ಆಗಲಿ ಅಥವಾ ಒಳಗೆ ಆಗಲಿ ಚರ ಅಥವಾ ಸ್ಥಿರ ಸ್ವತ್ತನ್ನು ಅರ್ಜಿಸುವ, ಧಾರಣ ಮಾಡುವ ಮತ್ತು ವರ್ಗಾವಣೆ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ ಮತ್ತು ಅದನ್ನು ರಚಿಸಲಾಗಿರುವಂಥ ಉದ್ದೇಶಗಳಿಗೆ ಅವಶ್ಯವಾದ, ಸರಿಕಂಡ ಅಥವಾ ವಿಹಿತವಾದ ಎಲ್ಲ ಕಾರ್ಯಗಳನ್ನು ಮಾಡುವ ಸಾಮರ್ಥ್ಯವು ಅದರಲ್ಲಿ ನಿಹಿತವಾಗಿರತಕ್ಕದ್ದು.

ಗ್ರಾಮ ಪಂಚಾಯತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದಲ್ಲಿ ಆಡಳಿತಾಧಿಕಾರಿಯ ನೇಮಕ

(1) (ಎ) ಡೆಪ್ಯುಟಿ ಕಮಿಷನರ್ ಅವರಿಗೆ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಿದ ತರುವಾಯ ಕೂಡಲೇ ಗ್ರಾಮಕ್ಕಾಗಿ ಅಥವಾ ಗ್ರಾಮಗಳ ಗುಂಪಿಗಾಗಿ ಗ್ರಾಮ ಪಂಚಾಯತಿಯನ್ನು,-

(ಬಿ) ಗ್ರಾಮ ಪಂಚಾಯಿತಿಯ ಸದಸ್ಯರ ಚುನಾವಣೆಯನ್ನು ನಡೆಸುವುದಕ್ಕೆ ಯಾವುದೇ ತೊಂದರೆಯ ಕಾರಣದಿಂದಾಗಿ: ಅಥವಾ

(ಸಿ) 5ನೇ ಉಪ-ಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮ ಚುನವಣೆಗಳಲ್ಲಿ ಅಂಥ ಸದಸ್ಯರನ್ನು ಚುನಾಯಿಸಲು ವಿಫಲವಾಗಿರುವ ಕಾರಣದಿಂದಾಗಿ: ಅಥವಾ

(ಡಿ) ಇತರ ಯಾವುದೇ ಸಾಂದರ್ಭಿಕ ಕಾರಣದಿಂದಾಗಿ, ಅದೇನೆ ಇರಲ್ಲಿ ರಚಿಸಲು ಸಾಧ್ಯವಿಲ್ಲವೆಂದು ಮನದಟ್ಟಾದರೆ: ಅಥವಾ

(ಇ) ಗ್ರಾಮ ಪಂಚಾಯತಿಗೆ ಯಾವುದೇ ಸಾರ್ವತ್ರಿಕ ಚುನಾವಣೆಯಲ್ಲಿ ಯಾವನೇ ಸದಸ್ಯನು ಚುನಾಯಿತನಾಗದಿದ್ದರೆ ಅಥವಾ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ: ಡೆಪ್ಯುಟಿ ಕಮಿಷನರ್ ಅವರು, ಅಧಿಸೂಚನೆಯ ಮೂಲಕ,-

(ಎ) ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು. ಅಂಥ ವ್ಯಕ್ತಿಗಳ ಸಂಖ್ಯೆಯು 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವ ಸದಸ್ಯರ ಸಂಖ್ಯೆಗೆ ಸಮನಾಗಿರತಕ್ಕದ್ದು: ಅಥವಾ

(ಬಿ) ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

(2) ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗೆ, ಅಧಿಸೂಚನೆಯಲ್ಲಿ, ಡೆಪ್ಯುಟಿ ಕಮಿಷನರ್ ಅವರು ನಿಗದಿಪಡಿಸಿದ ಪಡಿಸಬಹುದಾದಂತ ಆರು ತಿಂಗಳು ಮೀರದಂಥ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ, ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ನೇಮಕಗೊಂಡಾಗ, ಅಂಥ ನೇಮಕಕ್ಕೆ ಮುಂಚೆ, ಗ್ರಾಮ ಪಮಚಾಯತಿಯ ಸದಸ್ಯರಾಗಿ ಆಯ್ಕೆಯಾಗಿದ್ದ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರು ಗ್ರಾಮ ಪಂಚಾಯತಿಯ ಸದಸ್ಯರಾಗಿರುವದು ನಿಂತುಹೋಗತಕ್ಕದ್ದು ಮತ್ತು ಆ ಗ್ರಾಮ ಪಂಚಾಯತಿಯ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಂಥ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೇರವೇರಿಸತಕ್ಕದ್ದು.

(4) ಆಡಳಿತ ಸಮಿತಿಯನ್ನು ಅಥವಾ ಆಡಳಿತಾಧಿಕಾರಿಯನ್ನು, ಈ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದರೊ, ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಭದ್ದವಾಗಿ ರಚಿಸಿದ ಗ್ರಾಮ ಪಂಚಾಯಿತಿ ಎಂದು ಭಾವಿಸತಕ್ಕದ್ದು. ಆದರೆ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಆಡಳಿತ ಅಥವಾ ಆಡಳಿತಾಧಿಕಾರಯು ನೇಮಕಗೊಂಡ ತರುವಾಯ ಯಾವುದೇ ಸಮಯದಲ್ಲಿ ಡೆಪ್ಯುಟಿ ಕಮಿಷನರ್ ಅವರಿಗೆ, ಸದಸ್ಯರ ಚುನಾವಣೆ ಮೂಲಕ ಗ್ರಾಮ ಪಂಚಾಯಿತಿಯನ್ನು ಕ್ರಮಬದ್ದವಾತಿ ರಚಿಸಲು ಯಾವುದೇ ತೊಂದರೆಯಿಲ್ಲವೆಂದು ಮನದಟ್ಟಾದರೆ, ಡೆಪ್ಯುಟಿ ಕಮಿಷನರ್ ಅವರು, ಯಾವ ಪದಾವಧಿಗಾಗಿ ಆಡಳಿತ ಸಮಿತಿಯ ಸದಸ್ಯರನ್ನು ಅಥವಾ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿತ್ತೋ ಆ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿಗದಿಪಡಿದ ಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಸಂದರ್ಭಾನುಸಾರ, ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು ಪದಧಾರಣಾ ಮಾಡುವುದು ನಿಂತುಹೋಗತಕ್ಕದ್ದು ಎಂದು ನಿರ್ದೇಶಿಸಬಹುದು.

ಪಂಚಾಯತ ಸದಸ್ಯರ ಹುದ್ದೆಯ ಅವಧಿಯ ಪ್ರಾರಂಭ

ಕರ್ನಾಟಕ ರಾಜ್ಯ ಪಂಚಾಯತ ಅಧಿನಿಯಮ 1993 ರ ಅಧ್ಯಾಯ 4 ರ ಪ್ರಕಾರ ಪಂಚಾಯತ ಸದಸ್ಯರ ಹುದ್ದೆಯ ಅವಧಿಯ ಪ್ರಾರಂಭವನ್ನು ಈ ಕೆಳಗಿನಂತೆ ತಿಳಿಸಬಹುದು.

1) ಸಾರ್ವತಿಕ ಚುನಾವಣೆಯಲ್ಲಿ ಅಥವಾ 5ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡನೇ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರ ಹುದ್ದೆಯ ಅವಧಿಯು, ಗ್ರಾಮ ಪಂಚಾಯತಿಯ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

[illegible]

2) ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು 5ನೇ ಪ್ರಕರಣದ ಅಡಿಯಲ್ಲಿ ಚುನಾಯಿತನಾದ ಸದಸ್ಯನ ಹುದ್ದೆಯ ಅವಧಿಯು. 5ನೇ ಪ್ರಕರಣದ (8) ನೇ ಉಪ-ಪ್ರಕರಣದ ಅಡಿಯಲ್ಲಿ ಆತನ ಹೆಸರು ಪ್ರಕಟಿಸಿದ ದಿನಾಂಕದೆಂದು ಪ್ರಾರಂಭವಾಗತಕ್ಕದ್ದು.

ಸದಸ್ಯರ ರಾಜೀನಾಮೆ

ಗ್ರಾಮ ಪಮಚಾಯಿತಿ ಸದಸ್ಯರು ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ರಾಜಿನಾಮೆ ಕೊಡಬಹುದು ಮತ್ತು ಅಂಥ ರಾಜಿನಾಮೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳು ಮುಕ್ತಾಯವಾದ ಮೇಲೆ. ಅವನು ಸದರಿ ಹದಿನೈದು ದಿವಸಗಳ ಆ ಅವಧಿಯೋಳಗೆ ಆ ರಾಜಿನಾಮೆಯನ್ನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಹಿಂತೆಗೆದುಕೊಂಡಿರದ ಹೊರತು, ಅವನ ಸ್ಥಾನವು ತೆರವಾಗತಕ್ಕದ್ದು. ಅಧ್ಯಕ್ಷನು ರಾಜಿನಾಮೆ ಪತ್ರವನ್ನು ಗ್ರಾಮ ಪಂಚಾಯತಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು.

ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜಿನಾಮೆ ಅಥವಾ ತೆಗೆದುಹಾಕುವಿಕೆ

1) ಗ್ರಾಮ ಪಂಚಾಯಿತಿಯ ಅಧ್ಯಕ್ಷನು, ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜಿನಾಮೆ ನೀಡಬಹುದು.

2) ಗ್ರಾಮ ಪಂಚಾಯತಿಯ, ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅವನು ಗ್ರಾಮ ಪಂಚಾಯಿತಿಯ ಸದಸ್ಯನಗಿರುವುದು ನಿಂತುಹೋದಾಗ ತನ್ನ ಹುದ್ದೆಯನ್ನು ತೆರೆವು ಮಾಡತಕ್ಕದ್ದು.

   (1) ನೇ ಉಪ-ಪ್ರಕರಣದ ಅಡಿಯ ಪ್ರತಿಯೊಂದು ರಾಜಿನಾಮೆಯು ಸಂದರ್ಭಾನುಸಾರ ಅಸಿಸ್ಟೆಂಟ್ ಕಮಿಷನರ್ ಅಥವಾ ಅಧ್ಯಕ್ಷನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಮುದ್ದತ್ತಿನಂತೆ. ಆ ಹತ್ತು ದಿನಗಳ ಅವಧಿಯೊಳಗೆ ಆತ ಆ ರಾಜೀನಾಮೆಯನ್ನು ಸಂದರ್ಭಾನುಸಾರ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಅಥವಾ ಅಧ್ಯಕ್ಷರಿಗೆ ಬರಹದಲ್ಲಿ ಬರದು ಹಿಂತೆದೆದುಕೊಳ್ಳದಿದ್ದರೆ, ಜಾರಿಗೆ ಬರತಕ್ಕದ್ದು.

3) ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಾಕ್ಷನನ್ನು, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ ತೋರುತ್ತಿರುವುದಾಕ್ಕಾಗಿ ಅಥವಾ ದುರ್ನಡತೆಯ ತಪ್ಪಿತಸ್ಥನಾಗಿರುವುದಕ್ಕಾಗಿ ಅಧ್ಯಕ್ಷ ಅಥವಾ ಅಥವಾ ಉಪಾಧ್ಯಕ್ಷ ಹುದ್ದೆಯಿಂದ, ಅವನಿಗೆ ಅಹವಾಲು ಹೇಳಿಕೊಳ್ಳಲು ಒಂದು

ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವಶ್ಯಕವಾದಲ್ಲಿ ತಾಲೂಕು ಪಂಚಾಯಿತಿಂದ ವರದಿಯೊಂದನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿದ ತರುವಾಯ ಸರ್ಕಾರವು ಆ ಹುದ್ದೆಯಿಂದ, ತೆಗೆದುಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದುಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪ-ಪ್ರಕರಣದ ಅಡಿಯಲ್ಲಿ ಸದಸ್ಯನಾಗಿರುವುದು ನಿಂತ

ಹೋಗಿರದಿದ್ದಲ್ಲಿ ಅವನು ಅಂಥ ಗ್ರಾಮ ಪಂಚಾಯಿತಿಯ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ. (5)(4)ನೇ ಉಪ-ಪ್ರಕರಣದ ಅಡಿಯಲ್ಲಿ ಹುದ್ದೆಯಿಂದ ತೆಗೆದುಹಾಕಲ್ಪಟ್ಟ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಸರ್ಕಾರವು ಗ್ರಾಮ ಪಂಚಾಯಿತಿಯ ಸದಸ್ಯತ್ವದಿಂದ ಸಹ ತೆಗೆದುಹಾಕಬಹುದು.

ಗ್ರಾಮ ಪಂಚಾಯಿತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ.

ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು, ಅವನಲ್ಲಿ ವಿಶ್ವಾಸವಿಲ್ಲವೆಂಬ ನಿರ್ಣಯವನ್ನು ಗೊತ್ತುಪಡಿಸಬಹುದಾದಂಥ ಕಾರ್ಯವಿಧಾನನುಸಾರವಾಗಿ, ಆ ಉದ್ದೇಶಕ್ಕಾಗಿ ವಿಶೇಷವಾಗಿ ಕರೆದ ಸಭೆಯಲ್ಲಿ ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಎರಡಕ್ಕಿಂತ, ಕಡಿಮೆಯಿಲ್ಲದಷ್ಟು ಸಂಖ್ಯೆಯ ಬಹುಮತದಿಂದ ಅಂಗೀಕರಿಸಿದರೆ ತಕ್ಷಣವೇ ತನ್ನ ಸ್ಥಾನವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು: ಆದರೆ, ಒಟ್ಟು ಸದಸ್ಯರ ಮೂರನೇ

ಒಂದರಷ್ಟಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ನಿರ್ಣಯದ ನೋಟೀಸಿಗೆ ಸಹಿ ಮಾಡಿರದಿದ್ದರೆ ಮತ್ತು ನಿರ್ಣಯವನ್ನು ಮಂಡಿಸುವ ಉದ್ದೇಶದ ನೋಟೀಸನ್ನು ಕನಿಷ್ಟ ಪಕ್ಷ ಹತ್ತು ದಿನಗಳ ಮುಂಚೆ

ಕೊಟ್ಟಿರದಿದ್ದರೆ ಅಂತಹ ಯಾವುದೇ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ: ಮತ್ತು ಆದರೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ವಿರುದ್ಧವಾಗಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು, ಗ್ರಾಮ ಪಂಚಾಯಿತಿಯು ಪರಿಶೀಲಿಸಿ ಅದನ್ನು ಅಂಗೀಕರಿಸದಿರುವಲ್ಲಿ, ಅದೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸಂಬಂಧದಲ್ಲಿ ಗ್ರಾಮ ಪಂಚಾಯತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ ಒಂದು ವರ್ಷದೊಳಗೆ ಅದೇ ರೀತಿಯ ನಿರ್ಣಯದ ನೋಟೀಸನ್ನು ನೀಡತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ.

2.5 ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳು

1. ಗ್ರಾಮ ಪಂಚಾಯಿತಿಯು ಅನುಚೂಚಿ 1 ರಲ್ಲಿ ನಿಗದಿಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು: ಆದರೆ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅನುಸೂಚಿ ರಲ್ಲಿ ನಿಗದಿಪಡಿಸಿರುವ ಯಾವುದೇ ಪ್ರಕಾರ್ಯದ ನಿರ್ವಹಣೆಗಾಗಿ ನಿಧಿಯನ್ನು ಒದಗಿಸಿರುವಲ್ಲಿ

   ಗ್ರಾಮ ಪಂಚಾಯಿತಿಯು ಅಂಥ ಪ್ರಕಾರ್ಯವನ್ನು ನಿರ್ವಹಿಸಲು ನಿರೂಪಿಸಲಾಗಿರುವ ಮಾರ್ಗದರ್ಶನಗಳಿಗೆ ಅಥವಾ ಸೂತ್ರಗಳಿಗನುಸಾರವಾಗಿ ಅಂಥ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು. (1)-ಎ (1)ನೇ ಉಪ- ಪ್ರಕರಣದಲ್ಲಿ ಮತ್ತು ಅನುಸೂಚಿ 1 ರಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಯ ವಶದಲ್ಲಿರುವ ಗ್ರಾಮ ಪಂಚಾಯಿತಿ ನಿಧಿಯು ಅನುಮತಿಸು ವಿಷಯದ ಮಟ್ಟಿಗೆ ಗ್ರಾಮ ಪಂಚಾಯಿತಿಯು ಈ ಕೆಳಗಿನ ವಿಷಯಗಳ ಬಗ್ಗೆ ಪಂಚಾಯಿತಿ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಸುವುದು ಕಡ್ಡಾಯವಾಗತಕ್ಕದ್ದು, ಎಂದರೆ.

(1) ಪ್ರತಿ ವರ್ಷ ಶೇಕಡಾ 10 ರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹಗಳನ್ನು ಒದಗಿಸುವುದು ಮತ್ತು ಸಾಧ್ಯವಾದಷ್ಟು ಬೇಗನೆ ಎಲ್ಲ ಮನೆಗಳಿಗೂ ಈ ಸೌಲಭ್ಯವನ್ನು ಒದಗಿಸುವ ಗುರಿ ಸಾಧಿಸುವುದು:

(2) ಪುರುಷರು ಮತ್ತು ಮಹಿಳೆಯರಿಗಾಗಿ ಸಾಕಷ್ಟು ಸಮುದಾಯ ಶೌಚಗೃಹಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು:

(3) ಸಾಕಷ್ಟು ಸಂಪನ್ಮೂಲಗಳನ್ನು ಸೃಜಿಸಿ ತಾನೇ ಅಥವಾ ವಾರ್ಷಿಕ ಕರಾರಿನ ಮೂಲಕವಾಗಲಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸುವುದು:

(4) ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ನಿಯತಕಾಲಿವಾಗಿ ಪರಿಶೀಲಿಸುವುದು ಮತ್ತು ವಸೂಲು ಮಾಡುವುದು.

(5) ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳವುದು:

(6) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು:

(7) ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ಅದನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು:

(8) ನೈರ್ಮಲ್ಯ ವ್ಯವಸ್ಥೆ ಮತ್ತು ಸರಿಯಾದ ಚರಂಡಿ ವ್ಯವಸ್ಥೆಯನ್ನು ಒದಗಿಸುವುದು:

(9) ಸಾರ್ವಜನಿಕ ರಸ್ತೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ:

(10) ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳ ಮೇಲಿನ ಒತ್ತುವರಿಗಳನ್ನು ತೆಗೆದುಹಾಕುವುದು:

(11) ಸಾಕಷ್ಟು ರಸ್ತೆ ದೀಪಗಳನ್ನು ಒದಗಿಸುವುದು ಮತ್ತು ವಿದ್ಯುತ್ ಶುಲ್ಕಗಳನ್ನು ನಿಯತವಾಗಿ ಸಂದಾಯ ಮಾಡುವುದು:

(12) ಅನೈರ್ಮಲ್ಯಕರ ಗುಂಡಿಗಳನ್ನು ತುಂಬಿಸುವುದು ಮತ್ತು ಅನಾರೋಗ್ಯಕರ ಪ್ರದೇಶಗಳನ್ನು ಆರೋಗ್ಯಕರವನ್ನಾಗಿ ಮಾಡುವುದು.

(13) ಹುಚ್ಚುನಾಯಿಗಳನ್ನು ಮತ್ತು ಮಾಲಿಕರಿಲ್ಲದ ನಾಯಿಗಳನ್ನು ಸಾಯಿಸುವುದು:

(14) ಅದರಲ್ಲಿ ನಿಹಿತವಾಗಿರುವ ಎಲ್ಲ ಸಮುದಾಯ ಆಸ್ತಿಗಳನ್ನು ನಿರ್ವಹಿಸುವುದು:

(15) ಜನಗಣತಿ, ಬೆಳೆ-ಗಣತಿ, ಜಾನುವಾರು-ಗಣತಿ, ನಿರುದ್ಯೋಗಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳ ಗಣತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸುವುದು:

(16) ನಿರುಪಯುಕ್ತ ವಸ್ತುಗಳನ್ನು ಮತ್ತು ಗೊಬ್ಬರವನ್ನು ರಾಶಿ ಹಾಕುವುದಕ್ಕೆ ವಾಸದ ಮನೆಗಳಿಂದ ದೂರದಲ್ಲಿರುವ ಜಾಗಗಳನ್ನು ಪ್ರತ್ಯೇಕವಾಗಿ ಗುರುತಿಸುವುದು.

(17) ಗ್ರಾಮ ಪಂಚಾಯಿತಿಯು, ಪಂಚಾಯಿತಿ ಪ್ರದೇಶದಲ್ಲಿ ಪಂಚಾಯಿತಿ ಪ್ರದೇಶದ ನಿವಾಸಿಗಳ ಆರೋಗ್ಯ,ಸುರಕ್ಷೆ, ಶಿಕ್ಷಣ, ಸುಖ-ಸೌಖ್ಯ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಯನ್ನು ವೃದ್ಧಿಸುವಂತಹ ಬೇರೆ ಕೆಲಸಗಳನ್ನು ಅಥವಾ ಮಾರ್ಗೋಪಾಯಗಳನ್ನು ನಿರ್ವಹಿಸಲು ಸಹ ಏರ್ಪಾಟು ಮಾಡಬಹುದು.

(18) ಗ್ರಾಮ ಪಂಚಾಯಿತಿಯು, ತನ್ನ ಸಭೆಯಲ್ಲಿ ಅಂಗೀಕರಿಸಿದ ಮತ್ತು ತನ್ನ ಸದಸ್ಯ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಸಮರ್ಥಿಸಿದ ನಿರ್ಣಯದಿಂದ ಮತ್ತು ತಾಲ್ಲೂಕು ಪಂಚಾಯಿತಿಯಿಂದ ಮೊದಲೇ ಅನುಮೋದನೆ ಪಡೆದು.-

(ಎ) ಪಂಚಾಯಿತಿ ಪ್ರದೇಶದೊಳಗೆ ಅಥವಾ ಹೊರಗಡೆ, ಆದರೆ ಜಿಲ್ಲೆಯ ಒಳಗಡೆ, ಯಾವುದೇ ವಸ್ತು ಪ್ರದರ್ಶನ, ಸಮ್ಮೇಳನ ಅಥವಾ ವಿಚಾರ ಸಂಕಿರಣದ ಬಗ್ಗೆ ವ್ಯವಸ್ಥೆ ಮಾಡಬಹುದು. ಅಥವಾ ಅದಕ್ಕೆ ವಂತಿಗೆ ಕೊಡಬಹುದು: ಅಥವಾ

(ಬಿ) ಪಂಚಾಯಿತಿ ಪ್ರದೇಶದೊಳಗಡೆ, 1961ರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಹಿತವಾಗಿರುವ ಯಾವುದೇ ವೈದ್ಯಕೀಯ, ಶೈಕ್ಷಣಿಕ ಅಥವಾ ಧರ್ಮಾರ್ಥ ಸಂಸ್ಥೆಗಳಿಗೆ ಅಥವಾ ಸಾರ್ವಜನಿಕ ಉಪಯುಕ್ತತೆಯ ಇತರ ಯಾವುದೇ ಸಂಸ್ಥಗಳಿಗೆ ವಂತಿಗೆಗಳನ್ನು ಕೊಡಬಹುದು. 58-ಎ ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯಿತಿಯ

ಕರ್ತವ್ಯವಾಗಿರತಕ್ಕದ್ದು.- ಜೀತಗಾರಿಕೆ ಪದ್ಧತಿ (ನಿರ್ಮೂಲನ) ಅಧಿನಿಯಮ. 1976 ರ (1976ರ ಕೇಂದ್ರ ಅಧಿನಿಯಮ 19) ಅಡಿಯಲ್ಲಿ ನಿರ್ಮೂಲನಗೊಂಡ ಜೀತಗಾರಿಕೆ ಪದ್ಧತಿಯು ಪಂಚಾಯಿತಿ ಪ್ರದೇಶದಲ್ಲಿ ಪುನರಾವರ್ತಗೊಂಡ ಯಾವುದೇ ಪ್ರಕರಣದ ಬಗ್ಗೆ. ನಿಯಮಿಸಬಹುದಾದಂತೆ ಅಂತಹ ನಮೂನೆಯಲ್ಲಿ ಮತ್ತು ಅಂತಹ ಅಂತರದ ಅವಧಿಗಳಲ್ಲಿ ಡೆಪ್ಯೂಟಿ ಕಮಿಷನರಿಗೆ ಅಥವಾ ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟ ಪಡಿಸಿದ ಯಾವುದೇ

ಇತರ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಗ್ರಾಮ ಪಂಚಾಯಿತಿಗೆ ಕಡ್ಡಾಯವಾಗಿರತಕ್ಕದ್ದು. ಹೀಗೆ ಮಾಡಲು ತಪ್ಪಿದರೆ. 268ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ವಿಧಿಸಲಾದ ಕರ್ತವ್ಯಗಳ ನೆರವೇರಿಕೆಯಲ್ಲಿ ಆದ ತಪ್ಪು ಎಂದು ಅರ್ಥೈಸತಕ್ಕದ್ದು.

ಕಾರ್ಯಗಳನ್ನು ವಹಿಸಿಕೊಡುವುದು

(1) ಸರ್ಕಾರವು. ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು.-

(ಬಿ) ಪಂಚಾಯಿತಿ ಪ್ರದೇಶದೊಳಗೆ ಇರುವ ಸರ್ಕಾರಕ್ಕೆ ಸೇರಿದ ಬಂಜರು ಭೂಮಿ. ಗೋಮಾಳಗಳು ಅಥವಾ ಖಾಲಿ ಇರುವ ಭೂಮಿಗಳ ವ್ಯವಸ್ಥಾಪನೆಯನ್ನು ಗ್ರಾಮ ಪಂಚಾಯಿತಿಗೆ ಒಪ್ಪಿಸಬಹುದು:

(ಸಿ) ಸರ್ಕಾರದ ಪರವಾಗಿ. ಭೂ ಕಂದಾಯದ ಸಂಗ್ರಹಣೆಯನ್ನು ಮತ್ತು ಅದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಇಟ್ಟುಕೊಂಡು ಬರುವುದನ್ನು ಗ್ರಾಮ ಪಂಚಾಯಿತಿಗೆ ವಹಿಸಿಕೊಡಬಹುದು:

(ಡಿ) ಗೊತ್ತುಪಡಿಸಿರುವಂತಹ ಇತರ ಕಾರ್ಯಗಳನ್ನು ವಹಿಸಿಕೊಡಬಹುದು: ಆದರೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸಹಮತಿಯಿಲ್ಲದೆ (ಸಿ) ಖಂಡದ ಅಡಿಯಲ್ಲಿನ ಯಾವುದೇ ಕಾರ್ಯವನ್ನು ವಹಿಸಿಕೊಡತಕ್ಕದ್ದಲ್ಲ: ಅಷ್ಟೇ ಅಲ್ಲದೇ. (ಎ) ಖಂಡದ ಅಡಿಯಲ್ಲಿ, ಅರಣ್ಯದ ವ್ಯವಸ್ಥಾಪನೆ ಮತ್ತು ನಿರ್ವಹಣೆಯನ್ನು ವರ್ಗಾವಣೆ ಮಾಡಿದಾಗ ಸರ್ಕಾರವು ಅನ್ಯ ವ್ಯವಸ್ಥಾಪನೆ ಮತ್ತು ನಿರ್ವಹಣೆಗೆ ಅಗತ್ಯವಾದ ಯಾವುದೇ ಮೊಬಲಗನ್ನು ಅಥವಾ ಅನ್ಯ ಅರಣ್ಯದಿಂದ ಬರುವ ಆದಾಯದ ಸಂಕಲನದ ಭಾಗವನ್ನು ಗ್ರಾಮ ಪಂಚಾಯಿತಿಯ ವಶಕ್ಕೆ ಒಪ್ಪಿಸಬೇಕೆಂದು ನಿರ್ದೇಶಿಸತಕ್ಕದ್ದು.

(2) ಸರ್ಕಾರವು ಈ ಪ್ರಕರಣದ ಅಡಿಯಲ್ಲಿ ವಹಿಸಿದ ಕಾರ್ಯಗಳನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

ಗ್ರಾಮ ಪಂಚಾಯಿತಿಯ ಸಾಮಾನ್ಯ ಅಧಿಕಾರಗಳು

ಗ್ರಾಮ ಪಂಚಾಯಿತಿಯು ತನಗೆ ವಹಿಸಿಕೊಟ್ಟ, ನೇಮಿಸಿರುವ ಅಥವಾ ಪ್ರತ್ಯಾಯೋಗಿಸಿದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಅದರಲ್ಲೂ ವಿಶೇಷವಾಗಿ ಮತ್ತು ಈ ಮೊದಲೇ ಹೇಳಿರುವ

ಅಧಿಕಾರಿಗಳಿಗೆ ಬಾಧಕವಾಗದಂತೆ. ಈ ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಿರುವ ಎಲ್ಲಾ ಅಧಿಕಾರಿಗಳನ್ನು ಚಲಾಯಿಸಲು ಅವಶ್ಯಕವಾದ ಅಥವಾ ಪ್ರಾಸಂಗಿಕವಾದ ಎಲ್ಲ ಕಾರ್ಯಗಳನ್ನು ಮಾಡಲು ಅಧಿಕಾರ ಹೊಂದಿರತಕ್ಕದ್ದು.

ಸ್ಥಾಯಿ ಸಮಿತಿಗಳು

ಪ್ರತಿಯೊಂದು ಗ್ರಾಮ ಪಂಚಾಯತಿಗಳು, ಚುನಾವಣೆಯ ಮೂಲಕ ಈ ಮುಂದಿನ ಸಮಿತಿಗಳನ್ನು ರಚಿಸತಕ್ಕದ್ದು.

(1) ಕೃಷಿ ಉತ್ಪಾದನೆ, ಪಶು ಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ:

(2) (ಎ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ:

(ಬಿ) ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಸಂಘರ್ಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ:

(ಸಿ) ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ:

(3) ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು

ಸೌಕರ್ಯಗಳ ಸಮಿತಿ. (1-ಎ) ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯನ್ನು, ಗ್ರಾಮ ಪಂಚಾಯಿತಿಯ ಸದಸ್ಯರ ಸಾರ್ವತ್ರಿಕ ಚುನಾಣೆಯನ್ನು ತರುವಾಯ ಅಥವಾ ಅದರ ಪುನರ್ ರಚನೆಯಾದ ಮೇಲೆ ಅಥವಾ ಈ ಅಧಿನಿಯಮದಡಿ ಸ್ಥಾಪಿತವಾದ ಮೇಲೆ ಸಾಧ್ಯವಾದಷ್ಟು ಬೇಗನೇ ಅಥವಾ ಸ್ಥಾಯಿ ಸಮಿತಿಯ ಸದಸ್ಯರ ಹುದ್ದೆಯ ಅವಧಿಯು ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ, ನಡೆಸತಕ್ಕದ್ದು. (1-ಬಿ) ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯನ ಹುದ್ದೆಯ ಅವಧಿಯು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಲಾದುದ್ದನ್ನು ಹೊರತುಪಡಿಸಿ ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳುಗಳು ಅಥವಾ ಆತನು ಗ್ರಾಮ ಪಂಚಾಯಿತಿಯ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ, ಆ ಅವಧಿಯಾಗಿರತಕ್ಕದ್ದು. (2) (ಎ) ಪ್ರತಿಯೊಂದು ಸಮಿತಿಯು, ಸಂದರ್ಭಾನುಸಾರ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಸೇರಿದಂತೆ ಮೂರಕ್ಕಿಂತ ಕಡಿಮೆಯಿಲ್ಲದಷ್ಟು ಮತ್ತು ಐದಕ್ಕಿಂತ ಹೆಚ್ಚಿಲ್ಲದಷ್ಟು ಸದಸ್ಯರಿಂದ ಕೂಡಿರತಕ್ಕದ್ದು. ಅಧ್ಯಕ್ಷನು, ಉತ್ಪಾದನಾ ಸಮಿತಿಯ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರತಕ್ಕದ್ದು. ಆದರೆ, ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಪಕ್ಷ ಒಬ್ಬ ಮಹಿಳೆ ಸದಸ್ಯೆ ಮತ್ತು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಬ್ಬ ಸದಸ್ಯನು ಇರತಕ್ಕದ್ದು: (ಬಿ) ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ ಕ್ಲಬ್ಬುಗಳ, ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರುತಕ್ಕದ್ದು, ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ- ಆಪ್ಟ್ ಮಾಡಿಕೊಳ್ಳತಕ್ಕದ್ದು. ಕೋ-ಆಪ್ಟ್ ಮಾಡಿಕೊಂಡ ಸದಸ್ಯರ ಹಕ್ಕುಗಳು ಮತ್ತು ಹೊಣೆಗಳು ಗೊತ್ತುಪಡಿಸಿರುವಂತೆ ಇರತಕ್ಕದ್ದು. (3) ಸ್ಥಾಯಿ ಸಮಿತಿಗಳು ಮೇಲೆ ಉಲ್ಲೇಖಿಸಿರುವ ಕಾರ್ಯಗಳನ್ನು ಗ್ರಾಮ ಪಂಚಾಯಿತಿಯು ಅವುಗಳಿಗೆ ವಹಿಸಿಕೊಟ್ಟಿರುವ ಅಧಿಕಾರಿಗಳ ಮಟ್ಟಿಗೆ ನೆರವೇರಿಸತಕ್ಕದ್ದು. (3) ಸ್ಥಾಯಿ ಸಮಿತಿಗಳು ಮೇಲೆ ಉಲ್ಲೇಖಿಸಿರುವ ಕಾರ್ಯಗಳನ್ನು ಗ್ರಾಮ ಪಂಚಾಯಿತಿಯು ಅವುಗಳಿಗೆ ವಹಿಸಿಕೊಟ್ಟಿರುವ ಅಧಿಕಾರಗಳ ಮಟ್ಟಿಗೆ ನೆರವೇರಿಸತಕ್ಕದ್ದು.

ಇತರ ಸಮಿತಿಗಳು

(1) ಗ್ರಾಮ ಪಂಚಾಯಿತಿಯು, 61ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ, ಅದು ನಿರ್ಧರಿಸಬಹುದಾದಂಥ ಸದಸ್ಯರಗಳನ್ನು ಒಳಗೊಂಡಿರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ನೇಮಕಮಾಡಬಹುದು ಮತ್ತು ಹಾಗೆ ನೇಮಕಮಾಡಲಾದ ಸಮಿತಿಗಳಲ್ಲಿ ಯಾವ ಉದ್ದೇಶಕ್ಕಾಗಿ ನೇಮಕಮಾಡಲಾಗಿದೆಯೋ ಅದನ್ನು ಈಡೇರಿಸುವುದಕ್ಕೆ ಅವಶ್ಯಕ ಅಥವಾ ಯುಕ್ತವಾಗಬಹುದದಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಹಿತಗೊಳಸಬಹುದು. (1) ನೇ ಉಪ-ಪ್ರಕರಣದಡಿ ನೇಮಕಮಾಡಲಾದ ಸಮಿತಿಯು, ನಿಯಮಿಸಬಹುದಾದಂಥ ವಿಧಾನದಲ್ಲಿ, ಪಂಚಾಯಿತಿ ಪ್ರದೇಶದ ಅಂಥ ನಿವಾಸಿಗಳನ್ನು ಸಹ-ಅಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.

(2) ಸಮಿತಿಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

ಜಂಟಿ ಸಮಿತಿಗಳ ನೇಮಕಾತಿ

(1) ಒಂದು ತಾಲ್ಲೂಕಿನಲ್ಲಿ ಎರಡು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳು, 61ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಉದ್ದೇಶವಾಗಿಲ್ಲದ ಆದರೆ, ಅವುಗಳೆಲ್ಲವುಗಳಗೂ ಸಂಬಂಧಪಟ್ಟ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಅಂಥ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಏಕರೀತಿಯಗಳನ್ನು ಅಂಗೀಕರಿಸುವ ಮೂಲಕ ಆ ಉದ್ದೇಶಕ್ಕಾಗಿ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡಲು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಯನ್ನು ಪ್ರಾಧಿಕರಿಸಬಹುದು.

(2) ಒಂದು ಜಿಲ್ಲೆಯಲ್ಲಿನ ಎರಡು ಅಥವಾ ಹೆಚ್ಚು ತಾಲ್ಲೂಕುಗಳಲ್ಲಿ ಅಡಕವಾಗಿರುವ ಎರಡು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳು, 61ನೇ ಪ್ರಕರಣದಲ್ಲಿ ನಿರ್ದಿಷ್ಟ ಉದ್ದೇಶಕ್ಕಾಗಿ ಅಂಥ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಏಕರೀತಿಯ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ಆ ಉದ್ದೇಶಕ್ಕಾಗಿ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡಲು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯನ್ನು ಪ್ರಾಧಿಕರಿಸಬಹುದು.

(3) ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯು, (1)ನೇ ಉಪ-ಪ್ರಕರಣದ ಅಥವಾ ಸಂದರ್ಭಾನುಸಾರ (2) ನೇ ಉಪ- ಪ್ರಕರಣದ ಅಡಿಯಲ್ಲಿ ಘಟಕ

ಪಂಚಾಯಿತಿಗಳು ಅಂಗೀಕರಿಸಿದ ಜಂಟಿ ನಿರ್ಣಯಗಳ ಪ್ರಕಾರ ನಿಯಮಿಸಬಹುದಾಂಥ ಸದಸ್ಯರನ್ನುಳ್ಳ ಒಂದು ಜಂಟಿ ಸಮಿತಿಯನ್ನು ಸದರಿ ಉದ್ದೇಶಕ್ಕಾಗಿ ನೇಮಕ ಮಾಡಬಹುದು ಮತ್ತು ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ನೇಮಕ ಮಾಡಲಾಗಿದೆಯೋ ಆ ಉದ್ದೇಶಗಳನ್ನು ಪೂರೈಸುವುದಕ್ಕೆ ಅಗತ್ಯ ಅಥವಾ ಯುಕ್ತವಾಗಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹಾಗೆ ನೇಮಕ ಮಾಡಲಾದ ಸಮಿತಿಯಲ್ಲಿ ನಿಹಿತಗೊಳಿಸತಕ್ಕದ್ದು.

(4) (3)ನೇ ಉಪ-ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಂದು ಸಮಿತಿಯು ನಿಯಮಿಸಬಹುದಾದಂಥ ವಿಧಾನದಲ್ಲಿ ಸಂಬಂಧಪಟ್ಟ ಪಂಚಾಯಿತಿ ಪ್ರದೇಶಗಳ ನಿವಾಸಿಗಳನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.

(5) ಸಮಿತಿಯ ಕಾರ್ಯ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಿಗಳು

(1) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಅಡಿಯಲ್ಲಿ ಚಲಾಯಿಸಬಹುದಾದಂಥ ಪ್ರಕಾರ್ಯಗಳು ಮತ್ತು ಅಧಿಕಾರಗಳ ಜೊತೆಗೆ.-

(ಎ) ಗ್ರಾಮ ಪಂಚಾಯಿತಿಯ ಸಭೆಗಳನ್ನು ಕರೆಯತಕ್ಕದ್ದು.

(ಬಿ) ಗ್ರಾಮ ಪಂಚಾಯಿತಿಯ ಸಭೆಗಳನ್ನು ಕರೆಯತಕ್ಕದ್ದು.

(ಸಿ) ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯೂ ಸೇರಿದಂತೆ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮೇಲೆ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ನಿಯಂತ್ರಣವನ್ನು ಹೊಂದಿರತಕ್ಕದ್ದು.

(2) ಅಧ್ಯಕ್ಷನು, ಸಮಿತಿಯ ಅಥವಾ ಗ್ರಾಮ ಪಂಚಾಯಿತಿಯ ಮಂಜೂರಾತಿಯು ಅಗತ್ಯವಿರುವಂಥ ಯಾವುದೇ ಕಾಮಗಾರಿಯನ್ನು ತಕ್ಷಣವೇ ನಿರ್ವಹಿಸುವುದು ಅಥವಾ ಯಾವುದೇ ಕಾರ್ಯವನ್ನು ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯಪಟ್ಟರೆ ಆ ಉದ್ದೇಶಕ್ಕಾಗಿ ಇಪ್ಪತ್ನಾಲ್ಕು ಗಂಟೆಗಳ ನೋಟೀಸನ್ನು ಕೊಟ್ಟು ಸಭೆಯನ್ನು ಕರೆಯಬಹುದು.

(3) ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷನು, ಅಧ್ಯಕ್ಷನು ರಜೆಯ ಮೇಲೆ ಹೋದ ಕಾರಣ ಗೈರು ಹಾಜರಿಯಾದಾಗ ಅಥವಾ ಕೆಲಸವನ್ನು ಮಾಡಲು ಅಸಮರ್ಥನಾದಾಗ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾರ್ಯವನ್ನು ನೆರವೇರಿಸತಕ್ಕದ್ದು.

ಅಧ್ಯಾಯ ೩

ಗ್ರಾಮಸಭೆಯ ಅರ್ಥ, ಸ್ವರೂಪ ಹಾಗೂ ಕಾರ್ಯಚಟುವಟಿಕೆಗಳು

3.1 ಗ್ರಾಮಸಭೆಯ ಅರ್ಥ ಪರಿಕಲ್ಪನೆ

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯೂ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದೆ. ಆದರೆ ಗ್ರಾಮೀಣ ಪರಿಸರದಲ್ಲಿ ಜನರ ಪಾಲ್ಗೊಳ್ಳುವಿಕೆಯ ಪ್ರಮಾಣ ತೀರಾ ನಿರಾಶಾದಾಯಕವಿದೆ ಎಂದರೆ ಉತ್ಪ್ರೇಕ್ಷೆ ಆಗಲಾರದು. ಈ ಅಂಶಗಳನ್ನು ಮನಗಂಡು 1993ರ ಕರ್ನಾಟಕ ರಾಜ್ಯ ಪಂಚಾಯತ ರಾಜ ಕಾಯ್ದೆಯಲ್ಲಿ ಅದ್ಯಾಯ-2 ರಲ್ಲಿ ಗ್ರಾಮಸಭೆಯನ್ನು ಸೇರಿಸುವ ಮೂಲಕ ಜನ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಅನುಷ್ಠಾನಗಳಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅನುವು ಮಾಡಿಕೊಡಲಾಯಿತು. ಆದರೂ ಕೂಡಾ ಗ್ರಾಮಸಭೆಗೆ ಸದಸ್ಯರ ಹಾಜರಾತಿ ಹಾಗೂ ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ಪ್ರಜೆಗಳ ಸಕ್ರಿಯ ಪಾಲ್ಗೊಳ್ಳುವಿಕೆ ಅಪೇಕ್ಷಿತ ಮಟ್ಟವನ್ನು ತಲುಪಿಲ್ಲ ಎಂಬುದು ನಗ್ನಸತ್ಯ.

ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993ರ ಅಧ್ಯಾಯ 2 ರಲ್ಲಿ ಸೂಚಿಸಿರುವಂತೆ ಗ್ರಾಮಸಭೆಯೂ ಗ್ರಾಮದ ಜನರ ಸಭೆಯಾಗಿದ್ದ ಮತದಾರರ ಪಟ್ಟಿಯಲ್ಲಿ ಹೆಸಿರುವ ಎಲ್ಲಾ ಸದಸ್ಯರ ಸಭೆಯಾಗಿದೆ. ಇದು ಒಂದು ವರ್ಷಕ್ಕೆ ಕನಿಷ್ಠ 2 ಬಾರಿ ಸಭೆ ಸೇರಿ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಮಗ್ರ ಚರ್ಚೆಗೆ ಅನುವು ಮಾಡಿಕೊಡುತ್ತದೆ. ಸರ್ಕಾರದ ಸಾಮಾನ್ಯ ಆದೇಶಗಳಿಗೆ ಒಳಪಟ್ಟು ಗ್ರಾಮಸಭೆಯು ಕಾಲಕಾಲಕ್ಕೆ ಸೇರತಕ್ಕುದು. ಆದರೆ ಯಾವುದೇ ಎರಡು ಸಭೆಗಳ ನುಡವಿನ ಅಂತರ ಆರು ತಿಂಗಳು ಮೀರತಕ್ಕದ್ದಲ್ಲ. ಗ್ರಾಮ ಪಂಚಾಯತಿಯು ಗ್ರಾಮಸಭೆಗಳನ್ನು ಕರೆಯಲು ತಪ್ಪಿದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಗ್ರಾಮಸಭೆ ಕರೆಯತಕ್ಕದ್ದು.

ಗ್ರಾಮಸಭೆಯ ವ್ಯಾಪ್ತಿಗೆ ಒಳಪಟ್ಟ ಮತದಾರ ಸದಸ್ಯರ ಕೂಟವು ಗ್ರಾಮಸಭೆಯಾಗಿರುತ್ತದೆ. ಈ ಗ್ರಾಮಸಭೆಯನ್ನು ಒಟ್ಟುಗೂಡಿಸಿ ಸಭೆ ನಡೆಸುವ ಹಕ್ಕು ಗ್ರಾಮಪಂಚಾಯತಿಯದ್ದು, ಅದನ್ನು ಪಂಚಾಯತಿ ಅಧ್ಯಕ್ಷರ ಗೈರು ಹಾಜರಿಯಲ್ಲಿ ಅವರ ಕರ್ತವ್ಯ ನಿರ್ವಹಿಸುವವರು ಕರೆಯತಕ್ಕದ್ದು. ಸಭೆಯನ್ನು ಕರೆಯುವ ಬಗ್ಗೆ ನಿರ್ದಿಷ್ಠ ಸೂಚನೆಗಳು ಏನೂ ಇಲ್ಲ. ಗ್ರಾಮ ಪಂಚಾಯತಿಯು ಗ್ರಾಮಸಭೆ ಕರೆಯಬೇಕೆಂದು ಹಾಗೆ ತಪ್ಪಿದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯೇ ಕರೆಯತಕ್ಕದೆಂದೂ ಹೇಳಲಾಗಿದ್ದು ಇದರಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯದೇ ಮೇಲುಗೈಯಾಗುವ ಸಂದರ್ಭವೇ ಹೆಚ್ಚಾಗಿರುವದು.

ಗ್ರಾಮಸಭೆಗೆ ಪಂಚಾಯತಿಗೆ ಶಿಫಾರಸುಗಳನ್ನು ಮತ್ತು ಸಲಹೆಗಳನ್ನು ನೀಡುವ ಹಕ್ಕಿರುತ್ತದೆ. ಗ್ರಾಮದ ವ್ಯಾಪ್ತಿಯಲ್ಲಿ ಸೌಹಾರ್ದತೆ ಬೆಳೆಸುವ, ವಯಸ್ಕರ ಶಿಕ್ಷಣಕ್ಕಾಗಿ ಶ್ರಮಿಸುವ ಗ್ರಾಮಪಂಚಾಯತಿ ಕಾರ್ಯನಿರ್ವಹಣೆ, ಲೆಕ್ಕಪತ್ರಗಳ, ಆಡಳಿತ ವರದಿಯ ಪರಿಶೀಲನೆ ನಡೆಸುವ ಹಕ್ಕಿರುತ್ತದೆ. ಸಮುದಾಯ ಕಾರ್ಯನಿರ್ವಹಣೆಗಾಗಿ ಸ್ವಯಂ ಸೇವೆ ಮತ್ತು ವಸ್ತು ಹಾಗೂ ನಗದು ವಂತಿಗೆಗಳನ್ನು ಸಂಗ್ರಹಿಸುವ ಗ್ರಾಮವ್ಯಾಪ್ತಿಯ ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವ ಹಕ್ಕು ಹಾಗೂ

ಇವುಗಳನ್ನು ಕಾರ್ಯಗತಗೊಳಸುವಲ್ಲಿ ನೆರವಾಗುವ ಹಕ್ಕು ಇದೆ. ಗ್ರಾಮಸಭೆಗಳನ್ನು ಒಂದಕ್ಕಿಂತ ಇನ್ನೊಂದನ್ನು ಆರು ತಿಂಗಳ ಅಂತರದೊಳಗೆ ಸೇರಿಸಬೇಕೆಂಬ ಆದೇಶವಿದೆ. ಗ್ರಾಮಸಭೆಯ "ಹಕ್ಕುಗಳು ಬರೆ ಸಲಹಾತ್ಮಕವಾಗಿರುತ್ತವೆ.(ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993).

ಗ್ರಾಮಸಭೆಯ ರಚನೆ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಧ್ಯಾಯ 3ರ ಪ್ರಕಾರ ಗ್ರಾಮಸಭೆಯ ರಚನೆ ಕುರಿತು ಈ ಮುಂದಿನಂತೆ ವಿವರಣೆ ನೀಡಬಹುದು.

1. ಗ್ರಾಮಸಭೆ ಎಂದರೆ, ಗ್ರಾಮ ಪಂಚಾಯತಿ ಮತದಾರರ ಪಟ್ಟಿಯಲ್ಲಿ ನೋಂದಾಯಿತ ವ್ಯಕ್ತಿಗಳ ಒಂದು ನಿಕಾಯ ಇದ್ದು ಕೊನೆಪಕ್ಷ ಆರು ತಿಂಗಳಗೊಮ್ಮೆ ಸಭೆ ಸೇರುತ್ತದೆ.
2. ಗ್ರಾಮಸಭೆ ಸೇರಲು ಕೋರಂ ಅಥವಾ ಅವಶ್ಯವಿರುವ ಕನಿಷ್ಠ ಸದಸ್ಯರ ಹಾಜರಾತಿಯು ಗ್ರಾಮಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕೆ ಕಡಿಮೆಯೋ ಅದು
3. ಪ್ರತಿಯೊಂದು ವಾರ್ಡಸಭೆಯಿಂದ ಕನಿಷ್ಠ 10 ಸದಸ್ಯರು ಗ್ರಾಮಸಭೆಗೆ ಹಾಜರಾಗಬೇಕು. ಗ್ರಾಮಸಭೆಗೆ ಹಾಜರಾಗುವ ಸದಸ್ಯರಲ್ಲಿ ಶೇ.30ರಷ್ಟು ಕಡಿಮೆ ಇಲ್ಲದಷ್ಟು ಮಹಿಳೆಯರು ಇರಬೇಕು. ಅನುಸೂಚಿತ ಪಂಗಡ, ಜಾತಿಗಳಿಗೆ ಸೇರಿದ ವ್ಯಕ್ತಿಗಳು ಗ್ರಾಮಸಭೆಯಲ್ಲಿ ತಮ್ಮ ಜನಸಂಖ್ಯೆಯ ಅನುಪಾತಕ್ಕೆ ಅನುಸಾರವಾಗಿ ಪ್ರತಿನಿಧಿಸಬೇಕು.
4. ಗ್ರಾಮಸಭೆಯು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕರೆಯಲಾದ ವಿಶೇಷ ಸಭೆಗಾಗಿ ಗ್ರಾಮಸಭೆಯ ಸದಸ್ಯರ ಶೇ.10ಕ್ಕಿಂತ ಕಡಿಮೆ ಇಲ್ಲದ ಸದಸ್ಯರು ಕೋರಿಕೆ ಸಲ್ಲಿಸಿ, ಅಂತಹ ಕೋರಿಕೆಯಲ್ಲಿ ಕಲಾಪಗಳ ವಿಷಯಗಳನ್ನು ವಿವರಿಸಿದರೆ ವಿಶೇಷ ಸಭೆಯು ನಡೆಯಬೇಕು. ಎರಡು ವಿಶೇಷ ಸಭೆಗಳ ನಡುವೆ ಕನಿಷ್ಠ ಮೂರು ತಿಂಗಳ ಅಂತರವಿರಬೇಉ.
5. ಗ್ರಾಮಸಭೆಯನ್ನು ಕರೆಯುವ ಮತ್ತು ನಡೆಸುವ ಕಾರ್ಯವಿಧಾನ ನಿಯಮಿಸಬಹುದಾದರೂ ಸಾಮಾನ್ಯವಾಗಿ ಗ್ರಾಮಸಭೆಯು ಗ್ರಾಮಪಂಚಾಯತಿಯ ಆವರಣದಲ್ಲಿ ನಡೆಯುತ್ತದೆ. ಇನ್ನುಳಿದಂತೆ ಗ್ರಾಮಸಭೆಯಲ್ಲಿ ಪಾಲ್ಗೊಳ್ಳಬಹುದಾದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಭೆಯ ದಿನಾಂಕ ವೇಳಗಳನ್ನು ಪಂಚಾಯತಿ ನಿರ್ದರಿಸಬಹುದು.
6. ಗ್ರಾಮಸಭೆಯ ಅಧ್ಯಕ್ಷತೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷ ಅಥವಾ ಇವರಿಬ್ಬರ ಗೈರು ಹಾಜರಿಯಲ್ಲಿ ಗ್ರಾಮ ಪಂಚಾಯತಿ ನಾಮ ನಿರ್ದೇಶನ ಮಾಡುವ ಅದರ ಸದಸ್ಯನೊಬ್ಬ ವಹಿಸಬೇಕು.
7. ಗ್ರಾಮ ಪಂಚಾಯತಿ ಅಧಿಕಾರಿಗಳು ಅಧ್ಯಕ್ಷನ ವಿವೇಚನೆಯಂತೆ ಗ್ರಾಮಸಭೆಗೆ ಹಾಜರಾಗಬೇಕು. ಮತ್ತು ಗ್ರಾಮಸಭೆಯ ಸಂಚಾಲಕನಾಗಿ ಗ್ರಾಮಪಂಚಾಯತಿಯ ವಿಶೇಷವಾಗಿ

ನಾಮನಿರ್ದೇಶಿಸಬಹುದಾದ ಒಬ್ಬ ಅಧಿಕಾರಿಯೂ ಸಭೆಗಳನ್ನು ಕರೆಯುವಲ್ಲಿ ಮತ್ತು ಅದರ ತೀರ್ಮಾನಗಳನ್ನು ಸಭಾ ನಡುವಳಿ ಪುಸ್ತಕದಲ್ಲಿ ದಾಖಲು ಮಾಡಲು ಮತ್ತು ಅದರ ಮೇಲೆ ಅನುಸರಣಾ ಕ್ರಮ ಕೈಗೊಳ್ಳಲು ಸಹಾಯ ಮಾಡಬೇಕು.

8. ಗ್ರಾಮಸಭೆಯ ತೀರ್ಮಾನಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ತರಲು ನೆರವು ನೀಡಲು ಮತ್ತು ಗ್ರಾಮಸಭೆಗಳು ಅಧಿಕಾರಿಗಳ ಪ್ರಯೋಗ ಮತ್ತು ಪ್ರಕಾರ್ಯಗಳ ನಿರ್ವಹಣೆಗಾಗಿ ಕನಿಷ್ಠ 10 ಸದಸ್ಯರ ಹಾಗೂ ಅದರಲ್ಲಿ ಕನಿಷ್ಠ ಅರ್ಧದಷ್ಟು ಮಹಿಳೆಯರನ್ನು ಒಳಗೊಂಡಿರುವಂತೆ ಉಪಸಮಿತಿ ರಚಿಸಬಹುದು.
9. ಗ್ರಾಮಸಭೆಯ ಎಲ್ಲ ತೀರ್ಮಾನಗಳು ಉಪಸ್ಥಿತರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ಅಂಗೀಕೃತವಾಗುತ್ತದೆ.
10. ಪ್ರತಿ ವರ್ಷ (ಓರಿಸ್ಸಾ, ಆಂಧ್ರ, ತಮಿಳ) ಗ್ರಾಮಸಭೆಯು ಪೆಬ್ರುವರಿಯಿಂದ ಜೂನ ತಿಂಗಳುಗಳಲ್ಲಿ ನಡೆಯುತ್ತದೆ. ಅಲ್ಲದೇ ಮೇ 1, 26 ಜೂನ್, 15 ಅಗಷ್ಟ ಹಾಗೂ 2 ಅಕ್ಟೋಬರ ರಂದು ಸಹ ವಿಶೇಷ ಸಭೆಯ ಹೊರತಾಗಿ ಗ್ರಾಮಸಭೇ ಕರೆಯಬಹುದು.
11. ಗ್ರಾಮಸಭೆ ನಡೆಸುವ ದಿನಾಂಕದ 15 ದಿನಗಳ ಮುಂಚಿತವಾಗಿ ವಲಯ ಅಭಿವೃದ್ಧಿ ಅಧಿಕಾರಿಗೆ ಆ ಕುರಿತು ಗ್ರಾಮಪಂಚಾಯತಿ ಮಾಹಿತಿ ನೀಡಬೇಕು.
12. ಗ್ರಾಮಸಭೆಯ ನಡೆಯುವ ಒಂದು ವಾರ ಮುಂಚಿತವಾಗಿ ಹಳ್ಳಿಯ ಎಲ್ಲ ಪ್ರಮುಖ ಸ್ಥಳಗಳಲ್ಲಿ ಕರಪತ್ರಗಳನ್ನು ಹಂಚುವ ಮೂಲಕ ಮತ್ತು ಚಿತ್ತಿಪತ್ರಗಳನ್ನು ಅಂಟಿಸುವ ಮೂಲಕ, ವಿಶೇಷವಾಗಿ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಮಹಿಳಾ ಮಂಡಳ, ಯುವಕ/ಯುವತಿ ಸಂಘಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಇವುಗಳನ್ನು ಅಂಟಿಸಬೇಕು. ಈ ಮೂಲಕ ಗ್ರಾಮಸಭೆಯ ಸಮಾವೇಶದ ಬಗ್ಗೆ ವ್ಯಾಪಕವಾದ ಪ್ರಚಾರವನ್ನು ಕೊಡಲಾಗುತ್ತದೆ. ಜೊತೆಗೆ ಗ್ರಾಮಸಭೆ ನಡೆಯುವ ಹಿಂದಿನ ದಿನ ಡಂಗೂರ ಹೊಡೆಯುವ ಮೂಲಕ ಪ್ರಚಾರ ನೀಡಲಾಗುತ್ತದೆ.
13. ಗ್ರಾಮ ಪಂಚಾಯತಿಯು ಒಂದುವಾರ ಕಾಲ ಪೂರ್ವದಲ್ಲಿ ಕನಿಷ್ಠ 25 ಸದಸ್ಯರಿಗೆ ಗ್ರಾಮಸಭೆಯ ಕುರಿತು ಪ್ರಕಟನಾ ಪತ್ರ ನೀಡಬೇಕು.
14. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಗ್ರಾಮಸಭೆಯ ಕಾರ್ಯಸೂಚಿಗಳನ್ನು ಸಿದ್ಧಪಡಿಸುತ್ತಾರೆ. ಚರ್ಚೆಯ ತರುವಾಯ, ಜನಗಳ ಸಲಹೆ ಸೂಚನೆಗಳನ್ನು ಮತ್ತು ಒಟ್ಟಾರೆ ಅಭಿಪ್ರಾಯಗಳನ್ನು ಒಳಗೊಂಡಿರುವ ನಡುವಳಿಯನ್ನು ಕಾರ್ಯದರ್ಶಿಗಳು ತಯಾರಿಸಬೇಕು.

ಗ್ರಾಮ ಪಂಚಾಯತಿ ಸೂಚನಾ ಫಲಕದಲ್ಲಿ ಹಾಗೂ ಹಳ್ಳಿಯ ಚೌವಡಿಯಲ್ಲಿ ನಡುವಳಿಯ ಪ್ರತಿಯನ್ನು ಹಚ್ಚಲಾಗುತ್ತದೆ. ತಾಲೂಕ ಪಂಚಾಯತಿಗೂ ಅದರ ಒಂದು ಪ್ರತಿಯನ್ನು

ಕಳುಹಿಸಿಕೊಡಲಾಗುತ್ತದೆ. ಅಥವಾ ಯವುದೇ ಅಧಿಕಾರಿಯ ಹೆಸರು ಮತ್ತು ನಡುವಳಿಗಳನ್ನು ಅನುಕ್ರಮವಾಗಿ ಯಾವುದೇ ನಿರ್ಣಯದ ಪರ ಅಥವಾ ವಿರುದ್ಧ ಮತಕೊಡುವ ಸದಸ್ಯರ ಹೆಸರುಗಳನ್ನು ಬರೆದಿಡುವ ಪುಸ್ತಕ ನಡುವಳಿ ಪುಸ್ತಕ.

ಸಭೆಯಲ್ಲಿ ಸದಸ್ಯರ ಉಪಸ್ಥಿತರ ನಡುವಳಿಕೆಗಳನ್ನು ಹಾಗೂ ನಿರ್ಣಯದ ಪರ ಹಾಗೂ ವಿರೋಧ ಮತ ನೀಡಿದ ಸದಸ್ಯರ ಹೆಸರುಗಳನ್ನು ಓದಿ ಹೇಳಿ ಮತ್ತು ಒಪ್ಪಿಕೊಂಡನಂತರ ಅಧ್ಯಕ್ಷತೆ ವಹಿಸಿದ ಮೇಲೆ ಅದಕ್ಕೆ ಸಹಿ ಹಾಕುತ್ತಾನೆ.

ಎಲ್ಲಾ ಸದಸ್ಯರಿಗೆ ಸಭೆಯ ನಡುವಳಿ ಪ್ರತಿಗಳನ್ನು ಒದಗಿಸಲಾಗುತ್ತದೆ. ಹಾಗಯೇ ಸಭೆಗಳಲ್ಲಿ ಅಂಗೀಕರಿಸಲಾದ ನಿರ್ಣಯಗಳ ಪರವಾಗಿ ವಿರುದ್ಧವಾಗಿ ಅನುಕ್ರಮವಾಗಿ ಮತ ನೀಡಿದ ಸದಸ್ಯರ ಹೆಸರುಗಳ ವಿವರಗಳನ್ನು ಒಳಗೊಂಡ ನಡುವಳಿಗಳ ಒಂದು ಪ್ರತಿಯನ್ನು ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿನಗಳ ಒಳಗೆ ಪ್ರದರ್ಶಿಸಬೇಕು.

ತಮಿಳುನಾಡಿನಲ್ಲಿ ಗ್ರಾಮಸಭೆ ವ್ಯವಸ್ಥೆ

ಕರ್ನಾಟಕಕ್ಕೆ ಹೋಲಿಸಿದಾಗ ಮತ್ತು ತಮಿಳುನಾಡಿನ ಓರಿಸ್ಸಾ ರಾಜ್ಯಗಳಲ್ಲಿ ಗ್ರಾಮಸಭೆಯ ಕಲ್ಪನೆ ಬಿನ್ನವಾದುದೇನಿಲ್ಲ. ಆದರೆ ಅದರ ನಿರ್ವಹಣೆಯಲ್ಲಿ ನಾವು ಕಲವು ಸೂಕ್ಷ್ಮ ಬದಲಾವಣೆಗಳನ್ನು ಕಾಣಬಹುದು. ಈ ರಾಜ್ಯಗಳಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಗಳಲ್ಲಿ ಗ್ರಾಮಸಭೆಯ ಮೂಲ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಹಾಗೂ ಸ್ಥಳೀಯಮಟ್ಟದಲ್ಲಿ ಸಾಮಾಜಿಕ ಸಮೀಕ್ಷೆಗೂ ಅನುಕೂಲ ಮಾಡಿಕೊಟ್ಟು ಸರ್ಕಾರದ ಕಾರ್ಯಕ್ರಮಗಳ ಜಾರಿ, ನಿಯೋಜನೆ ಕುರಿತಾಗಿ ಜನರೇ ಪ್ರತ್ಯಕ್ಷವಾಗಿ ಸಮೀಕ್ಷೆ ನಡೆಸುತ್ತಾರೆ. ಆ ಮೂಲಕ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಹಾಗೂ ಪಂಚಾಯತ ಸಂಸ್ಥೆಗಳ ಹೊಣೆಗಾಗಿಕೆ ಹೆಚಿಸಲು ಅನುಕೂಲ ಕಲ್ಪಿಸಲಾಗಿದೆ. ಅಂತೆಯೇ ಗ್ರಾಮಸಭೆ ಗ್ರಾಮೀಣ ಕಲ್ಯಾಣ ಯೋಜನೆ, ಮುಂಗಡ ಪತ್ರ ಪರಿಶೀಲನಾ ವರದಿ, ಫಲಾನುಭವಿಗಳ ಪಟ್ಟಿ ತಯಾರಿಸುವುದು ಹಾಗೂ ಅಭಿವೃದ್ಧಿ ಕಾರ್ಯಗಳ ಪರಾಮರ್ಶೆ ನಡೆಸುವ ಅದಿಕಾರ ಪಡೆದಿದೆ. ತಮಿಳುನಾಡಿನಲ್ಲಿ ಒಂದು ವರ್ಷದಲ್ಲಿ ಕಡ್ಡಾಯವಾಗಿ 4 ಅವಧಿಗೆ ಗ್ರಾಮಸಭೆ ನಡೆಸಲೇಬೇಕು. ಅದು ಜನೇವರಿ 26, ಮೇ1, ಅಗಷ್ಟ 15 ಹಾಗೂ ಅಕ್ಟೋಬರ 2

ಆಂದ್ರ ಪ್ರದೇಶ ಗ್ರಾಮಸಭಾ ವ್ಯವಸ್ಥೆ

ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಆಂದ್ರ ಪ್ರದೇಶದಲ್ಲಿ ಗ್ರಾಮಸಭೆಯನ್ನು ನಡೆಸಲಾಗುತ್ತದೆ. ಗ್ರಾಮ ಪಂಚಾಯತಿಗೆ 73ನೇ ತಿದ್ದುಪಡಿ ಅನ್ವಯ ನೀಡಲಾದ 29 ಕಾರ್ಯಗಳಲ್ಲಿ ಪ್ರಮುಖವಾಗಿ 10 ಕಾರ್ಯಗಳ ಜಾರಿಯಲ್ಲಿ ಗ್ರಾಮಸಭೆ ಇಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಅವುಗಳಲ್ಲಿ ಗ್ರಾಮೀಣಾಭಿವೃದ್ಧಿ ಗ್ರಾಮೀಣ ನೀರು ಸರಬರಾಜು, ಸಮಾಜ ಕಲ್ಯಾಣ ಹಿಂದುಳಿದ ವರ್ಗಗಳ ಕಲ್ಯಾಣ,

ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಶಾಲಾ ಶಿಕ್ಷಣ, ಶುದ್ಧ ಕುಡಿಯುವ ನೀರು, ನೈರ್ಮಲೀಕರಣ ಸೌಲಭ್ಯಗಳ ಕುರಿತು ಸಮಗ್ರ ಚರ್ಚೆ ನಡೆಸಲಾಗುತ್ತದೆ.

ಗ್ರಾಮಸಭೆ ನಡೆಸಲು ಕರ್ನಾಟಕ ಸರ್ಕಾರದ ಮಾರ್ಗಸೂಚಿ

ಅಧಿಕಾರ ವಿಕೇಂದ್ರೀಕರಣದ ಮೂಲಕ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆ ಅರ್ಥಪೂರ್ಣವಾಗಬೇಕಾದರೆ, ಆ ಜನರ ಸಬಲೀಕರಣವಾಗುವುದು ಅವಶ್ಯಕವಾಗಿದೆ. ಜನರ ಸಬಲೀಕರಣದ ಪೂರ್ಣ ಯಶಸ್ವಿ ರೂಪ ಪಡೆಯಲು ಗ್ರಾಮಸಭೆ ಒಂದು ಮಾಧ್ಯಮವಾಗಬಲ್ಲುದು. ಆ ನಿಟ್ಟಿನಲ್ಲಿ ಗ್ರಾಮಸಭೆ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದು ಅವಶ್ಯವಾಗಿದೆ.

ಕರ್ನಾಟಕ ಪಂಚಾಯತ ರಾಜ್ ಅಧಿನಿಯಮದ 1993ರ ಪ್ರಕಾರ ನಿಯಮಿತವಾಗಿ ಗ್ರಾಮಸಭೆ ನಡೆಸುವುದು ಕಡ್ಡಾಯ. ಈ ಕಾರಣಕ್ಕಾಗಿಯೇ ಗ್ರಾಮಸಭೆ ವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ನಡೆದುಕೊಂಡು ಹೋಗಲು ಕರ್ನಾಟಕ ಸರ್ಕಾರ ಇತ್ತೀಚೆಗೆ ಸುತ್ತೋಲೆಯೊಂದನ್ನು ಹೊರಡಿಸಿ ಸಂಖ್ಯೆ:ಆರ್.ಡಿ.ಪಿ.41/ಜಿ4/99 ದಿನಾಂಕ : 26-04-1999 ಆ ಮೂಲಕ ಗ್ರಾಮಸಭೆ ನಡೆಸಲು ಅಗ್ಯ ಮಾರ್ಗಸೂಚಿಗಳನ್ನು ನೀಡಿದೆ. ಗ್ರಾಮಸಭೆಗಳ ಸಬಲೀಕರಣದ ಅವಶ್ಯಕತೆ ಇದ್ದು ಆ ಮೂಲಕ ಜನರ ಅವಶ್ಯಕತೆ ಆದ್ಯತೆಯಾಧಾರಿತ ಯೋಜನೆಗಳ ಅನಷ್ಠಾನ ಹಾಗೂ ಸೌಲಭ್ಯಗಳ ಸದ್ಬಳಕೆ ಮೂಲಕ ತುಳಿತಕ್ಕೊಳಗಾದ ಹಾಗೂ ದುರ್ಬಲರ ಕಲ್ಯಾಣವನ್ನು ಸಾಧಿಸಲು ಗ್ರಾಮ ಪಂಚಾಯತಿಗಳು ಅಣಿಯಾಗಬೇಕೆನ್ನುವ ನಿಟ್ಟಿನಲ್ಲಿ ಗ್ರಾಮಸಭೆಯ ಕುರಿತಾಗಿ ಈ ಮುಂಚೆಯಿಂದ ಎಲ್ಲಾ ಮಾರ್ಗಸೂಚಿಗಳನ್ನು ಹಿಂಪಡೆದು ಹೊಸ ಮಾರ್ಗಸೂಚಿಯನ್ನು ಈ ಮೂಲಕ ಜಾರಿಗೆ ತಂದಿತು. ಆ ಮೂಲಕ ಗ್ರಾಮಸಭೇ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಗ್ರಾಮೀಣಾಭಿವೃದ್ಧಿಯ ಸ್ಫೂರ್ತಿಯ ಸೆಲೆಯಾಗಿ ಹೊರಹೊಮ್ಮಿತು.

3.4 ಗ್ರಾಮಸಭೆ ನಡೆಸಲು ಮಾರ್ಗಸೂಚಿಗಳು

1) ಗ್ರಾಮ ಸಭೆಯ ಸಮಾವೇಶ

ಅ) ಸಾಮಾನ್ಯವಾಗಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮಸಭೆಯು ಪ್ರತಿ ಮೂರು ತಿಂಗಳಿಗೊಮ್ಮೆ ಸೇರಬೇಕು. ಆ ಗ್ರಾಮಸಭೆ ಸಮಾವೇಶಗೊಳ್ಳಬಹುದಾದ ತಿಂಗಳು ಅವಧಿಗಳೆಂದರೆ,

1) ಮೊದಲ ತ್ರೈಮಾಸಿಕ ಸಭೆ ಎಪ್ರೀಲ್-ಮೇ,

2) ದ್ವಿತೀಯ ತ್ರೈಮಾಸಿಕ ಸಭೆ ಜುಲೈ-ಅಗಷ್ಟ

3) ತೃತೀಯ ತ್ರೈಮಾಸಿಕ ಸಭೆ ಅಕ್ಟೋಬರ-ನವ್ಹಂಬರ

4) ಚತುರ್ಥ ತ್ರೈಮಾಸಿಕ ಸಭೆ ಜನವರಿ-ಫೆಬ್ರುವರಿ

2) ಗ್ರಾಮಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು

ನಾಲ್ಕು ತ್ರೈಮಾಸಿಕ ಸಭೆಗಳಲ್ಲಿ ಚರ್ಚಿಸಬಹುದಾದ ವಿಷಯಗಳ ಕಾರ್ಯಪಟ್ಟಿ ಈ ರೀತಿಯಿದೆ.

ಪ್ರಥಮ ತ್ರೈಮಾಸಿಕ ಸಭೆ :

i) ಕಳೆದ ವರ್ಷಗಳ ಕಾರ್ಯಕ್ರಮಗಳ ಪರಿಶೀಲನೆ. ಪರಿಗಣನೆ ಹಾಗೂ ಅಭಿವೃದ್ಧಿಯ ಪುನರಾವಲೋಕನ

ii) ಗ್ರಾಮಪಂಚಾಯತಿಯ ವಾರ್ಷಿಕ ಯೋಜನೆ ಅನುಮೋದನೆ ಪಡೆಯುವುದು

iii) ಪೂರ್ವಯೋಜಿತ ಕಾರ್ಯಕ್ರಮ ಅಥವಾ ಯೋಜನೆಯ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವುದು.

ದ್ವಿತೀಯ ತ್ರೈಮಾಸಿಕ ಸಭೆ :

ಪ್ರಥಮ ತ್ರೈಮಾಸಿಕ ವರ್ಷದ ಕಾರ್ಯಗಳ ಪುನರಾವಲೋಕನ ಮಾಡುವುದು.

ತೃತೀಯ ತ್ರೈಮಾಸಿಕ ಸಭೆ :

i) ಪಂಚಾಯತ ಜಮಾಬಂದಿ ವರದಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಹಾಗೂ ಸಪ್ಟೆಂಬರ್ 15ರ ಒಳಗಾಗಿ ನಿಗದಿಯಾದ ನಿಯಮಾವಳಿಗನುಗುಣವಾಗಿ ಮುಗಿದಿರಬೇಕು.

ii) ಪಂಚಾಯತ ಜಮಾಬಂದಿ ವರದಿಯಲ್ಲಿ ನಿಗದಿಯಾದ ಅಂಶಗಳನ್ನು ಕಾರ್ಯರೂಪಕ್ಕೆ ತರುವುದು,.

iii) ಪಂಚಾಯತ ವಾರ್ಷಿಕ ಯೋಜನೆಯ ಅರ್ಧವಾರ್ಷಿಕ ಪರಿಶೀಲನೆ ಉಪದೇಶನೆ ಹಾಗೂ ಆರ್ಥಿಕ ಬೇಡಿಕೆ ಹಾಗೂ ಉಳಿತಾಯ ಮೊತ್ತದ ಪರಿಶೀಲನೆ

ಚತುರ್ಥ ತ್ರೈಮಾಸಿಕ ಸಭೆ :

i) ಮುಂದಿನ ವರ್ಷದಲ್ಲಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಯೋಜನೆಗಳ ಪೂರ್ವಸಿದ್ಧತೆ ಕುರಿತು ಚರ್ಚೆ ಮಾಡುವುದು.

ii) ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವ ಪ್ರಕ್ರಿಯೆ ಆರಂಭಿಸುವುದು.

iii) ಹೊಸ ತೆರಿಗೆ ದರಗಳನ್ನು ನಿರ್ಧರಿಸುವುದು, ಪರಿಶೋಧಿಸುವುದು.

3) ಗ್ರಾಮಸಭೆಯ ಪೂರ್ವಸಿದ್ಧತಾ ಕಾರ್ಯಗಳು :

ನಿಯಮಿತ ಕಾರ್ಯಸೂಚಿ ಹಾಗೂ ಸುತ್ತೋಲೆಗಳ ಮೂಲಕ ಗ್ರಾಮಸಭೆಯನ್ನು ನಿಯುಕ್ತಿಗೊಳಿಸಲಾಗುವುದು. ಹೀಗಾಗಿ ಪೂರ್ವಸಿದ್ಧತಾ ಕಾರ್ಯಗಳಲ್ಲಿ ಕಾರ್ಯಸೂಚಿ ಹಾಗೂ ಸುತ್ತೋಲೆಗಳ ಕುರಿತಾಗಿ ಸ್ಪಷ್ಟ ಕಾರ್ಯಗಳನ್ನು ನೆರವೇರಿಸಬೇಕು. ಅವುಗಳ ಜೊತೆಗೆ ಇನ್ನೂ ಕೆಲವು ಕಡ್ಡಾಯ ಕಾರ್ಯಗಳನ್ನು ನೆರವೇರಿಸಬೆಕು. ಅವುಗಳೆಂದರೆ,

1) ಗ್ರಾಮಸಭೆಯ ಪ್ರಸ್ತಾಪಿತ ಕಾರ್ಯಸೂಚಿಯ ಮೇಲೆ ಚರ್ಚಿಸುವುದು.

2) ಎಲ್ಲಾ ಚುನಾಯಿತ ಪ್ರತಿನಿಧಿಗಳು ತಮ್ಮ ವಾರ್ಡಿನಲ್ಲಿ ಸಭೆ ನಡೆಸಿ, ಫಲಾನುಭವಿಗಳ ಪಟ್ಟಿ, ಯೋಜನೆ ಹಾಗೂ ಕಾರ್ಯಕ್ರಮಗಳ ಕುರಿತು ಚರ್ಚಿಸಿ ಸಲಹೆ ಪಡೆಯಬೇಕು.ಜೊತೆಗೆ ಈ ಕಾರ್ಯಗಳ ಸಂಬಂಧೀ ಪಂಚಾಯತಿಯೊಂದಿಗೆ ಅಗತ್ಯ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವುದು.

3) ಗ್ರಾಮಸಭೆ ನಡೆಯುವ ಪೂರ್ವ 15ದಿನ ಗ್ರಾಮಸಭೆ ಕುರಿತು ಸಾರ್ವಜನಿಕರಿಗೆ ಡಂಗುರ, ಭಿತ್ತಿ ಚಿತ್ರ, ಕರಪತ್ರ, ಪಂಚಾಯತ ಸೂಚನಾ ಫಲಕದ ಮೂಲಕ ಅವರ ಗಮನಕ್ಕೆ ತರಬೇಕು. ಜೊತೆಗೆ ಮಹಿಳೆಯರು ಹಾಗೂ ಭೂ-ರಹಿತ ಕೃಷಿ ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಗ್ರಾಮಸಭೆಯ ಸ್ಥಳ ಹಾಗೂ ಸಮಯ ನಿಗದಿಪಡಿಸಬೇಕು.

4) ಗ್ರಾಮಸಭೆಯ ಸಭೆಗಳು :

ಗ್ರಾಮಸಭೆ ನಡೆಸಲು ಪಂಚಾಯತಿ ಮತದಾರರ ಪಟ್ಟಿಯಲ್ಲಿ ಹೆಸರಿರುವ ಒಟ್ಟು ಸದಸ್ಯರ 1/10 ರಷ್ಟು ಜನ ಸಭೆಯಲ್ಲಿ ಭಾಗವಹಿಸಲೇಬೇಕು. ಅಥವಾ 100 ಜನ ಅಥವಾ ಯಾವುದು ಕಡಿಮೆಯೋ ಅದು. ಜೊತೆಗೆ 1/3ರಷ್ಟು ಮಹಿಳಾ ಸದಸ್ಯರು, ಅನುಸೂಚಿತ ಜಾತಿ, ಅನುಸೂಚಿತ ಪಂಗಡದ ಜನರು ಅವರ ಜನಸಂಖ್ಯೆಗೆ ಅನುಗುಣವಾಗಿ ಪಾಲ್ಗೊಳ್ಳಲೇಬೇಕು. ಗ್ರಾಮಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರು ಗ್ರಾಮಸಭೆಯಲ್ಲಿ ಹಾಜರಿರಬೇಕು. ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಬೇಕು. ಪಂಚಾಯತ ಕಾರ್ಯದರ್ಶಿ ಎಲ್ಲಾ ಗ್ರಾಮಸಭೆಗಳಲ್ಲಿ ಹಾಜರಿರುವುದು ಕಡ್ಡಾಯ. ಜೊತೆಗೆ ಪಂಚಾಯತಿಯು ಅಪೇಕ್ಷೆಪಟ್ಟರೆ, ಇತರೇ ಪಂಚಾಯತ ಅಥವಾ ಸಂಬಂಧೀ ಅಧಿಕಾರಿಗಳು ಗ್ರಾಮಸಭೆಯಲ್ಲಿ ಹಾಜರಿರಬೇಕು. ಇದರ ಜೊತೆಗೆ ಈ ಕೆಳಕಂಡ ಅಧಿಕಾರಿಗಳೂ ಹಾಜರಿರಬೇಕು.

ಎ) ಗ್ರಾಮದಲ್ಲಿನ ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು.

ಬಿ) ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರು.

ಸಿ) ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ.

ಡಿ) ಸಂಬಂಧಿ ಪಶು ವೈದ್ಯರು.

ಇ) ಗ್ರಾಮೀಣ ಅಥವಾ ಸ್ಥಳೀಯ ಬ್ಯಾಂಕಿನ ವ್ಯವಸ್ಥಾಪಕರು.

ಎಫ್) ಸಂಬಂಧಿತ ವಲಯದ ಸಹಾಯಕ ಕೃಷಿ ಅಧಿಕಾರಿಗಳ ಸಹಾಯಕರು.

ಜಿ) ಪಂಚಾಯತ ಕಾರ್ಯದರ್ಶಿ ಹಾಗೂ ಕಂದಾಯ ನಿರೀಕ್ಷಕರು.

ಎಚ್) ಅಂಗನವಾಡಿ ಕಾರ್ಯಕರ್ತರು.

ಆಯ್) ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರು.

ಜೆ) ಸಾಮಾಜಿಕ ಅರಣ್ಯ ಅಧಿಕಾರಿಗಳು.

ಕೆ) ಮಹಿಳಾ ಮಂಡಳ, ಯುವಕ ಮಂಡಳ ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು.

೫) ಪ್ರಶ್ನೆಗಳನ್ನು ನಿಗದಿಪಡಿಸುವ ವಿಧಾನ :

ಯಾವುದೇ ಅವಶ್ಯಕ ವಿಷಯ ಚರ್ಚಿಸಬೇಕಾದರೆ ಸಭೆಯಲ್ಲಿ ಹಾಜರಿರುವ ಜನರು ಮತದಾನದ ಮೂಲಕ ಠರಾವು ಪಾಸು ಮಾಡಬಹುದು, ಸಾಮಾನ್ಯವಾಗಿ ಕೈ ಎತ್ತುವ ಮೂಲಕ ಠರಾವು ಅಂಗೀಕರಿಸಬಹುದು. ಅಥವಾ ತೀರಾ ಅವಶ್ಯಕವಾದಾಗ ಗುಪ್ತ ಮತದಾನ ನಡೆಸಬಹುದು.

6) ಠರಾವು ಪಾಸು ಮಾಡುವ ವಿಧ :

ಠರಾವನ್ನು ದೃಢೀಕರಣ, ಅಭಿಪ್ರಾಯ, ಶಿಫಾರಸ್ಸು, ಸಲಹೆ, ಒಪ್ಪಿಗೆಯ ದಾಖಲು ಅಥವಾ ತಿರಸ್ಕೃತ ದಾಖಲೆಯ ಮೂಲಕ ಪಾಸು ಮಾಡಬಹುದು. ಜೊತೆಗೆ ವಿನಂತಿ ಹಾಗೂ ಗಮನ ಸೆಳೆಯುವ ಸೂಚನೆಯ ಮೂಲಕ ಕೂಡ ಠರಾವನ್ನು ಪಾಸು ಮಾಡಬಹುದು.

7) ನಡಾವಳಿ ಪುಸ್ತಕ :

ಎ) ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ನಡಾವಳಿ ಪುಸ್ತಕದಲ್ಲಿ ಕನ್ನಡದಲ್ಲೇ ದಾಖಲಿಸಬೇಕು. ಸಭೆಯಲ್ಲಿ ಹಾಜರಿರುವ ಎಲ್ಲಾ ಸದಸ್ಯರು ಇದರಲ್ಲಿ ಸಹಿಮಾಡಬೇಕು. ಮತ್ತು ಸಭೆಯ ಅಧಿಕಾರಿಗಳ ಅಧ್ಯಕ್ಷರ ಸಹಿ ಕಡ್ಡಾಯವಾಗಿದ್ದು, ಪಂಚಾಯತಿ ಕಾರ್ಯದರ್ಶಿ ಈ ಎಲ್ಲಾ ಕಾರ್ಯಗಳನ್ನು ನೆರವೇರಿಸಬೇಕು.

ಬಿ) ಪಂಚಾಯತ ಕಾರ್ಯದರ್ಶಿಯ ಸಭೆಯ ನಿರ್ಧಾಗಳು, ಶಿಫಾರಸ್ಸು ಮತ್ತು ಸಲಹೆಗಳನ್ನು ದಾಖಲು ಮಾಡಿ ದಾಖಲಾತಿಯ ಒಂದು ಪ್ರತಿಯನ್ನು ಪಂಚಾಯತಿಯಲ್ಲಿ ಕಾಯ್ದಿರಿಸಬೇಕು.

೮) ದಾಖಲೆಗಳು :

ಗ್ರಾಮಸಭೆಯಲ್ಲಿ ಅವಶ್ಯಕವಿರುವ, ಲಭ್ಯವಿರುವ ಛಾಯಾಚಿತ್ರಗಳನ್ನು ತೆಗೆದಿರಿಸಬೇಕು. ಗ್ರಾಮಸಭೆಯ ಕುರಿತಾಗಿ ಕರ್ನಾಟಕ ಸರಕಾರ ನೀಡಿದ ಈ ಮಾರ್ಗಸೂಚಿಗಳು ಗ್ರಾಮಸಭೆಯ ವ್ಯವಸ್ಥಿತವಾದ ಸನ್ನಿವೇಶಕ್ಕೆ ತುಂಬಾ ಸಹಕಾರಿಯಾಗಿದೆ. ಗ್ರಾಮಸಭೆಯ ಕುರಿತಾಗಿ ಈ ಮುಂಚೆ ಇದ್ದ ಎಲ್ಲ ಗೊಂದಲಗಳಿಗೆ ಇದು ತೆರೆ ಎಳೆದಿದೆ.

3.5 ಗ್ರಾಮಸಭೆಯ ಕಾರ್ಯ ಚಟುವಟಿಕೆಗಳು

1) ಗ್ರಾಮ ಪಂಚಾಯತಿಯು ತಯಾರಿಸಿದ ವಾರ್ಷಿಕ ಯೋಜನೆಯನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು.

2) ಗ್ರಾಮ ಪಂಚಾಯತಿಯ ಮೂಲಕ ವಾರ್ಡ ಸಭೆಗಳ ಶಿಫಾರಸ್ಸುಗಳು ಮತ್ತು ಸಲಹೆಗಳನ್ನು ಪಡೆದುಕೊಂಡು ಮತ್ತು ಪರಿಗಣಿಸಿದ ತರುವಾಯ, ಜಿಲ್ಲಾ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಮೂಲಕ ಪಂಚಾಯತಿ ಪ್ರದೇಶದಲ್ಲಿ ಅನುಷ್ಠಾನಗೊಳಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾಪಗಳನ್ನು ಸೃಜಿಸುವುದು ಮತ್ತು ಅವುಗಳ ಆದ್ಯತೆಯನ್ನು ನಿರ್ಧರಿಸುವುದು.

3) ಗ್ರಾಮ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು, ಜಿಲ್ಲಾ ಪಂಚಾಯಿತಿಯು ಅಥವಾ ಸರ್ಕಾರವು ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಗಾಗಿ ಪಂಚಾಯತಿ ಪ್ರದೇಶದಿಂದ ಅತ್ಯಂತ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ವಾರ್ಡ ಸಭೆಗಳು ಕಳುಹಿಸಿದ ವೈಯುಕ್ತಿಕ ಫಲಾನುಭವಿಗಳ ಆದ್ಯತಾಪಟ್ಟಿಯನ್ನು ಪರಿಗಣಿಸಿದ ತರುವಾಯ ಆದ್ಯತಾ ಕ್ರಮಕ್ಕನುಸಾರವಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು, ಸಂಬಂಧಪಟ್ಟ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿ ಅಥವಾ ಸಂದರ್ಭಾನುಸಾರ ಸರ್ಕಾರವು ಅಂತಹ ಪಟ್ಟಿಗೆ ಬದ್ಧವಾಗಿರತಕ್ಕದ್ದು.

4) ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪ್ರಸಾರ ಮಾಡುವುದು ಮತ್ತು ಸ್ಥಳೀಯವಾಗಿ ಲಭ್ಯವಿರುವ ಸೌಲಭ್ಯಗಳನ್ನು ಒದಗಿಸುವು ಮೂಲಕ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸುವಲ್ಲಿ ನೆರವು ನೀಡುವುದು. ಹಾಗೂ ಇವುಗಳ ನಿರ್ವಹಣೆಯ ಸಂಬಂಧದಲ್ಲಿ ಮಾಹಿತಿ ಒದಗಿಸುವುದು.

5) ಈ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದಕ್ಕಾಗಿ ಅಗತ್ಯವಾದ ವಿವರಗಳನ್ನು ಸಂಗ್ರಹಿಸುವಲ್ಲಿ ಮತ್ತು ಕ್ರೋಢೀಕರಿಸುವಲ್ಲಿ ಸಾಮಾಜಿಕ, ಆರ್ಥಿಕ ಅಂಕಿ-ಅಂಶಗಳನ್ನು ಸಂಗ್ರಹಿಸುವಲ್ಲಿ ಮತ್ತು ಆರೋಗ್ಯ ಸಾಕ್ಷರತೆ ಮತ್ತು ಅದೇ ಬಗೆಯ ಅಭಿವೃದ್ಧಿ ಆಂದೋಲನಗಳಲ್ಲಿ ಭಾಗವಹಿಸುವಂತೆ ಪ್ರಚಾರ ಮಾಡುವಲ್ಲಿ ಗ್ರಾಮ ಪಂಚಾಯಿತಿಗೆ ನೆರವು ನೀಡುವುದು.

6) ಗ್ರಾಮ ಸಭೆಯ ಸಭೆಯ ತರುವಾಯ ಮುಂದಿನ ಆರು ತಿಂಗಳುಗಳು ಅವಧಿಯಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಲ್ಲಿಸಬೇಕಾದ ಸೇವೆಗೆ ಮತ್ತು ಅವರು ಮಾಡಲು ಉದ್ದೇಶಿಸಿದ ಕಾಮಗಾರಿಗಳಗೆ ಸಂಬಂಧಿಸಿದಂತೆ ಅವರಿಂದ ಮಾಹಿತಿಯನ್ನು ಪಡೆಯುವುದು.

7) ಪಂಚಾಯಿತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಪ್ರತಿಯೊಂದು ತೀರ್ಮಾನವು ಅಷ್ಟು ವಿವೇಚನಾಯುಕ್ತವಾಗಿದೆಯೆಂಬ ಬಗ್ಗೆ ಗ್ರಾಮ ಪಂಚಾಯತಿಯಿಂದ ಮಾಹಿತಿ ಪಡೆಯುವುದು.

8) ಗ್ರಾಮಸಭೆಯ ತೀರ್ಮಾನದ ಮೇಲೆ ಕೈಗೊಂಡ ಅನುಸರಣಾ ಕ್ರಮದ ಬಗ್ಗೆ ಗ್ರಾಮ ಪಂಚಾಯತಿಯಿಂದ ಮಾಹಿತಿ ಪಡೆಯುವುದು.

9) ಅಭಿವೃದ್ಧಿ ಕಾಮಗಾರಿಗಳಗಾಗಿ, ಸ್ವಯಂ ಸೇವಾ ಕಾರ್ಮಿಕರನ್ನು ಮತ್ತು ಹಣದ ರೂಪದಲ್ಲಿ ಮತ್ತು ವಸ್ತು ರೂಪದಲ್ಲಿ ವಂತಿಗೆಗಳನ್ನು ಒದಗಿಸುವುದು ಮತ್ತು ಸಂಗ್ರಹಿಸುವುದು ಮತ್ತು ಸ್ವಯಂ ಸೇವಾ ತಂಡಗಳ ಮೂಲಕ ಅಂತಹ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುವುದು.

10) ಗ್ರಾಮ ಪಂಚಾಯಿತಿಗೆ ತೆರಿಗೆಗಳನ್ನು ಸಂದಾಯ ಮಾಡುವಂತೆ ಮತ್ತು ಸಾಲಗಳನ್ನು ಮರುಸಂದಾಯ ಮಾಡುವಂತೆ, ಗ್ರಾಮಸಭೆಯ ಸದಸ್ಯರನ್ನು ಮನವೊಲಿಸಲು ಪ್ರಯತ್ನಿಸುವುದು.

11) ವಾರ್ಡ ಸಭೆಗಳ ಸಲಹೆಗಳನ್ನು ಪರಿಗಣಿಸಿದ ತರುವಾಯ,. ಬೀದಿ ದೀಪಗಳು, ಬೀದಿ ಅಥವಾ ಸಮುದಾಯ ನೀರಿನ ನಲ್ಲಿಗಳು, ಸಾರ್ವಜನಿಕ ಭಾವಿಗಳು, ಸಾರ್ವಜನಿಕ ನೈರ್ಮಲ್ಯ ಘಟಕಗಳು, ನೀರಾವರಿ ಸೌಲಭ್ಯಗಳು ಮತ್ತು ಅದರ ಇತರ ಸಾರ್ವಜನಿಕ ಸೌಕರ್ಯ ಯೋಜನೆಗಳಗಾಗಿ ಸ್ಥಳವನ್ನು ನಿರ್ಣಯಿಸುವುದು ಹಾಗೂ ಅವುಗಳಲ್ಲಿಯ ಕೊರತೆಗಳನ್ನು ಗುರುತಿಸುವುದು ಮತ್ತು ವಾರ್ಡ ಸಭೆಗಳ ಸಲಹೆಗಳನ್ನು ಪರಿಗಣಿಸಿದ ತರುವಾಯ ಪರಿಹಾರ ಕ್ರಮಗಳನ್ನು ಸಲಹೆ ಮಾಡುವುದು ಹಾಗೂ ಕಾಮಗಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸಲಾಗಿದೆ ಎಂದು ವರದಿ ನೀಡುವುದು. ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿವಾರಣೆಗಳಿಂದ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ಅರಿವು ಮೂಡಿಸುವುದು.

12) ಪಂಚಾಯತಿ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಯ ನೌಕರರಿಗೆ ನೆರವು ನೀಡುವುದು ಮತ್ತು ಕಸವನ್ನು ತೆಗೆದು ಹಾಕುವಲ್ಲಿ ಸ್ವಯಂ ಸೇವೆ ಸಲ್ಲಿಸುವುದು.

13) ಪಂಚಾಯತಿ ಪ್ರದೇಶದಲ್ಲಿ ವಯಸ್ಕ ಶಿಕ್ಷಣ ಕಾರ್ಯಕ್ರಮಕ್ಕೆ ಉತ್ತೇಜನ ನೀಡುವುದು.

14) ಪಂಚಾಯತಿ ಪ್ರದೇಶದಲ್ಲಿಯ ಶಾಲಾ ಪುರೋಭಿವೃದ್ಧಿ ಸಂಘಗಳು, ಅಂಗನವಾಡಿ, ಮಹಿಳಾ ಸಮಾಜ ಯುವಕ ಹಾಗೂ ಯುವತಿ ಮಂಡಳ, ಸ್ವ-ಸಹಾಯ ಗುಂಪು, ಹಾಗೂ ಸ್ತ್ರೀಶಕ್ತಿ ಚಟುವಟಿಕೆಗಳಗೆ ನೆರವು ನೀಡುವುದು.

15) ವಿಶೇಷವಾಗಿ ರೋಗ ಪ್ರತಿಬಂಧ ಮತ್ತು ಕುಟುಂಬ ಕಲ್ಯಾಣ, ಜನಸಂಖ್ಯೆ ನಿಯಂತ್ರಣದ ಹಾಗೂ ಜಾನುವಾರು ರೋಗ ನಿಯಂತ್ರಣದ ವಿಷಯದಲ್ಲಿ ಪಂಚಾಯತಿ ಪ್ರದೇಶದಲ್ಲಿಯ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಚಟುವಟಿಕೆಗಳಗೆ ನೆರವು ನೀಡುವುದು ಮತ್ತು ಸಾಂಕ್ರಮಿಕ ರೋಗಗಳನ್ನು

ಮತ್ತು ನೈಸರ್ಗಿಕ ವಿಕೋಪಗಳು ಸಂಭವಿಸಿದ ಬಗ್ಗೆ ಕೂಡಲೇ ವರದಿ ಮಾಡಲು ವ್ಯವಸ್ಥೆ ಮಾಡುವುದು.

16) ಪಂಚಾಯತಿ ಪ್ರದೇಶದಲ್ಲಿಯ ಜನರ ವಿವಿಧ ಸಮೂಹಗಳ ನಡುವೆ ಕೋಮು ಸೌಹಾರ್ದತೆ ಮತ್ತು ಐಕ್ಯತೆಯನ್ನು ಬೆಳೆಸುವುದು. ಮತ್ತು ಸ್ಥಳೀಯ ಜನರ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಲು ಸಾಂಸ್ಕೃತಿಕ ಉತ್ಸವಗಳು. ಸಾಹಿತ್ಯ ಚಟುವಟಿಕೆಗಳು ಮತ್ತು ಕ್ರೀಡಾಕೂಟಗಳನ್ನು ವ್ಯವಸ್ಥೆಗೊಳಿಸುವುದು.

17) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಆಸ್ತಿಗಳಾದ ಗೋಮಾಳ. ಕೆರೆ. ಕೆರೆಯಂಗಳ. ಅಂತರ್ಜಲ. ದನಕರುಗಳು ಮೇಯುವ ಜಾಗ. ಗಣಿ ಇತ್ಯಾದಿಗಳನ್ನು ಸಂರಕ್ಷಿಸುವುದು ಹಾಗೂ ನಿರ್ವಹಿಸುವುದು.

18) ಜಾತಿ. ಮತ. ಲಿಂಗ ಇತ್ಯಾದಿಗಳ ಆಧಾರದ ಮೇಲೆ ತಾರತಮ್ಯ ಅಥವಾ ಭೇದಭಾವ ಮಾಡದಂತೆ ಕ್ರಮಕೈಗೊಳ್ಳುವುದು ಹಾಗೂ ಮದ್ಯಪಾನದಂಗಡಿಗಳಿಗೆ. ಮಾದಕ ದ್ರವ್ಯ ಮಾರುವ ಅಂಗಡಿಗಳಿಗೆ ಹಾಗೂ ಜೂಜಾಟದ ಅಂಗಡಿಗಳಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟುಮಾಡುವಂತಹ ಯಾವುದೇ ಚಟುವಟಿಕೆಗಳಿಗೆ ಲೈಸನ್ಸ್ ನೀಡದಿರುವಂತೆ ಗ್ರಾಮ ಪಂಚಾಯತಿಗೆ ನಿರ್ದೇಶನ ನೀಡುವುದು.

19) ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇರಬಹುದಾದ ಬಾಲ ಕಾರ್ಮಿಕರನ್ನು ಗುರುತಿಸುವುದು ಹಾಗೂ ಅವರ ಪುನರ್ವಸತಿಗಾಗಿ ಕ್ರಮ ಕೈಗೊಳ್ಳುವುದು. ಹಾಗೂ ಈ ಸಂಬಂಧದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಗದಿಪಡಿಸಿರುವ ಕಾನೂನು ಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಾಯ ನೀಡುವುದು ಮತ್ತು ನಿಯಮಿಸಬಹುದಾದಂತೆ ಅಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಅಥವಾ ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

ಅಧ್ಯಾಯ ೪

ಗ್ರಾಮೀಣಾಭಿವೃದ್ಧಿ, ಜನರ ಸಹಭಾಗಿತ್ವ ಮತ್ತು ಪಂಚಾಯತಿ

೪.೧ ಗ್ರಾಮೀಣಾಭಿವೃದ್ಧಿಯ ಅರ್ಥ -ವ್ಯಾಖ್ಯೆ

೪.೨ ಗ್ರಾಮೀಣಾಭಿವೃದ್ಧಿಯ ಸ್ವರೂಪ

೪.೩ ಗ್ರಾಮೀಣಾಭಿವೃದ್ಧಿ ಒಳಗೊಂಡಿರುವ ಮೂಲಾಂಶಗಳು

೪.೪ ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿಯ ಪಾತ್ರ

೪.೫ ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ

೪.೬ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರು ಮತ್ತು ದಲಿತರ ಪಾಲ್ಗೊಳ್ಳುವಿಕೆ

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ

ಇಪ್ಪತ್ತೊಂದನೇ ಶತಮಾನದ ಮೊದಲ ದಶಕದ ಕೊನೆಯ ಹಂತದಲ್ಲಿ ನಿಂತು ನೋಡುವಾಗ ಸ್ವತಂತ್ರ ಭಾರತವು ಕಳೆದ ಆರು ದಶಕಗಳಲ್ಲಿ ಬಹಳಷ್ಟು ಸಾಧನೆಗಳನ್ನು ನಡೆಸಿರುವುದು ನಮ್ಮ ಗಮನ ಸೆಳೆಯುವುದು. ಅಣು ವಿಜ್ಞಾನ, ಕಂಪ್ಯೂಟರ್ ಸಾಫ್ಟ್‌ವೇರ್, ಮಾಹಿತಿ ತಂತ್ರಜ್ಞಾನ, ಉನ್ನತ ಶಿಕ್ಷಣ, ವೈದ್ಯಕೀಯ ಕ್ಷೇತ್ರ, ಕೆಲವು ನಿರ್ದಿಷ್ಟ ಕೈಗಾರಿಕಾ ವಸ್ತುಗಳ ಉತ್ಪಾದನೆ [ಉದಾ: ಹೊಲಿಗೆ ಯಂತ್ರ, ಸೀಲಿಂಗ್ ಫ್ಯಾನ್, ಕೈಗಡಿಯಾರ, ಚರ್ಮ ಹಾಗೂ ಬಟ್ಟೆಯ ಉತ್ಪಾದನೆ, ಯಂತ್ರಗಳ ಬಿಡಿಭಾಗಗಳು, ಇತ್ಯಾದಿ] ಮುಂತಾದ ರಂಗಗಳಲ್ಲಿ ಭಾರತವು ಬಹಳಷ್ಟು ಅಭಿವೃದ್ಧಿ ಸಾಧಿಸಿದೆ. ದೇಶದ ಅರ್ಥವ್ಯವಸ್ಥೆ ವರ್ಷದಿಂದ ವರ್ಷಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಹೆಚ್ಚು ಬಲಗೊಳ್ಳುತ್ತಾ ಹೋಗುತ್ತಿದೆ. ಇಂತಹ ಕೆಲವು ಸಾಧನೆಗಳ ಹೊರತಾಗಿಯೂ ದೇಶದಲ್ಲಿ ಬಡತನ ಹಾಗೂ ನಿರುದ್ಯೋಗಗಳು ಬಹಳ ವ್ಯಾಪಕ ಸ್ವರೂಪದಲ್ಲಿರುವುದು ಒಂದು ವಿರೋಧಾಭಾಸದಂತೆ ಕಾಣಬರುವುದು. ಬಡವ-ಶ್ರೀಮಂತ, ಶಿಕ್ಷಿತ-ಅಶಿಕ್ಷಿತ, ನಗರ-ಗ್ರಾಮ, ಸ್ತ್ರೀ-ಪುರುಷ- ಎಂಬ ವ್ಯತ್ಯಾಸಗಳು ಇಲ್ಲಿ ಅತಿರೇಕದ ಸ್ಥಿತಿಯಲ್ಲಿವೆ.

ದೇಶದ ಗ್ರಾಮೀಣ ಭಾಗದ ಕಡೆಗೆ ಕಣ್ಣು ಹಾಯಿಸಿದಾಗ ಅಲ್ಲಿನ ಕೊರತೆಗಳು ಹಾಗೂ ಸಮಸ್ಯೆಗಳು ದೇಶದ ಅಭಿವೃದ್ಧಿಯ ಓಟಕ್ಕೆ ತಡೆಗೋಡೆಗಳನ್ನೊಡ್ಡುವಂತೆ ಕಾಣಬರುವುದು. "ಯೋಜನಾ ಆಯೋಗ" ಹಾಗೂ "ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಶನ್" ಸಂಸ್ಥೆಗಳು ನಡೆಸಿದ ಆರ್ಥಿಕ ಸಮೀಕ್ಷೆಯ ಮುನ್ನಂದಾಜಿನಂತೆ 2007ರಲ್ಲಿ ಕೂಡ ಭಾರತದ ಗ್ರಾಮಾಂತರ ಪ್ರದೇಶದ ಶೇ.15% ರಷ್ಟು ಮಂದಿ [49.6ದಶಲಕ್ಷ ಮಂದಿ] ಬಡತನದ ರೇಖೆಗಿಂತಲೂ ಕೆಳಗಿನ ಸ್ಥಿತಿಯಲ್ಲಿರುವ ಪರಿಸ್ಥಿತಿಯಿದೆ. ಇದಕ್ಕೆ ಪೂರಕವಾಗಿ ಎಂಬಂತೆ ಇದೇ ಸಮೀಕ್ಷೆಯ 2000ದ ವರದಿಯಂತೆ ದೇಶದ ಗ್ರಾಮಾಂತರ ಭಾಗದಲ್ಲಿ ಸುಮಾರು 19.5 ದಶಲಕ್ಷ ಮಂದಿ ನಿರುದ್ಯೋಗಿಗಳಾಗಿದ್ದಾರೆ. ದೇಶದ ಜನಸಂಖ್ಯೆಯ ಶೇ.72ರಷ್ಟು ಮಂದಿ ಇಂದಿಗೂ ಗ್ರಾಮಾಂತರ ಪ್ರದೇಶದಲ್ಲಿದ್ದು, ಅವರಲ್ಲಿ ಶೇ.65ರಷ್ಟು ಮಂದಿ ಕೃಷಿಯನ್ನೇ ಅವಲಂಬಿಸಿರುವಾಗ – ಈ ಪ್ರದೇಶದ ಮತ್ತು ಈ ಭಾಗದ ಜನರ ಅಭಿವೃದ್ಧಿಯಾಗದೆ ದೇಶ ಅಭಿವೃದ್ಧಿಯಾಗದು ಎಂಬಂಶ ಎಲ್ಲರಿಗೂ ಮನವರಿಕೆಯಾಗಿದೆ. ಅಂತಯೇ "ಗ್ರಾಮೀಣ ಅಭಿವೃದ್ಧಿ" ಎಂಬುದು ಪ್ರಾಮುಖ್ಯ ಪಡೆದ ಅಂಶವಾಗಿದೆ. ಕೇಂದ್ರ ಸರ್ಕಾರ ಕೂಡ 1980ರ ದಶಕದಿಂದ "ಗ್ರಾಮೀಣಾಭಿವೃದ್ಧಿ"ಯ ಕಾರ್ಯಗಳಿಗೆ ವಿಶೇಷ ಗಮನ ಕೊಡುವ ದೃಷ್ಟಿಯಿಂದ "ಗ್ರಾಮೀಣಾಭಿವೃದ್ಧಿ ಸಚಿವಾಲಯ" ಎಂಬ ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಿದೆ. ಮಾತ್ರವಲ್ಲ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಅಧ್ಯಯನದ ಹಂತದಲ್ಲಿಯೂ ಗ್ರಾಮೀಣಾಭಿವೃದ್ಧಿ ಕುರಿತಾದ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಮಹತ್ವ ನೀಡಲಾಗಿದೆ.

4.1 ಗ್ರಾಮೀಣಾಭಿವೃದ್ಧಿಯ ಅರ್ಥ, ವ್ಯಾಖ್ಯೆ

ಗ್ರಾಮೀಣಾಭಿವೃದ್ಧಿಯ ಅರ್ಥ : ಶ್ರೀ ಸಿ.ಎನ್.ಶಂಕರರಾವ ಅವರು ಅಭಿಪ್ರಾಯಪಡುವಂತೆ ಭಾರತವು ಹಳ್ಳಿಗಳ ದೇಶವಾಗಿರುವುದರಿಂದ ಭಾರತದ ಪ್ರಗತಿಯು ಹಳ್ಳಿಗಳ ಪ್ರಗತಿಯನ್ನು ಬಹಳವಾಗಿ ಅವಲಂಬಿಸಿರುತ್ತದೆ. ದೇಶದ ಜನಸಂಖ್ಯೆಯ ೫ ಭಾಗದಷ್ಟು ಮಂದಿ ಹಳ್ಳಿಗಳಲ್ಲೇ ವಾಸಿಸುತ್ತಿರುವ ಚಿತ್ರಣ ಇಂದಿಗೂ ಬದಲಾಗಿಲ್ಲ. ಮಹಾತ್ಮ ಗಾಂಧೀಜಿ, ವಿನೋಬಾ ಭಾವೆ, ಜಯಪ್ರಕಾಶ್ ನಾರಾಯಣ ಮುಂತಾದ ರಾಷ್ಟ್ರೀಯ ನಾಯಕರು ಹಳ್ಳಿಗಳ ಅಲಕ್ಷ್ಯ ಸಲ್ಲದೆಂದು ಬಹಳ ಹಿಂದೆಯೇ ಎಚ್ಚರಿಸಿದ್ದರು. ಭಾರತ ಸರ್ಕಾರವು ಸ್ವಾತಂತ್ರ್ಯಾನಂತರದಲ್ಲಿ ಗ್ರಾಮಗಳ ಹಾಗೂ ಗ್ರಾಮಸ್ಥರ ಅಭಿವೃದ್ಧಿಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವು "ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ"ಗಳೆಂದು ಕರೆಯಲ್ಪಡುತ್ತಿವೆ.

- ಗ್ರಾಮೀಣಾಭಿವೃದ್ಧಿ ಎಂದರೆ ಕೇವಲ ಕೃಷಿಯ ಅಭಿವೃದ್ಧಿ ಮಾತ್ರವಾಗಿರದೆ ಗ್ರಾಮ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯಾಗಿರುತ್ತದೆ.
- "ಗ್ರಾಮೀಣಾಭಿವೃದ್ಧಿ" ಎಂಬುದು ಗ್ರಾಮಸ್ಥರ ಜೀವನ ಶೈಲಿಯನ್ನು ಬದಲಿಸಲು ಹಾಗೂ ಗುಣಾತ್ಮಕವಾಗಿ ಸುಧಾರಿಸಲು ಕೈಗೊಳ್ಳಲಾದ ಯೋಜಿತ ಕಾರ್ಯಕ್ರಮಗಳನ್ನು ಒಳಗೊಂಡ ಪರಿಕಲ್ಪನೆಯಾಗಿರುತ್ತದೆ.

ಗ್ರಾಮೀಣಾಭಿವೃದ್ಧಿ ವ್ಯಾಖ್ಯೆ

- **ವಿಶ್ವ ಬ್ಯಾಂಕ್** : "ಗ್ರಾಮೀಣಾಭಿವೃದ್ಧಿ ಎಂದರೆ ಒಂದು ವಿಶಿಷ್ಟ ಜನ ಸಮೂಹ ಅಂದರೆ ಗ್ರಾಮೀಣ ಬಡ ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನವನ್ನು ಸುಧಾರಿಸುವ ಉದ್ದೇಶ ಹೊಂದಿದ ಒಂದು ಕಾರ್ಯತಂತ್ರ ಎನ್ನಬಹುದು"
- ವಿಶ್ವಬ್ಯಾಂಕ್ ತನ್ನ ಪ್ರಕಟಣೆಯೊಂದರಲ್ಲಿ ತಿಳಿಸಿರುವಂತೆ ಗ್ರಾಮಾಭಿವೃದ್ಧಿ ಎಂಬುದು "ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಅತ್ಯಂತ ಕಡಿಮೆ ಆದಾಯ ಹೊಂದಿದ ಜನರ ಜೀವನ ಮಟ್ಟವನ್ನು ಸುಧಾರಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಯ ಪ್ರಕ್ರಿಯೆಯನ್ನು ಸ್ವ-ಸಂಪೋಷಕಗೊಳಿಸುವ ಉದ್ದೇಶವನ್ನು ಹೊಂದಿದೆ.

2. **ಕತಾರ ಸಿಂಗ್** : " ಒಂದು ಪರಿಕಲ್ಪನೆಯಾಗಿ ಈ ಪದವು (ಗ್ರಾಮೀಣಾಭಿವೃದ್ಧಿ) ಗ್ರಾಮೀಣ ಜನರ ಜೀವನದ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಗ್ರಾಮೀಣ ಭಾಗಗಳಲ್ಲಿ ನಡೆಯುವ ಒಟ್ಟಾರೆ ಅಭಿವೃದ್ಧಿಯನ್ನು ಸೂಚಿಸುತ್ತದೆ".


3. **ರಾಬರ್ಟ್ ಚೇಂಬರ್ಸ್** : " ಒಂದು ವಿಶಿಷ್ಟ ಜನ ಸಮೂಹವು. ಅಂದರೆ ಬಡವರಾದ ಗ್ರಾಮೀಣ ಸ್ತ್ರೀ-ಪುರುಷರು- ತಮಗೂ ತಮ್ಮ ಮಕ್ಕಳಿಗೂ ಬೇಕಾದುದನ್ನು ಹಿಂದೆ ಇದ್ದುದಕ್ಕಿಂತಲೂ ಹೆಚ್ಚಾಗಿ ಪಡೆಯಲು ಸಮರ್ಥರನ್ನಾಗಿ ಮಾಡುವ ಕಾರ್ಯತಂತ್ರವೇ ಗ್ರಾಮೀಣಾಭಿವೃದ್ಧಿ".

4.2 ಗ್ರಾಮೀಣಾಭಿವೃದ್ಧಿಯ ಸ್ವರೂಪ

ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಶ್ವಬ್ಯಾಂಕಿನ ವ್ಯಾಖ್ಯಾನವೊಂದು ಅದರ ಸ್ವರೂಪದ ಬಗ್ಗೆ ಒಂದಿಷ್ಟು ಬೆಳಕು ಚೆಲ್ಲುವುದು. ಈ ವ್ಯಾಖ್ಯೆಯಂತೆ ಗ್ರಾಮೀಣಾಭಿವೃದ್ಧಿ ಎಂಬುದು ಒಂದು ಪ್ರಕ್ರಿಯೆಯಾಗಿದ್ದು ಇದು ಎರಡು ಅಂಶಗಳತ್ತ ಬೊಟ್ಟು ಮಾಡಿ ತೋರಿಸುವುದು. ಇದರಲ್ಲಿ ಅಂದರೆ. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮೀಣ ಜನರ ತಾವು ವಾಸಿಸುವ ಪರಿಸರದ ಮೇಲೆ ತಾವು ಹೊಂದಿರಬಹುದಾದ ನಿಯಂತ್ರಣವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತಲೇ ಹೋಗುವ ಸಾಮರ್ಥ್ಯವನ್ನು ಪಡೆಯುವು : ಮತ್ತು ಅಂತಹ ನಿಯಂತ್ರಣದಿಂದ ಲಭ್ಯವಾಗುವ ಅನುಕೂಲತೆಗಳು ಬಹುವ್ಯಾಪಕವಾಗಿ ಎಂಬಂತೆ ಗ್ರಾಮೀಣ ಜನರಲ್ಲಿ ಹಂಚಿಕೊಳ್ಳಲ್ಪಡುವಂತಾಗುವುದು.

4.3 ಗ್ರಾಮೀಣಾಭಿವೃದ್ಧಿಯ ಮೂಲಾಂಶಗಳು

ಗ್ರಾಮೀಣಾಭಿವೃದ್ಧಿಯ ಮೂಲಾಂಶಗಳನ್ನು ಈ ಕೆಳಕಂಡ ಕೋಷ್ಟಕದ ಮೂಲಕ ಅತ್ಯಂತ ಸರಳವಾದ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು.



(ಮೂಲ ಃ ಭಾರತದಲ್ಲಿ ಗ್ರಾಮೀಣಾಭಿವೃದ್ಧಿ ಶ್ರೀ ಸಿ.ಎನ್. ಶಂಕರರಾವ)

[illegible]

[illegible]

[illegible]

[illegible]	[illegible]	[illegible]	[illegible]

[illegible]

4.4 ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿಗಳ ಪಾತ್ರ

ಗ್ರಾಮಗಳ ಅಭಿವೃದ್ಧಿಯಲ್ಲಿ "ಗ್ರಾಮ ಪಂಚಾಯತ್"ಗಳ ಪಾತ್ರ ಬಹಳ ಮಹತ್ವದ್ದಿದೆ ಎಂಬುದನ್ನು ಈಗ ಎಲ್ಲರೂ ಕಂಡುಕೊಂಡಿರುವ ಒಂದು ವಾಸ್ತವತೆಯಾಗಿದೆ. ಗ್ರಾಮಗಳ ಪ್ರಾಬಲ್ಯದಿಂದ ಕೂಡಿರುವ ಭಾರತದಂತಹ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣದ ದೃಷ್ಟಿಯಿಂದ ಸ್ಥಾಪಿತವಾದ "ಪಂಚಾಯತ್ ರಾಜ್ ವ್ಯವಸ್ಥೆ"ಯಲ್ಲಿ ಕೂಡ ಗ್ರಾಮ ಪಂಚಾಯತ್‌ಗಳಿಗೆ ಮಹತ್ವದ ಸ್ಥಾನ ನೀಡಲಾಗಿದೆ. ಗ್ರಾಮೀಣ ನೈರ್ಮಲ್ಯ, ಗ್ರಾಮೀಣ ಶಿಕ್ಷಣ, ಕುಡಿಯುವ ನೀರಿನ ಪೂರೈಕೆ, ಹಾಗೂ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಆದರ್ಶವನ್ನು ಸಾಕಾರಗೊಳಿಸಲು ಗ್ರಾಮ ಪಂಚಾಯತ್‌ಗಳಿಗೆ ಅಧಿಕಾರದೊಂದಿಗೆ ಸಾಕಷ್ಟು ಸಂಪನ್ಮೂಲಗಳನ್ನೂ ಒದಗಿಸಲಾಗಿದೆ. ರಾಷ್ಟ್ರೀಯ ಸ್ತರದ ಗ್ರಾಮೀಣ ಅಭಿವೃದ್ಧಿ ಯೋಜನೆಗಳಾದ [IRDP, RIEGP, TRYSEM, JRY] ಮುಂತಾದವುಗಳನ್ನು ಅನುಷ್ಠಾನಗೊಳಿಸಲು ನಿಶ್ಚಿತ ಕಾರ್ಯಕ್ರಮಗಳನ್ನು ಸಿದ್ಧಗೊಳಿಸುವ ಹಾಗೂ ಕಾರ್ಯಗತಗೊಳಿಸುವ ಅಧಿಕಾರ ಹಾಗೂ ಹೊಣೆಗಾರಿಕೆಗಳನ್ನು ಗ್ರಾಮ ಪಂಚಾಯತ್‌ಗಳಿಗೆ ನೀಡಲಾಗಿದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತ್‌ಗಳು ಗ್ರಾಮೀಣ ಜನತೆ ಮತ್ತು ರಾಜ್ಯ ಸರ್ಕಾರದ ನಡುವಿನ ಪರಿಣಾಮಕಾರಿಯಾದ ಸಂಪರ್ಕದ ಕೊಂಡಿಯಂತೆ ಕಾರ್ಯ ನಿರ್ವಹಿಸಬೇಕೆಂದು ನಿರೀಕ್ಷಿಸಲಾಗಿದೆ. ಪ್ರಜಾಪ್ರಭುತ್ವ ಹಾಗೂ ಅಧಿಕಾರದ ಹಸ್ತಾಂತರ ಇವೆರಡೂ ಕೂಡ ಒಟ್ಟೊಟ್ಟಿಗೇ ಸಾಗಬೇಕು. ವಿಕೇಂದ್ರೀಕರಣದ ವ್ಯಾಪ್ತಿಯನ್ನು ಬಹಳಷ್ಟು ವಿಸ್ತೃತಗೊಳಿಸಲು " ಪಂಚಾಯತ್ ವ್ಯವಸ್ಥೆ" ಅವಕಾಶ ನೀಡುವದು ಎಂಬುದರಲ್ಲಿ ಅನುಮಾನವಿಲ್ಲ.

'ಗ್ರಾಮ ಪಂಚಾಯತ್' ಎಂಬುದು 'ಪಂಚಾಯತ್ ರಾಜ್ ವ್ಯವಸ್ಥೆ'ಯ ಅವಿಭಾಜ್ಯ ಅಂಗವಾಗಿದ್ದು, ಯೋಜಿತ ಗ್ರಾಮೀಣ ಅಭಿವೃದ್ಧಿಯ ಪರಿಣಾಮಕಾರಕತೆಯನ್ನು ಗಣನೀಯವಾಗಿ ಹೆಚ್ಚಿಸಲು ಉದ್ದೇಶಿತವಾದುದು. ಅಂದರೆ, ಗ್ರಾಮೀಣ ಸ್ತರದಲ್ಲಿ ಗ್ರಾಮಪಂಚಾಯತ್‌ಗಳು ನಿರ್ವಹಿಸಬಹುದಾದ ಪಾತ್ರದ ಮಹತ್ವವನ್ನು ಅರಿತುಕೊಂಡ ಹಿನ್ನೆಲೆಯಲ್ಲಿಯೇ ಅವುಗಳಿಗೆ ಗ್ರಾಮೀಣಾಭಿವೃದ್ಧಿಯಲ್ಲಿ ವಿಶೇಷ ಕಾರ್ಯಭಾರವನ್ನು ವಹಿಸಲಾಗಿದೆ ಎನ್ನಬಹುದು.

ಗ್ರಾಮಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿವೆ. ಸಂವಿಧಾನದ 73ನೇ ತಿದ್ದುಪಡಿಯ ನಂತರದ ದಿನಗಳಲ್ಲಿ, ಗ್ರಾಮೀಣ ಜನತೆಯ ಉದ್ಧಾರಕ್ಕಾಗಿ ಮಂಜೂರು ಮಾಡಿದ ಭಾರೀ ಮೊತ್ತದ ಹಣವನ್ನು ಪಂಚಾಯತ್ ಸಂಸ್ಥೆಗಳ ಮುಖಾಂತರ ಹಾಗೂ ಅವುಗಳ ಸಹಯೋಗದೊಂದಿಗೆ ಬಳಕೆ ಮಾಡಬೇಕೆಂಬ ನಿಯಮವನ್ನು ಮಾಡಿರುವುದರಿಂದ ಇವುಗಳಿಗೆ ಈಗ ವಿಶೇಷ ಮಹತ್ವ ಬಂದಿದೆ. ಗ್ರಾಮೀಣ ಹಂತದಲ್ಲಂತೂ ಅಂತಹ ಯೋಜನೆಗಳ ಅನುಷ್ಠಾನದ ಪ್ರಧಾನ ನಿಯೋಗಿಯಾಗಿ 'ಗ್ರಾಮ ಪಂಚಾಯತ್' ತನ್ನ ಪಾತ್ರವನ್ನು ನಿರ್ವಹಿಸಬೇಕಾದ ಅಗತ್ಯವಿರುತ್ತದೆ. 1993ರ ನಂತರದಲ್ಲಿ ಜಾರಿಗೆ

ಬಂದಂತಹ 1)ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನಾ-1993, 2) ಉದ್ಯೋಗ ಭರವಸೆ ಯೋಜನಾ-1993, 3)ಸ್ವರ್ಣಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನಾ 1999; ಜವಾಹರ್ ಗ್ರಾಮಗಳ ಸಮೃದ್ಧಿ ಯೋಜನಾ-1999, ಇವೇ ಮುಂತಾದ ಯೋಜನೆಗಳ ಪ್ರಾಮುಖ್ಯವನ್ನು ಹಾಗೂ ಕಾರ್ಯಶೈಲಿಯನ್ನೂ ನಾವು ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗುವುದು.

4.5 ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ ಎಂಬ ಅಂಶ ತೀರಾ ಇತ್ತೀಚೆಗೆ ಚಾಲ್ತಿಯಲ್ಲಿರುವ ಪ್ರಕ್ರಿಯೆಯಾಗಿದೆ. ಪರಿಣಾಮಕಾರಿಯಾದ ಗ್ರಾಮೀಣಾಭಿವೃದ್ಧಿಗೆ ಜನರ ಸಹಭಾಗಿತ್ವ ಅವಶ್ಯಕ ಎಂಬುದು ಸಿದ್ಧ ಸತ್ಯ. ಜನರ ಸಹಭಾಗಿತ್ವ ಅವಶ್ಯಕತೆಯನ್ನು ಪರೀಕ್ಷೆಗೊಳಪಡಿಸಿದಾಗ, ಅಭಿವೃದ್ಧಿಯನ್ನು ಸಾಧಿಸಲು ಯಾವ ಯಾವ ಅಂಶಗಳ ಚರ್ಚೆಯಾಗಬೇಕು, ಹಾಗೂ ಯಾವ ವಿಭಾಗಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಜಾರಿಗೊಳಸಬೇಕೆಂಬ ಅಂಶಗಳ ಮೇಲೆ ಪ್ರಶ್ನೆಗಳು ಉದ್ಭವಿಸದೇ ಇರಲಾರವು. ಜೊತೆಗೆ ಜನರ ಪಾಲ್ಗೊಳ್ಳುವಿಕೆಯನ್ನು ಸಾಸ್ಥಿಕರಿಸಬೇಕೇ ? ಅಥವಾ ಕಾನೂನಿನ ಮೂಲಕ ಕಡ್ಡಾಯಗೊಳಸಬೇಕೇ ? ಎಂಬ ಅಂಶಗಳ ಕುರಿತು ಚರ್ಚಿತವಾಗಬೇಕಾಗಿದೆ. ಜೊತೆಗೆ ಜನರ ಪಾಲ್ಗೊಳ್ಳುವಿಕೆಗೆ ಅಡ್ಡಿಯಾಗಿರುವಂತಹ ಹಲವಾರು ಅನಿಷ್ಟ ಪರಂಪರೆಗಳನ್ನು ತೊಡೆದುಹಾಕಿ ಸರ್ಕಾರದ ಸಾಂಸ್ಥಿತ ವಸ್ತು ಸಾಂಸ್ಥಿಕೇತರ ಸಂಘಟನೆಗಳ ಮೂಲಕ ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಒಂದು ವೇದಿಕೆ ಸಿದ್ಧಪಡಿಸುವ ಅವಶ್ಯಕತೆ ಇದ್ದು ಈ ನಿಟ್ಟಿನಲ್ಲಿ ಗ್ರಾಮಸಭೆ ಕಾನೂನಾತ್ಮಕವಾಗಿ ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಸಹಕಾರಿಯಾಗಿದೆ.

ಇ. ಡೆಸಿಂಗೂ ಸೇರಿ ವಿವರಿಸುವಂತೆ

ಸಹಭಾಗಿತ್ವವು ಗ್ರಾಮೀಣಾಭಿವೃದ್ಧಿಗೆ ಒಂದು ಶಕ್ತಿಯುತವಾದ ಅಸ್ತ್ರವಾಗಿದೆ. ಆ ಅಸ್ತ್ರಗಳ ಜೊತೆಗೆ ಸಾರ್ವಜನಿಕ ಸಂವಹನ ಶಿಕ್ಷಣ ಮತ್ತು ಆಂತರಿಕ ಅರಿವು ಸೇರಿದರೆ, ಗ್ರಾಮೀಣಾಭಿವೃದ್ಧಿಗೆ ಅಡೆತಡೆಯಾದಂತಹ ಅನೇಕ ಅಂಶಗಳನ್ನು ಪರಿಹರಿಸಬಹುದು. ಅಲ್ಲದೇ ಈ ಮೇಲೆ ಚರ್ಚಿತ ಅಂಶಗಳು ಐತಿಹಾಸಿಕವಾಗಿಯೂ ಉಪಯುಕ್ತವಾದವುಗಳೆಂದು, ಸಮಕಾಲೀನ ಸುಧಾರಣೆಗಳಿಂದ ತಿಳಿದುಕೊಳ್ಳಬಹುದಾಗಿದೆ.

ಏಶಿಯ ಹಾಗೂ ಆಫ್ರಿಕಾ ಖಂಡಗಳಲ್ಲಿನ ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ ಪುರಾತನ ಕಾಲದಿಂದಲೂ ಜಾರಿಯಲ್ಲಿದೆ. ಅಲ್ಲದೇ ಇದು ಬಂಡವಾಳಶಾಹಿಗಳು ನಿರಂಕುಶ ಅಧಿಕಾರಿಗಳ ಕಪಿಮುಷ್ಟಿಗೆ ಒಳಗಾಗಿರಲಿಲ್ಲ ಎಂಬುದು ಸಂತಸದ ಸಂಗತಿ.

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ ಕುರಿತು ಚರ್ಚಿಸುವ ಪೂರ್ವದಲ್ಲಿ ನಮಗೆ ನಾವೇ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳುವದು ಅವಶ್ಯಕತೆ ಇದೆ. ಅವುಗಳಲ್ಲಿ-

1) ಗ್ರಾಮೀಣಾಭಿವೃದ್ಧಿ ಎಂದರೆ ಏನು ?
2) ಜನರ ಪಾಲ್ಗೊಳ್ಳುವಿಕೆ ಎಂದರೆ ಏನು ?
3) ಜನರ ಪಾಲ್ಗೊಳ್ಳುವಿಕೆಯ ಉದ್ದೇಶವೇನು ?
4) ಜನರು ಗ್ರಾಮಿಣಾಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಸೋಲುತ್ತಿರುವುದೇಕೆ ?
5) ಜನರ ಸಹಭಾಗಿತ್ವವನ್ನು ಆಕರ್ಷಿಸುವುದು ಹೇಗೆ ?

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆಯ ಕುರಿತು ಚರ್ಚಿಸುವ ಪೂರ್ವದಲ್ಲಿ ಗ್ರಾಮೀಣಾಭಿವೃದ್ಧಿ ಎಂದು ವ್ಯಾಖ್ಯಾನಿಸುವದು ಅವಶ್ಯಕತೆ ಇದೆ. ಗ್ರಾಮೀಣಾಭಿವೃದ್ಧಿಯ ವ್ಯಾಪ್ತಿ ಮಿತಿಗಳು ಮತ್ತು ಯಾವ ರೂಪದಲ್ಲಿ ಜನರು ಸಹಭಾಗಿತ್ವ ಹೊಂದುವ ಸಧ್ಯತೆಗಳು ಇವೆ ಜೊತೆಗೆ ಜನರ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುವ ಅಂಶಗಳ ಕುರಿತು ದೃಷ್ಟಿ ಹಾಯಿಸುವುದು ಅನಿವಾರ್ಯ ಕೂಡ.

ಹಾಗಂದರೆ ಜನರ ಪಾಲ್ಗೊಳ್ಳುವಿಕೆ ಎಂದರೇನು ?

ಜನರು ಎಂದರೆ ಯಾರು ಎಂದೂ ಅಧ್ಯಯನ ಮಾಡುವದಾದರೆ ಒಂದು ಸಮುದಾಯದಲ್ಲಿ ವಿಶಿಷ್ಠ ಉದ್ದೇಶಗಳ ಈಡೇರಿಕೆಗಾಗಿ ಗುರ್ತಿಸಿದ ಫಲಾನುಭವಿಗಳು, ಮಹಿಳೆಯರು, ಪುರುಷರು, ಯುವಜನತೆ, ವೈದ್ಯರು, ಔಪಚಾರಿಕ ನೇತಾರರು ಹಾಗೂ ಬೇರೆ ಬೇರೆ ವರ್ಗ ಕೆಲವು ನಿಗದಿತ ಕಾರ್ಯಕ್ರಮ ಹಾಗೂ ಚಟುವಟಿಕೆಗಳ ಅವಲಂಬಿತರು, ಹಾಗೂ ಸ್ತರವಿನ್ಯಾಸದ ನಾಗರಿಕರು, ಇತ್ಯಾದಿಗಳನ್ನು ನಾವು ಜನರು ಎಂದು ಗುರುತಿಸಬಹುದು.

ಜನರ ಪಾಲ್ಗೊಳ್ಳುವಿಕೆಯ ವ್ಯಾಪ್ತಿ ಅತ್ಯಂತ ವಿಶಾಲವಾದುದು. ಅಭಿವೃದ್ಧಿ ಸಂಸ್ಥೆಗಳೊಂದಿಗೆ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೋಂಡು ಕಾರ್ಯಕ್ರಮ ಹಾಗೂ ಚಟುವಟಿಕೆಗಳನ್ನು ನಿರ್ಧರಿಸುವದು, ಆದ್ಯತಾ ಯೋಜನೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವದು, ಮತ್ತು ಈ ಎಲ್ಲಾ ಕಾರ್ಯಗಳಿಗೆ ತಮ್ಮ ಉನ್ನತ ವಿಚಾರಧಾರೆ, ಉಪಾಯ, ತಂತ್ರ, ಆಸಕ್ತಿ, ಸಲಕರಣೆ, ಧನ, ಕಾರ್ಮಿಕರು ಹಾಗೂ ಸಮಯವನ್ನು ಪರಿಮಿತ ಜಾರಿಗೊಳಸಬೇಕಾಗಿರುವ ಕಾರ್ಯಚಟುವಟಿಕೆಗಳ ಮೇಲೆ ನಿರ್ಧರಿತವಾಗುತ್ತದೆ. ಆ ಕಾರ್ಯ ವೈಯುಕ್ತಿಕ ಹಿತ ಸಾಧನೆ, ವ್ಯಕ್ತಿ ಹಿತಸಾಧನೆ ಹಾಗೂ ಸಾಮೂಹಿಕ ಹಿತ ಸಾಧನೆಗಾಗಿ ನಡೆದಿದೆ ಎಂಬುದನ್ನು ಅರಿತು, ಅನುಕೂಲಕ್ಕೆ ತಕ್ಕಂತೆ ಮೇಲೆ ವಿವರಿಸಿದ ಎಲ್ಲ ಬೌದ್ಧಿಕ, ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಕಾರ್ಯನಿಯೋಜನೆಯಲ್ಲಿ ತೊಡಗಿಸಿಕೊಳ್ಳಬಹುದಾಗಿದೆ.

ಜಿ.ವಿ. ಜೋಶಿರವರ ಪ್ರಕಾರ ಗ್ರಾಮೀಣಾಭಿವೃದ್ಧಿಯೂ ಗ್ರಾಮೀಣ ಕೃಷಿ ಅಭಿವೃದ್ಧಿ, ಹೈನುಗಾರಿಕೆ, ಸಹಕಾರ, ಗ್ರಾಮೀಣ ಕೈಗಾರಿಕೆ, ತಂತ್ರಜ್ಞಾನ ಅಂಶಗಳಾದ ಹನಿ ನೀರಾವರಿ, ಗ್ರಾಮೀಣ ರಸ್ತೆ, ಕಟ್ಟಡಗಳು, ಆರೋಗ್ಯ ಮತ್ತು ನೈರ್ಮಲೀಕರಣ ಜೊತೆಗೆ ಕುಟುಂಬ ಕಲ್ಯಾಣ, ಕುಟುಂಬ ಯೋಜನೆ ಮಹಿಳಾ ಕಲ್ಯಾಣ, ಮಕ್ಕಳ ಆರೈಕೆ ಹಾಗೂ ಪೌಷ್ಠಿಕ ಆಹಾರ ಒದಗಿಸುವುದು, ಶಿಕ್ಷಣ ವಯಸ್ಕ ಶಿಕ್ಷಣ ಸಾಮಾಜಿಕ ಶಿಕ್ಷಣ, ಸಾಮಾಜಿಕ ಸಾಕ್ಷರತೆ, ಯುವಕರ ಕಲ್ಯಾಣ ಹಾಗೂ ಸಮುದಾಯ ಸಂಘಟನೆಯಂತಹ ಅಂಶಗಳ ಅಭಿವೃದ್ಧಿಯ ಮೇಲೆ ಗ್ರಾಮೀಣಾಭಿವೃದ್ಧಿಯು ಅಳೆಯಲ್ಪಡುತ್ತದೆ. ಈ ಎಲ್ಲ ಅಂಶಗಳ ಮೇಲೆ ಅಭಿವೃದ್ಧಿ ಸಾಧಿಸಲು ಗ್ರಾಮೀಣ ಜನರು ಸಂಘಟಿತರಾಗಿ ಪರಸ್ಪರ ಸಹಕಾರದೊಂದಿಗೆ ಯೋಚಿಸಿ, ಯೋಜನೆ ರೂಪಿಸಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದು ಕಾರ್ಯಕ್ರಮಗಳ ಮೇಲೆ ನಿರಂತರ ಮೇಲ್ವಿಚಾರಣೆ ಮಾಡುವ ಮೂಲಕ ಪರಿಣಾಮಕಾರಿಯಾದ ಜನರ ಪಾಲ್ಗೊಳ್ಳುವಿಕೆಯ ಲಾಭ ಎಷ್ಟಿದೆ ಎಂಬುದನ್ನು ಸಾಧಿಸಿ ತೋರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಗ್ರಾಮಸಭೆಯ ಮೂಲಕ ಜನರು ಸಂಘಟಿತರಾಗಿ ತಮ್ಮ ವಿಚಾರಧಾರೆಗಳನ್ನು ಮಂಡಿಸಿ ಯೋಜನೆ ರೂಪಿಸಿ ಜಾರಿಗೆ ತಂದೂ ಮೇಲ್ವಿಚಾರಣೆ ಮಾಡುವಷ್ಟರ ಮಟ್ಟಿಗೆ ಪ್ರಜ್ಞಾವಂತರಾದಾಗ ಅಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ ಹಾಗೂ ಗ್ರಾಮಸಭೆ ಆ ಕಾರ್ಯಕ್ಕೆ ವೇದಿಕೆಯಾಗಿ ಗ್ರಾಮೀಣಾಭಿವೃದ್ಧಿ ಸಾಧಿಸುವುದು ಅತ್ಯಂತ ಸರಳ ಸಂಗತಿ.

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆಯ ಉದ್ದೇಶಗಳು :

ಸೇಠಿರವರ ಪ್ರಕಾರ ಉದ್ದೇಶಗಳನ್ನು ಈ ರೀತಿ ಗುರುತಿಸಬಹುದು.

1) ಗ್ರಾಮೀಣಾಭಿವೃದ್ಧಿ ಜನರ ಪಾಲ್ಗೊಳ್ಳವಿಕೆ ಒಂದು ಶೈಕ್ಷಣಿಕ ಅಥವಾ ತರಬೇತಿ ಕಾರ್ಯಕ್ರಮ, ಈ ಮೂಲಕ ಜನರು ತಮ್ಮ ಕುಂದು ಕೊರತೆಗಳೇನು? ಅವುಗಳನ್ನು ಪರಿಹರಿಸುವ ಯೋಜನೆ ತಯಾರಿಸುವ ಕುರಿತು ಚರ್ಚಿಸಿ ಈ ಯೋಜನೆಗೆ ಒಂದು ಅಂತಿಮ ರೂಪ ನೀಡುವ ಪ್ರಕ್ರಿಯೆಯಲ್ಲಿ ಹಲವಾರು ಹೊಸ ಹೊಸ ವಿಚಾರಗಳನ್ನು ತಿಳಿಯುವ, ಕಲಿಯುವ ಹಾಗೂ ಮಾನಸಿಕವಾಗಿ ತಮಗೆ ತಾವೇ ತರಬೇತಿಗೊಳಿಸುವ ಮೂಲಕ ಜನರ ಜ್ಞಾನದ ಹರಿವು ವಿಸ್ತಾರವಾಗಿ ಶಿಕ್ಷಣ ಪ್ರಗತಿಯಾಗುತ್ತದೆ.

2) ಜನರ ಪಾಲ್ಗೊಳ್ಳುವಿಕೆಯೂ ಜನರಿಗೆ ತಮ್ಮ ಸಮಸ್ಯೆ ಕುರಿತು ಅರಿವು ಮೂಡಿಸುತ್ತದೆ, ಹಾಗೂ ಸಮಸ್ಯೆಯನ್ನು ನಿಯಂತ್ರಿಸಲು ಅವರನ್ನು ಜಾಗೃತರನ್ನಾಗಿ ಮಾಡುತ್ತದೆ. ಗ್ರಾಮೀಣಾಭಿವೃದ್ಧಿಯಲ್ಲಿ ವೈಯುಕ್ತಿಕ ಹಿತಸಾಧನೆಯೂ ಸಾಧ್ಯ ಎಂಬ ಅಂಶ ಅವರಲ್ಲಿ ಒಡಮೂಡಿ ತಾನು ತನ್ನ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಎಂಬ ಅರಿಕೆ ಹಾಗೂ ವ್ಯಾಮೋಹ ಬೆಳವಣಿಗೆ ಹೊಂದಿ, ಮಾಲಿಕತ್ವದ ಗುಣ ಬೆಳೆಯುತ್ತದೆ.

3) ಜನರ ಪಾಲ್ಗೊಳ್ಳುವಿಕೆ ಜನರ ಅಭಿವೃದ್ಧಿ ವಿಶ್ವಾಸವನ್ನು ಹೆಚ್ಚಿಸುತ್ತದೆ. ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಸಾಮರ್ಥ್ಯ ಅಭಿವೃದ್ಧಿಪಡಿಸುತ್ತದೆ. ಹಾಗೂ ವ್ಯಕ್ತಿಗೆ ನಿರ್ವಹಣಾ ಕಲೆಯನ್ನು ಕಲಿಸುತ್ತದೆ. ಜನರು ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅನುವ ಮಾಡಿ ಯೋಜನೆಯನ್ನು ಸುಭದ್ರಗೊಳಿಸುತ್ತದೆ.

4) ಜನರ ಪಾಲ್ಗೊಳ್ಳುವಿಕೆಯ ಮೂಲಕ ತಮ್ಮ ಸಾಮರ್ಥ್ಯವನ್ನು ಸಂಶೋಧಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಅವರ ಬಯಕೆಯ ಮಟ್ಟವನ್ನು ಹೆಚ್ಚಿಸುತ್ತದೆ. ಅವರಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಜನರನ್ನು ಇದು ಆಲಸ್ಯ ಉದಾಸೀನತೆಯಿಂದ ಚಟುವಟಿಕೆಯುಕ್ತ ಜೀವನಶೈಲಿಗೆ ಕರೆದೊಯ್ಯುತ್ತದೆ. ಅವರನ್ನು ಪ್ರಜ್ಞಾವಂತರನ್ನಾಗಿ, ನಿರ್ಧಾರಕರನ್ನಾಗಿ, ಸಮರ್ಥರನ್ನಾಗಿ ಮಾಡುತ್ತದೆ.

5) ಮುಖ್ಯವಾಗಿ ಒರ್ವ ವ್ಯಕ್ತಿಯನ್ನು ಸಂಪನ್ಮೂಲ ಸದಸ್ಯನನ್ನಾಗಿ ಮಾರ್ಪಡಿಸಿ ಜನರ ಪಾಲ್ಗೊಳ್ಳುವಿಕೆಯ ಮೂಲಕ ಮಾನವ ಸಂಪನ್ಮೂಲದ ಅಭಿವೃದ್ಧಿ ಸಾಧಿಸುವ ಸಲುವಾಗಿ ಅವರಲ್ಲಿನ ಎಲ್ಲ ರೀತಿಯ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಂಡು, ಗ್ರಾಮೀಣಾಭಿವೃದ್ಧಿ ಸಾಧಿಸುವುದು ಜನರ ಪಾಲ್ಗೊಳ್ಳವಿಕಯು ಪರಮಧ್ಯೇಯವಾಗಿದೆ.

ಜನರು ಪಾಲ್ಗೊಳ್ಳಲು ಸೋಲುತ್ತಿರುವುದೇಕೆ ?

ಜನರ ಪಾಲ್ಗೊಳ್ಳುವಿಕೆ ಎಂಬುದು ಸಾಮಾಜಿಕ ಸ್ತರವಿನ್ಯಾಸ ಹಾಗೂ ವರ್ಗ ಸ್ತರ ವಿನ್ಯಾಸದ ಮೇಲೆ ಅವಲಂಬಿತವಾಗಿದೆ. ಜೊತೆಗೆ ವೈಯುಕ್ತಿಕ ಹಾಗೂ ಸಮುದಾಯಕ ನಿರ್ಧಾರ ಕೈಗೊಳ್ಳುವ ಮೇಲೆ ಜನರ ಪಾಲ್ಗೊಳ್ಳುವಿಕೆಯ ಮಟ್ಟವನ್ನು ನಿರ್ಧರಿಸಬಹುದಾಗಿದೆ. ಅದರೊಂದಿಗೆ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುತ್ತಿರುವ ಸಂಸ್ಥೆಗಳು ಸಾರ್ವಜನಿಕರನ್ನು ಯಾವರೀತಿ ಬಳಸಿಕೊಳ್ಳಲಾಗುವದು ಅವರ ಮನಃ ಪರಿವರ್ತನೆ ಮಾಡಲಾಗುವದು ಮತ್ತು ಬೆಂಬಲ ಹಾಗೂ ಸೌಲಭ್ಯಗಳನ್ನು ಒದಗಿಸಿಕೊಡಲಾಗುವದು ಎಂಬುದರ ಮೇಲೆ ಜನರ ಪಾಲ್ಗೊಳ್ಳುವಿಕೆ ನಿರ್ಧರಿತವಾಗುತ್ತದೆ.

ಹೀಗಾಗಿ ಸಾಮಾಜಿಕವಾಗಿ ಬಲಿಷ್ಠವಾಗಿರುವ ಅಥವಾ ಬಹುಸಂಖ್ಯಾತರಾಗಿರುವ ಜನರು ಅಧಿಕಾರ ಹಾಗೂ ಅಭಿಪ್ರಾಯ ತಂತ್ರಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಬೇರೆ ಸಮಾಜದ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಡುತ್ತಿಲ್ಲ. ವರ್ಗವಿನ್ಯಾಸದಲ್ಲಿ ಶ್ರೀಮಂತರು ನಡೆಸಿದ ಆಡಳಿತ ನಡೆಯುವದು ಜನ ಸಾಮಾನ್ಯ ಕೇವಲ ಔಪಚಾರಿಕ ವಸ್ತುವಾಗಿ ಪರಿಗಣಿಸಲ್ಪಡುತ್ತಾನೆ. ಇನ್ನೂ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು ಜನರನ್ನು ಸಕ್ರಿಯವಾಗಿ ಪಾಲ್ಗೊಳ್ಳಲು

ಅವಕಾಶ ನೀಡುತ್ತಿಲ್ಲ ಹಾಗೂ ಅವುಗಳ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ. ಕಾರಣವೇನೆಂದರೆ, ಅಭಿವೃದ್ಧಿ ಕಾರ್ಯಗಳ ಮೇಲೆ ಸಾಂಸ್ಥಿಕ ನಿಯಂತ್ರಣ ಬಿಟ್ಟುಕೊಡುವ ಮನಸ್ಸೂ ಈ ಸಂಸ್ಥೆಗಳಿಗಿಲ್ಲ.- ಇವೆಲ್ಲದರ ಜೊತೆಗೆ ಜನರ ಪಾಲ್ಗೊಳ್ಳುವಿಕೆ ಎಂಬುದು ಪ್ರಶ್ನಾವಳಿಗಳಿಂದಲೇ ಆರಂಭವಾಗುತ್ತದೆ. ಹೊರತು ಪಾಲ್ಗೊಂಡ ಜನರು ಅಭಿವೃದ್ಧಿಪರ ಉಪಾಯ ಯೋಜನೆಗಳನ್ನು ರೂಪಿಸುವತ್ತ ತಮ್ಮ ಚಿತ್ತ ಹರಿಸುತ್ತಿಲ್ಲ. ಜನರ ಪಾಲ್ಗೊಳ್ಳುವಿಕೆ ಲಾಭ ಅದರ ಕುರಿತಾದ ಅಸಡ್ಡೆ, ಸಾರ್ವಜನಿಕ ಜಾಗೃತಿ ಇಲ್ಲದ ಕಾರಣ ಪಾಲ್ಗೊಳ್ಳುವಿಕೆಗೆ ಇರುವ ನೈಸರ್ಗಿಕ ಅಂಶಗಳನ್ನು ಬಿಟ್ಟು ಜನ ತಾಂತ್ರಿಕ ರೀತಿ ರಿವಾಜುಗಳಿಗೆ ಮಾರುಹೋಗಿರುವದು ಜನರ ಪಾಲ್ಗೊಳ್ಳುವಿಕೆ ತೀರಾ ಕಳವಳ ಪಡಲು ಕಾರಣ ಅಲ್ಲದೇ ಜನರು ತಮಗೆ ಸಿಗಬೇಕಾದ ಸವಲತ್ತುಗಳು ಸಮರ್ಪಕವಾಗಿ ದೊರೆಯದಿದ್ದಾಗ ಅವರ ಪಾಲ್ಗೊಳ್ಳುವಿಕೆಯ ಪ್ರಮಾಣ ಕುಂಠಿತಗೊಳ್ಳುತ್ತದೆ.

ಕುಟುಂಬಯೋಜನೆ, ಜನಸಂಖ್ಯಾ ನಿಯಂತ್ರಣದಂತಹ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಜನರ ನಿರಾಸಕ್ತಿ ಮತ್ತು ಸಂಪ್ರದಾಯಗಳೂ ಕೂಡ ಅಡ್ಡ ಬರುತ್ತವೆ. ಕೆಲವು ವೇಳೆ ಗುಂಪುಗಾರಿಕೆ, ಘರ್ಷಣೆ, ಜನರ ನಿರಾಸಕ್ತಿ, ಮೌಲ್ಯಗಳ ವ್ಯತ್ಯಾಸ, ಕಾರ್ಯಕ್ರಮಗಳ ವಿರೋಧಿ ಭಾವ, ನಾಯಕತ್ವ ಕೊರತೆ, ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅಡಚಣೆ ಉಂಟು ಮಾಡಿವೆ.

ಜನರ ಪಾಲ್ಗೊಳ್ಳುವಿಕೆಯಲ್ಲಿ ಜನರು ಮಾತ್ರ ಅಡಚಣೆ ಮಾಡುತ್ತಿದ್ದಾರೆ ಎಂದರೆ ಅದು ಒಂದು ಏಕಪಕ್ಷೀಯ ಅಪವಾದವಾಗುತ್ತದೆ. ಸಾರ್ವಜನಿಕರ ಪಾಲ್ಗೊಳ್ಲುವಿಕೆಯಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳ ಮತ್ತು ಆಡಳಿತಾಂಗಗಳ ಪಾತ್ರವೂ ಅತ್ಯಂತ ಹಿರಿದಾದದ್ದು. ಕೇಂದ್ರೀಕೃತ ಅಧಿಕಾರ ಜನರ ಕಡಿಮೆ ಪಾಲ್ಗೊಳ್ಳುವಿಕೆಗೆ ಒಂದು ಕಾರಣ. ಇಲ್ಲಿ ಅಧಿಕಾರಗಳು ಓರ್ವ ವ್ಯಕ್ತಿಯಲ್ಲಿ ಕೇಂದ್ರೀಕೃತವಾದುದರಿಂದ ಬೇರೆಯವರ ಸಹಭಾಗಿತ್ವಕ್ಕೆ ಅವಕಾಶ ಇರುವುದಿಲ್ಲ. ಇನ್ನೂ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶವಿದ್ದು, ಆದರೆ ಕಳಪೆ ಮಟ್ಟದ ಕಾಮಗಾರಿಗಳಿಗೆ ಇದೂ ಕಾರಣವಾಗಿದೆ. ಉದಾ : ಸಾರ್ವಜನಿಕ ರಸ್ತೆ, ಗಟಾರು, ಕಟ್ಟಡಗಳ ಗುಣಮಟ್ಟ ವಿಕೇಂದ್ರೀಕರಿಸಿದ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದಿಂದ ಕಳಪೆ ಮಟ್ಟದಾಗಿವೆ. ಜೊತೆಗೆ ಕುಶಲವಲ್ಲದ ಕಾರ್ಮಿಕರು, ಕಡಿಮೆ ಸಂಪನ್ಮೂಲಗಳು ಕಳಪೆ ಕಾಮಗಾರಿಗಳಿಗೆ ಕಾರಣವಾಗಿವೆ. ತೀರಾ ನಿರಾಶಾದಾಯಕ ಸಂಗತಿಯೆಂದರೆ ಈ ಎಲ್ಲಾ ಅಂಶಗಳ ವಿರುದ್ಧ ಜನರಿಗೆ ಸಾಮೂಹಿಕ ಪ್ರತಿಭಟನೆ ಇಳಿಯುವ ಮನೋಭಾವ ಇಲ್ಲ. ತಮ್ಮ ಕಲ್ಯಾಣ ಕಾರ್ಯಕ್ರಮಗಳನ್ನು ಯೋಜನೆಗಳನ್ನು ಜನ ರೂಪಿಸುತ್ತಿಲ್ಲ. ಜನರು ಸಂಘಟಿತರಾದರೆ, ಸಾಮಾಜಿಕ ಕ್ರಿಯೆಗೆ ಕಾರಣವಾದಿತ್ತು. ಆ ಮೂಲಕ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬಂದಿತು ಎಂಬ ಅಳಕು ಸ್ಥಳೀಯ ನಾಯಕರಲ್ಲಿದ್ದು, ಅವರೂ ಕೂಡಾ ಜನರು ಸಂಘಟಿತರಾಗಿ ಅಭಿವೃದ್ಧಿ ಕಾರ್ಯಕ್ರಮಗಳ್ಲಲಿ ಸಕ್ರಿಯವಾಗಿ ಪಾಲ್ಗೊಳ್ಳಲು ನಿಯಂತ್ರಿಸಬಹುದಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಜನರ ಪಾಲ್ಗೊಳ್ಳುವಿಕೆಯನ್ನು ಆಕರ್ಷಿಸುವದು ಹೇಗೆ ?

ಇಷ್ಟೆಲ್ಲಾ ಅಡೆತಡೆಗಳ ಹೊರತಾಗಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಸಾಧಿಸುವುದು ಕಷ್ಟವಾದದ್ದೇನಲ್ಲಾ. ಜನಪ್ರತಿನಿಧಿಗಳು ಹಾಗೂ ಜನರಲ್ಲಿ ಕನಿಷ್ಠ ಇಚ್ಛಾಶಕ್ತಿ ಇದ್ದರೆ ಸಾಕು. ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವದು ಅದಕ್ಕಾಗಿ ಕೆಲವು ಪರಿಹಾರಗಳನ್ನು ಈ ರೀತಿ ಸೂಚಿಸಬಹುದು.

1) ಸರ್ಕಾರಿ ಕಾರ್ಯಕ್ರಮಗಳಲ್ಲಿ ಯೋಜನೆಗಳಲ್ಲಿ ಮತ್ತು ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟ ಕಾರ್ಯಗಳಲ್ಲಿ ಶಾಸನಾತ್ಮಕವಾಗಿ ಜನರ ಕಡ್ಡಾಯ ಪಾಲ್ಗೊಳ್ಳುವಿಕೆಯ ಮಿತಿಯನ್ನು ನಿರ್ಧರಿಸಬೇಕು. ಗ್ರಾಮೀಣ ಸಮುದಾಯದ ಜನರು ತಮ್ಮ ಸಮಸ್ಯೆಗಳ ನಿವಾರಣೆಯನ್ನು ಸಾಮಾಜಿಕ ಕ್ರಿಯೆಯಲ್ಲಿ ತೊಡಗಿಕೊಳ್ಳುವದರ ಜೊತೆಗೆ ತಮಗೆ ಸಾಧ್ಯವಾದಷ್ಟುಮಟ್ಟಿಗೆ ತಮ್ಮಲ್ಲಿನ ಸಂಪನ್ಮೂಲಗಳ ಮೂಲಕ ಸರ್ವಾಂಗೀಣ ಪರಿಹಾರಕ್ಕೆ ಮುಂದಾಗಿ ಗ್ರಾಮೀಣಾಭಿವೃದ್ಧಿ ಸಾಧಿಸಬೇಕು.

2) ಸಾರ್ವಜನಿಕರಲ್ಲಿ ಸಹಕಾರಭಾವದ ಕನಿಷ್ಠ ಕಲ್ಪನೆ ನೈತಿಕತೆ ಹಾಗೂ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸುವ ಕಾರ್ಯ ಪ್ರತಿಯೊಂದು ಕುಟುಂಬದಲ್ಲಿ ನಡೆಯಬೇಕು.

3) ಸಮಸ್ಯೆಗಳ ನಿಯಂತ್ರಣ ಮತ್ತು ನಿರ್ವಹಣೆಗೆ ಸಮಾನ ಮನಸ್ಕರ ಗುಂಪುಗಳನ್ನು ಹುಟ್ಟುಹಾಕಬೇಕು.

4) ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವನಮಟ್ಟ ಸುಧಾರಿಸುವ ಕಡೆಗೆ ಗಮನಹರಿಸಬೇಕು.

5) ಹಿಂದುಳಿದ ವರ್ಗಗಳ ಜನರು ಸಂಘಟಿತರಾಗಿ ಸ್ವ ಇಚ್ಛೆಯಿಂದಲೇ ಸರ್ವರೊಂದಿಗೆ ಬೆರೆತು, ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಬೇಕು.

6) ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ಸ್ಥಳೀಯ ಸಂಪನ್ಮೂಲದ ಮೂಲಕ ಪರಿಹರಿಸಲು ಅಗತ್ಯ ಗುಂಪುಗಳನ್ನು ರಚಿಸಬೇಕು.

7) ಗ್ರಾಮೀಣಾಭಿವೃದ್ಧಿಗೆ ಲಭ್ಯವಿರುವ ಸಂಪನ್ಮೂಲಗಳ ದುರುಪಯೋಗ ಆಗದಂತೆ ಸಾರ್ವಜನಿಕರು ಸಂಘಟಿತರಾಗಿ ನಿಯಂತ್ರಣ ಮಾಡಬೇಕು.

4.6 ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರು ಮತ್ತು ದಲಿತರು ಪಾಲ್ಗೊಳ್ಳುವಿಕೆ.

ಬಿ. ದೇವಿ ಪ್ರಸಾದ ಹಾಗೂ ಎಸ್. ಹರನಾಥ ಅಭಿಪ್ರಾಯಪಡುವಂತೆ :-

ಭಾರತೀಯ ಸ್ಥಳೀಯ ಸರಕಾರ ಆಡಳಿತ ವ್ಯವಸ್ಥೆಯಲ್ಲಿ ಸಂವಿಧಾನದ 73ನೇ ತಿದ್ದುಪಡಿ ಮಹಿಳೆಯರು ಮತ್ತು ದಲಿತರಿಗೆ ವಿಶಿಷ್ಠ ಸ್ಥಾನಮಾನವನ್ನು ಒದಗಿಸಿಕೊಟ್ಟಿದೆ. ಕಾನೂನಾತ್ಮಕ ಮೀಸಲಾತಿಯನ್ನು ಈ ವರ್ಗಗಳಿಗೆ ವಹಿಸಿಕೊಡುವ ಮೂಲಕ ರಾಜಕೀಯ ಅಧಿಕಾರ ಕೇವಲ ನಿರ್ದಿಷ್ಠ ಶಕ್ತಿಗಳಿಂದ ಮಹಿಳೆಯರಿಗೆ ಮತ್ತು ದಲಿತರಿಗೆ ನೀಡಿ ಆ ಮೂಲಕ ಸಮಾಜಿಕ ಹಾಗೂ ಲಿಂಗ ಸಮಾನತೆಗೆ ಸರಕಾರ ಗಂಭೀರ ಪ್ರಯತ್ನ ಮಾಡಿದೆ. ಆದರೂ ಕೂಡ ಮಹಿಳೆಯರು ರಾಜಕೀಯದಲ್ಲಿ

ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ. ಓರ್ವ ಮಹಿಳೆ ಗ್ರಾಮ ಪಂಚಾಯತಿಯ ಅಧ್ಯಕ್ಷಳಾದರೆ. ಅವಳ ನೈಜ ಅಧಿಕಾರ ಆಕೆಯ ಗಂಡನ ಹತ್ತಿರ ಇರುತ್ತದೆ. ದಲಿತರು ಶಾಸನಾತ್ಮಕವಾಗಿ ಮಾತ್ರ ಅಧಿಕಾರ ಪಡೆದಿದ್ದಾರೆ. ಅವರ ನೈಜ ಅಧಿಕಾರ ಕೆಲವು ಪಟ್ಟಭದ್ರರ ಹಿತಾಸಕ್ತಿಗಳ ಕೈಯಲ್ಲಿ ಇದೆ. ಕಾಲಾಂತರದಲ್ಲಿ ಪರಿಸ್ಥಿತಿ ಸುಧಾರಿಸುತ್ತಿದ್ದರೂ ಸಹ. ಅರ್ಹ ಮಟ್ಟದ ಬದಲಾವಣೆಗಳನ್ನು ನಿರೀಕ್ಷಿಸಲು ಇನ್ನೂ ಕೆಲವು ದಶಕಗಳು ಉರುಳಬಹುದು.

ದಲಿತರು ಮತ್ತು ಮಹಿಳೆಯರು ಪಂಚಾಯತ ಕಾರ್ಯ ಕಲಾಪಗಳಲ್ಲಿ ನಾಮಮಾತ್ರವಾಗಿ ಪಾಲ್ಗೊಳ್ಳುತ್ತಿದ್ದಾರೆ. ಹೀಗಾಗಿ ಸಂವಿಧಾನದ 73ನೇ ತಿದ್ದುಪಡಿ ತನ್ನ ಮೂಲ ಅಪೇಕ್ಷೆಗೆ ತಕ್ಕಂತೆ ಜಾರಿಗೊಳ್ಳದಿರುವುದು, ಆಡಳಿತಾತ್ಮಕ ದೌರ್ಬಲ್ಯ ಹಾಗೂ ಸಾಮಾಜಿಕ ಕಟ್ಟುಪಾಡುಗಳು ಇನ್ನೂಕೂಡ ಆಡಳಿತಗಾರರನ್ನು ನಿಯಂತ್ರಿಸಬಲ್ಲವು ಎಂಬುದನ್ನು ತೋರಿಸುತ್ತದೆ.

ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆಯು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುವುದು. ಜನರು ಮತ್ತು ಸಮಾಜ ಸಮನ್ವಯತೆಯಿಂದ ಸ್ಥಳೀಯ ಸಂಸ್ಥೆಗಳ ಅತ್ಯುತ್ತಮ ಉಪಯೋಗ ಪಡೆಯುವ ಜವಾಬ್ದಾರಿ ಸಮಾಜದ ಮೇಲಿದೆ.

ಗ್ರಾಮೀಣ ಜನರಲ್ಲಿ ಸಹಕಾರಿ ಸಂಘಗಳು, ಯುವಕ-ಯುವತಿ ಸಂಘಗಳು, ರೈತರ ಸಂಘಳು. ಮಹಿಳಾ ಮಂಡಳಗಳು, ಸ್ತ್ರೀ-ಶಕ್ತಿ ಸಂಘಟನೆಗಳು, ಸರ್ಕಾರೇತರ ಸಂಘಟನೆಗಳು ಕೂಡಿಕೊಂಡು ವೈಯುಕ್ತಿಕ ಸಮಸ್ಯೆಗಳ ನಿವಾರಣೆಗಾಗಿ ಸಮುದಾಯದ ಸಂಘಟನೆ ಹಾಗೂ ಕಲ್ಯಾಣಕ್ಕಾಗಿ ನಿರಂತರ ಹೋರಾಟ ಕಾರ್ಯಗಳನ್ನು ಮಾಡಿದಾಗ ಮಾತ್ರ ಜನರ ಪಾಲ್ಗೊಳ್ಳುವಿಕೆ ಉತ್ತಮ ಮಟ್ಟದ್ದಾಗಿರುತ್ತದೆ ಮತ್ತು ಗ್ರಾಮೀಣಾಭಿವೃದ್ಧಿ ಸಾಧಿಸಲು ಸಾಧ್ಯವಿದೆ.

ಸಾಮಾಜಿಕ ಅಭಿವೃದ್ಧಿ ಅಥವಾ ಗ್ರಾಮೀಣ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿರುವ ಅಧಿಕಾರಿಗಳು. ಅಭಿಯೋಜಕರು. ಕೇವಲ ಕಾಯ್ದೆ. ಶಾಸನ, ನಿಯಮ, ಸಮಯ ಸಂಪನ್ಮೂಲಗಳ ಮಿತಿಗಳಿಗೆ ಒಳಪಡದೆ ಓರ್ವ "ಸಾಮಾಜಿಕ ವೈದ್ಯ"ನಾಗಿ ಸಮಾಜಶಾಸ್ತ್ರಜ್ಞನಾಗಿ ಕಾರ್ಯ ನಿರ್ವಹಿಸುವುದು ತೀರಾ ಅವಶ್ಯವಾಗಿದೆ. ಜನರೊಂದಿಗೆ ಬೆರೆತು ಸಾರ್ವಜನಿಕರಿಗೆ ಹಿತವಾಗುವಂತಾ ಆದ್ಯತಾ ಯೋಜನೆಗಳನ್ನು ಜಾರಿಗೊಳಿಸಿ ಸಮಾಜದ ಎಲ್ಲಾ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು. ಗ್ರಾಮೀಣಾಭಿವೃದ್ಧಿ ಸಾಧಿಸುವದು ಅವಶ್ಯಕವಾಗಿದೆ. ಈ ರೀತಿಯಾಗಿ ಸಾಮಾಜಿಕ ಕೌಶಲ್ಯಗಳನ್ನು ಬಳಸಿ ಸ್ಥಳೀಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು. ಸಹಕಾರದ, ಸಹಬಾಳ್ವೆಯ ಮಹತ್ವ ತಿಳಿಸಿ, ಗ್ರಾಮೀಣ ಪರಿಸರ, ಸಂಸ್ಕೃತಿ. ಆಚಾರ ವಿಚಾರಗಳಿಗೆ ಅಡೆತಡೆಗಳಾಗದಂತೆ ಕಾರ್ಯಗಳನ್ನು ಜನರ ಪಾಲ್ಗೊಳ್ಳುವಿಕೆಯ ಮೂಲಕ ಯಶಸ್ವಿಗೊಳಿಸುವ ಜವಾಬ್ದಾರಿ ಪ್ರತಿ ಪ್ರಜೆ. ಅಧಿಕಾರಿ ಜನರಲ್ಲಿ ಮತ್ತು ಸಮಾಜದ ಮೇಲೆ ಇದೆ.

ಅಧ್ಯಾಯ ೫

ಮಾಹಿತಿಯ ವರ್ಗೀಕರಣ ಮತ್ತು ವಿಶ್ಲೇಷಣೆ

[illegible]

[illegible]

[illegible] [illegible]

[illegible] [illegible]

[illegible] [illegible]

[illegible] [illegible]

[illegible] [illegible]

[illegible] [illegible]

೫.1 ಮಾಹಿತಿ ವರ್ಗೀಕರಣ ಮತ್ತು ವಿಶ್ಲೇಷಣೆ

ಯಾವದೇ ಸಂಶೋಧಕನು ಯಾವುದೇ ಒಂದು ಅಧ್ಯಯನದ ಮೇಲೆ ಸಂಶೋಧನೆಯನ್ನು ಕೈಗೊಂಡನಂತರ ಅಲ್ಲಿ ದೊರೆತ ಮಾಹಿತಿ ಮತ್ತು ಅಂಕಿ-ಸಂಖ್ಯೆಗಳನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿದ ನಂತರ ಸಂಶೋಧನೆಯ ನೈಜಸ್ಥಿತಿ ತಿಳಿಯುತ್ತದೆ. ಆದುದರಿಂದ ಈ ಕೆಳಗಿನಂತೆ ಸಂಶೋಧನೆಯ ವಿಷಯವನ್ನು ದೊರೆತ ಅಂಕಿ ಸಂಖ್ಯೆಗಳ ಮುಖಾಂತರ ವರ್ಗೀಕರಣ ಮತ್ತು ವಿಶ್ಲೇಷಣೆಯನ್ನು ಈ ರೀತಿ ಮಾಡಲಾಗಿದೆ.

ಭಾಗ-ಅ

1. ದತ್ತಾಂಶಗಳ ವಿಶ್ಲೇಷಣೆ

1. ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳ ಬಗ್ಗೆ ನಿಮಗೆ ತಿಳಿದಿದೆಯಾ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೭೦	೧೦೦
೨.	ಇಲ್ಲ	-	-
	ಒಟ್ಟು	೧೭೦	೧೦೦

ಗ್ರಾಮ ಪಂಚಾಯತಿಯ ಸಾಮಾನ್ಯ ಕಾರ್ಯಚಟುವಟಿಕೆಗಳು ಏನು ಎಂಬ ಪರಿಕಲ್ಪನೆ ಎಲ್ಲಾ ೧೭೦ ಪ್ರತಿಸ್ಪಂದಿಗಳಿಗೆ ಇದೆ ಎಂಬುದನ್ನು ಈ ಮೇಲಿನ ಕೋಷ್ಟಕವು ಸ್ಪಷ್ಟಪಡಿಸುತ್ತದೆ.

1.1 ಹೌದಾದರೆ ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳು ಯಾವವು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಕುಡಿಯುವ ನೀರು ಪೂರೈಸುವುದು	೫	೨.೯
೨.	ಗ್ರಾಮೀಣ ರಸ್ತೆ ನಿರ್ಮಾಣ	೭	೪.೧
೩.	ಬೀದಿ ದೀಪ	೪	೨.೪
೪.	ಮೇಲಿನ ಎಲ್ಲಾ	೧೫೪	೯೦.೬
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವದೇನೆಂದರೆ, ಒಟ್ಟು ೧೭೦ ಪ್ರತಿಸ್ಪಂದಿಗಳಲ್ಲಿ ಕುಡಿಯುವ ನೀರು ಪೂರೈಕೆ ಮಾಡುವುದು ಗ್ರಾಮಪಂಚಾಯತಿಯ ಕಾರ್ಯವೆಂದು ೫ ಜನ (೨.೯%), ಗ್ರಾಮೀಣ ರಸ್ತೆ ನಿರ್ಮಾಣ ಮಾಡುವುದು ಎಂದು ೭ ಜನ (೪.೧೨%), ಬೀದಿ ದೀಪ ಹಾಕುವುದು ಎಂದು ೪ ಜನ (೨.೪%) ಹಾಗೂ ಇನ್ನುಳಿದ ೧೫೪ ಜನ (೯೦.೬%) ಪ್ರತಿಸ್ಪಂದಿಗಳು ಈ ಮೇಲೆ ವಿವರಿಸಿದ ಎಲ್ಲಾ ಕಾರ್ಯಗಳನ್ನು ಗ್ರಾಮ ಪಂಚಾಯತಿ ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ.

2. ಗ್ರಾಮ ಪಂಚಾಯತಿ ಜಾರಿಗೊಳಿಸಿದ ಗ್ರಾಮೀಣ ಅಭಿವೃದ್ಧಿಯ ಕಾರ್ಯಕ್ರಮಗಳ ಬಗ್ಗೆ ತಿಳಿದಿದೆಯಾ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೪೨	೮೩.೫೨
೨.	ಇಲ್ಲ	೨೮	೧೬.೪೮
	ಒಟ್ಟು	೧೭೦	೧೦೦

ಗ್ರಾಮ ಪಂಚಾಯತಿ ಜಾರಿಗೊಳಿಸಿರುವ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಕುರಿತು ಒಟ್ಟು ಪ್ರತಿಸ್ಪಂದಿಗಳಲ್ಲಿ ೧೪೨ ಜನರಿಗೆ (೮೩.೫೨%) ಮಾಹಿತಿ ಇದೆ. ಇನ್ನುಳಿದ ೨೮ ಜನರು (೧೬.೪೮%) ಈ ಕುರಿತು ಮಾಹಿತಿ ಹೊಂದಿಲ್ಲ.

2.1 ಹೌದಾದರೆ ಆ ಗ್ರಾಮೀಣ ಅಭಿವೃದ್ಧಿಯ ಕಾರ್ಯಕ್ರಮಗಳು ಯಾವವು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	೨೧	೧೨
೨.	ಗಂಗಾ ಕಲ್ಯಾಣ ಯೋಜನೆ	೦೨	೦೧
೩.	ಆಶ್ರಯ ಯೋಜನೆ	೧೮	೧೧
೪.	ಜವಾಹರ ರೋಜಗಾರ ಯೋಜನೆ	೦೯	೦೫
೫.	ಮೇಲಿನ ಎಲ್ಲಾ	೯೫	೫೬
೬.	ಸಂಬಂಧಿಸಿಲ್ಲ	೨೫	೧೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವದೇನೆಂದರೆ, ಒಟ್ಟು ೧೭೦ ಪ್ರತಿಸ್ಪಂದಿಗಳಲ್ಲಿ ೧೪೨ ಜನರು ಗ್ರಾಮೀಣಾಭಿವೃದ್ಧಿಯ ಯೋಜನೆಗಳ ಬಗ್ಗೆ ಮಾಹಿತಿ ಹೊಂದಿದ್ದಾರೆ. ಅದರಲ್ಲಿ ೨೧ ಜನರು (೧೨%) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ, ೨ ಜನ (೧%) ಗಂಗಾ ಕಲ್ಯಾಣ ಯೋಜನೆ, ೧೮ (೧೧%) ಜವಾಹರ ರೋಜಗಾರ ಯೋಜನೆ, ೯೫ ಜನ (೫೬%) ಈ ಮೇಲಿನ ಎಲ್ಲಾ ಯೋಜನೆಗಳ ಕುರಿತು ಮಾಹಿತಿ ಹೊಂದಿದ್ದಾರೆ.

೩. ನಿಮ್ಮ ಗ್ರಾಮ ಪಂಚಾಯತಿ ಕಾರ್ಯ ಚಟುವಟಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ತೃಪ್ತಿಕರವಾಗಿದೆ.	೩೯	೨೨.೯೪
೨.	ಅತೃಪ್ತಿಕರವಾಗಿದೆ	೨೫	೧೪.೭೧
೩	ಸಮಾಧಾನಕರವಾಗಿದೆ.	೧೦೬	೬೨.೩೫
	ಒಟ್ಟು	೧೭೦	೧೦೦

ಈ ಕೋಷ್ಟಕದ ಮೂಲಕ ತಿಳಿಯುವದೇನೆಂದರೆ, ೩೯ ಪ್ರತಿಸ್ಪಂದಿಗಳು (೨೨.೯೪%) ಪಂಚಾಯತಿ ಕಾರ್ಯಚಟುವಟಿಕೆಯಿಂದ ತೃಪ್ತರಾಗಿದ್ದಾರೆ. ೨೫ ಪ್ರತಿಸ್ಪಂದಿಗಳು (೧೪.೭೧%) ಅತೃಪ್ತರಾಗಿದ್ದಾರೆ. ೧೦೬ ಪ್ರತಿಸ್ಪಂದಿಗಳು (೬೨.೩೫%) ಪಂಚಾಯತಿ ಕಾರ್ಯಚಟುವಟಿಕೆಗಳು ಸಮಾಧಾನಕರವಾಗಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ.

ಭಾಗ-ಬ

1. ಗ್ರಾಮ ಸಭೆಯ ಬಗ್ಗೆ ಕೇಳಿದ್ದೀರಾ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೫೭	೯೨.೪
೨.	ಇಲ್ಲ	೧೩	೭.೬
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದ ಮೂಲಕ ಒಟ್ಟು ೧೭೦ ಪ್ರತಿಸ್ಪಂದಿಗಳಲ್ಲಿ ೧೫೭ಜನ (೯೨.೪%) ಗ್ರಾಮಸಭೆಯ ಬಗ್ಗೆ ಕೇಳಿದ್ದಾರೆ. ೧೩ ಪ್ರತಿಸ್ಪಂದಿಗಳಿಗೆ (೭.೬%) ಗ್ರಾಮಸಭೆಯ ಕುರಿತು ಕನಿಷ್ಠ ಮಾಹಿತಿಯೂ ಇಲ್ಲ.

1.1 ಗ್ರಾಮಸಭೆಯ ಎಂದರೇನು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪಂಚಾಯತ ಸದಸ್ಯರ ಸಭೆ	೦೬	೩.೫
೨.	ಗ್ರಾಮದ ಜನತೆಯ ಸಭೆ	೪೫	೨೬.೫
೩.	ಅಧಿಕಾರಿಗಳ ಸಭೆ	೦೭	೪.೧
೪.	ಮತದಾರರ ಪಟ್ಟಿಯಲ್ಲಿ ಹೆಸರಿರುವವರ ಸಭೆ	೭೯	೪೬.೫
೫.	ಗ್ರಾಮದ ಹಿರಿಯರ ಸಭೆ	೨೦	೧೧.೮
೬.	ಸಂಬಂಧಿಸಿಲ್ಲ	೧೩	೭.೬
	ಒಟ್ಟು	೧೭೦	೧೦೦

ಗ್ರಾಮಸಭೆಯ ಕುರಿತು ಮಾಹಿತಿ ಹೊಂದಿರುವ ೧೫೭ ಸದಸ್ಯರಲ್ಲಿ ೬ ಪ್ರತಿಸ್ಪಂದಿಗಳು (೩.೫%) ಗ್ರಾಮಸಭೆ ಪಂಚಾಯತ ಸದಸ್ಯರ ಸಭೆ ಎಂದು, ೪೫ ಪ್ರತಿಸ್ಪಂದಿಗಳು (೨೬.೫%) ಗ್ರಾಮದ ಜನತೆಯ ಸಭೆಯೆಂದು, ೭ ಜನ (೪.೧%) ಅಧಿಕಾರಿಗಳ ಸಭೆಯೆಂದು, ೭೯ ಜನ ಪ್ರತಿಸ್ಪಂದಿಗಳು (೪೬.೫%) ಮತದಾರರ ಪಟ್ಟಿಯಲ್ಲಿ ಹೆಸರು ಇರುವವರ ಸಭೆ ಎಂದು, ೨೦ ಜನ ಪ್ರತಿಸ್ಪಂದಿಗಳು (೧೧..೮%) ಗ್ರಾಮದ ಹಿರಿಯರು ಪ್ರಜ್ಞಾವಂತರ ಸಭೆಯೇ ಗ್ರಾಮಸಭೆ ಎಂದು ಅಭಿಪ್ರಾಯಪಟ್ಟಿದ್ದಾರೆ.

2. ಯಾವ ಮೂಲದಿಂದ ಗ್ರಾಮಸಭೆಯ ಬಗ್ಗೆ ತಿಳಿದುಕೊಂಡಿದ್ದೀರಿ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಕರಪತ್ರ, ಭಿತ್ತಿ ಚಿತ್ರ, ಡಂಗೂರ, ಪಂಚಾಯತ ಸೂಚನಾ ಫಲಕ.	೧೧೨	೬೬
೨.	ಪಂಚಾಯತಿ ಕಾರ್ಯದರ್ಶಿಯ ಮೂಲಕ	೦೬	೦೪
೩.	ಪಂಚಾಯತಿ ಸದಸ್ಯರಿಂದ	೦೬	೦೪
೪.	ಸಾರ್ವಜನಿಕರಿಂದ	೦೫	೦೩
೫.	ಮೇಲಿನ ಎಲ್ಲಾ	೨೮	೧೬
೬.	ಸಂಬಂಧಿಸಿಲ್ಲ	೧೩	೮
	ಒಟ್ಟು	೧೭೦	೧೦೦

[illegible]

ಈ ಮೇಲಿನ ಕೋಷ್ಟಕವು ಗ್ರಾಮಸಭೆಯ ಕುರಿತು ಪ್ರತಿಸ್ಪಂದಿಗಳಿಗೆ ದೊರೆತ ಮಾಹಿತಿಯ ಮೂಲಗಳನ್ನು ತಿಳಿಸುತ್ತದೆ. ೧೧೨ ಪ್ರತಿಸ್ಪಂದಿಗಳು (೬೬%) ಕರಪತ್ರ, ಭಿತ್ತಿಚಿತ್ರ, ಡಂಗೂರ, ಪಂಚಾಯತ ಸೂಚನಾ ಫಲಕದ ಮೂಲಕ ಗ್ರಾಮಸಭೆಯ ಬಗ್ಗೆ ತಿಳಿದುಕೊಂಡಿದ್ದಾರೆ. ತಲಾ ೬ ಜನ (೪%) ಪಂಚಾಯತ ಕಾರ್ಯದರ್ಶಿ ಹಾಗೂ ಅಧ್ಯಕ್ಷ ಸದಸ್ಯರಿಂದ, ೫ ಜನ (೦೩%) ಸಾರ್ವಜನಿಕ ಸಂವಹನದ ಮೂಲಕ, ಇನ್ನುಳಿದ ೨೮ ಜನ (೧೬%) ಮೇಲಿನ ಎಲ್ಲಾ ಮೂಲಗಳಿಂದ ಗ್ರಾಮಸಭೆಯ ಕುರಿತು ಮಾಹಿತಿ ಪಡೆದಿದ್ದಾರೆ.

3. ಗ್ರಾಮಸಭೆಯನ್ನು ಯಾರು ಕರೆಯುತ್ತಾರೆ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪಂಚಾಯತಿ ಕಾರ್ಯದರ್ಶಿ	೧೦೦	೫೮.೮೨
೨.	ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷ	೫೭	೩೩.೫೩
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

೧೦೦ ಪ್ರತಿಸ್ಪಂದಿಗಳು (೫೮.೮೨%) ಗ್ರಾಮಸಭೆಯನ್ನು ಪಂಚಾಯತಿ ಕಾರ್ಯದರ್ಶಿ ಕರೆಯುತ್ತಾರೆಂದು, ೫೭ ಜನ ಪ್ರತಿಸ್ಪಂದಿಗಳು (೩೩.೫೩%) ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಗ್ರಾಮಸಭೆಯನ್ನು ಕರೆಯುತ್ತಾರೆಂದು ಪ್ರತಿಕ್ರಿಯಿಸಿದ್ದಾರೆ.

4. ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರ ಅರ್ಹತೆ ಏನು ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	೧೮ ವರ್ಷ ಮೇಲ್ಪಟ್ಟವರಾಗಿರಬೇಕು.	೩೬	೨೧
೨.	ಗ್ರಾಮದ ನಿವಾಸಿಗಳಾಗಿರಬೇಕು	೪೧	೨೪
೩.	ಮತದಾರರ ಪಟ್ಟಿಯಲ್ಲಿ ಹೆಸರು ಇರಬೇಕು	೮೦	೪೭
೪.	ಸಂಬಂಧಿಸಿಲ್ಲ.	೧೩	೦೮
	ಒಟ್ಟು	೧೭೦	೧೦೦

ಈ ಕೋಷ್ಟಕವು ಗ್ರಾಮಸಭೆಯಲ್ಲಿ ಪಾಲ್ಗೊಳ್ಳಲು ಸದಸ್ಯರ ಕನಿಷ್ಟ ಅರ್ಹತೆ ಕುರಿತು ಪ್ರತಿಸ್ಪಂದಿಗಳ ಅಭಿಪ್ರಾಯ ತಿಳಿಸುತ್ತದೆ. ೩೬ ಪ್ರತಿಸ್ಪಂದಿಗಳು (೨೧%) ೧೮ ವರ್ಷ ಮೇಲ್ಪಟ್ಟವರು ಗ್ರಾಮಸಭೆಯಲ್ಲಿ ಪಾಲ್ಗೊಳ್ಳಬಹುದು ಎಂದು, ೪೧ಜನ (೨೪%) ಗ್ರಾಮದ ನಿವಾಸಿಗಳು ಗ್ರಾಮಸಭೆಯಲ್ಲಿ ಪಾಲ್ಗೊಳ್ಳಬೇಕೆಂದು, ೮೦ ಜನ (೪೭%) ಮತದಾರರ ಪಟ್ಟಿಯಲ್ಲಿ ಹೆಸರು ಇರುವವರು ಗ್ರಾಮಸಭೆಯಲ್ಲಿ ಪಾಲ್ಗೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

5. ಗ್ರಾಮಸಭೆ ನಡೆಸಲು ಎಷ್ಟು ಜನ ಅರ್ಹ ಸದಸ್ಯರ ಹಾಜರಾತಿ ಇರಬೇಕು ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಒಟ್ಟು ಅರ್ಹ ಸದಸ್ಯರ ೧/೧೦ ಭಾಗ ಅಥವಾ ೧೦೦ ಜನ ಅಥವಾ ಯಾವುದು ಕಡಿಮೆಯೋ ಅದು	೪೮	೨೮
೨.	೧೦೦ಕ್ಕಿಂತ ಹೆಚ್ಚು	೧೦೦	೫೯
೩.	ಹಿರಿಯರ ಹಾಜರಾತಿ ಸಾಕು	೦೯	೦೫
೪.	ಸಂಬಂಧಿಸಿಲ್ಲ	೧೩	೦೮
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದ ಮೂಲಕ ತಿಳಿದುಬರುವದೇನೆಂದರೆ ೪೮ ಜನ ಪ್ರತಿಸ್ಪಂದಿಗಳು (೨೮%) ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳಬಹುದಾದ ಅರ್ಹ ಸದಸ್ಯರ ಕುರಿತು ಸ್ಪಷ್ಟ ಮಾಹಿತಿ ನೀಡಿದ್ದಾರೆ. ೧೦೦ ಜನ ಪ್ರತಿಸ್ಪಂದಿಗಳ (೫೯%) ಪ್ರಕಾರ ೧೦೦ಕ್ಕಿಂತ ಹೆಚ್ಚು ಹಾಜರಾತಿ ಬೇಕು, ೯ ಜನರ ಪ್ರಕಾರ (೦೫%) ಗ್ರಾಮಸಭೆ ನಡೆಸಲು ಊರಿನ ಹಿರಿಯರ ಹಾಜರಾತಿ ಸಾಕು ಎಂದಿದ್ದಾರೆ.

6. ಗ್ರಾಮಸಭೆಯನ್ನು ಎಲ್ಲಿ ನಡೆಸಲಾಗುತ್ತದೆ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪಂಚಾಯತಿ ಆವರಣ	೧೫೭	೯೨.೪
೨.	ಸಾರ್ವಜನಿಕ ಸ್ಥಳದಲ್ಲಿ	೦೦	೦೦
೩.	ಸಂಬಂಧಿಸಿಲ್ಲ	೧೩	೭.೬
	ಒಟ್ಟು	೧೭೦	೧೦೦

ಈ ಕೋಷ್ಟಕದ ಮೂಲಕ ತಿಳಿಯುವದೇನೆಂದರೆ, ೧೫೭ ಪ್ರತಿಸ್ಪಂದಿಗಳು (೯೨.೪%) ಪಂಚಾಯತಿ ಆವರಣದಲ್ಲಿ ಗ್ರಾಮಸಭೆ ನಡೆಸಬೇಕು ಎಂದರೆ, ಇನ್ನುಳಿದ ೧೩ ಪ್ರತಿಸ್ಪಂದಿಗಳು (೭.೬%) ಈ ಕುರಿತು ಮಾಹಿತಿ ಹೊಂದಿಲ್ಲ.

7. ಗ್ರಾಮಸಭೆಯಲ್ಲಿ ನೀವು ಪಾಲ್ಗೊಂಡಿದ್ದೀರಾ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೦೨	೬೦
೨.	ಇಲ್ಲ	೫೫	೩೨.೪
೩.	ಸಂಬಂಧಿಸಿಲ್ಲ	೧೩	೭.೬
	ಒಟ್ಟು	೧೭೦	೧೦೦

ಈ ಕೋಷ್ಟಕದ ಮೂಲಕ ತಿಳಿಯುವದೇನೆಂದರೆ, ಒಟ್ಟು ಸಂಬಂಧಿತ ಪ್ರತಿಸ್ಪಂದಿಗಳಲ್ಲಿ ೧೦೨ ಜನ ಪ್ರತಿಸ್ಪಂದಿಗಳು (೬೦%) ಗ್ರಾಮಸಭೆಯಲ್ಲಿ ಪಾಲ್ಗೊಂಡಿದ್ದಾರೆ. ೫೫ ಜನ (೩೨.೪%) ಗ್ರಾಮಸಭೆಯ ಬಗ್ಗೆ ಜಾಗೃತಿ ಇದ್ದರೂ ಸಹಿತ ಸಭೆಯಲ್ಲಿ ಪಾಲ್ಗೊಂಡಿಲ್ಲ ಎಂಬುದು ತಿಳಿಯುತ್ತದೆ.

7.1 ಗ್ರಾಮಸಭೆಯಲ್ಲಿ ನೀವು ಪಾಲ್ಗೊಳ್ಳದಿರಲು ಕಾರಣವೇನು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಮಾಹಿತಿಯ ಕೊರತೆ	೨೩	೪೧.೮
೨.	ವೈಯುಕ್ತಿಕ ಸಮಸ್ಯೆ	೩೨	೫೮.೨
	ಒಟ್ಟು	೫೫	೧೦೦

೨೩ ಜನ ಪ್ರತಿಸ್ಪಂದಿಗಳು (೪೧.೮%) ಮಾಹಿತಿಯ ಕೊರತೆಯಿಂದಾಗಿ ಹಾಗೂ ೩೨ ಜನ (೫೮.೨%) ಪ್ರತಿಸ್ಪಂದಿಗಳು ವೈಯಕ್ತಿಕ ಸಮಸ್ಯೆಗಳಿಂದಾಗಿ ಗ್ರಾಮಸಭೆಯಲ್ಲಿ ಪಾಲ್ಗೊಳ್ಳಲಿಲ್ಲ ಎಂದು ಈ ಮೂಲಕ ತಿಳಿಯುತ್ತದೆ.

೪. ಗ್ರಾಮಸಭೆಗೆ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೪೨	೮೩.೫೩
೨.	ಇಲ್ಲ	೧೫	೮.೮೨
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದ ಮೂಲಕ ತಿಳಿದು ಬರುವದೇನೆಂದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಂದು ೧೪೨ ಜನ ಪ್ರತಿಸ್ಪಂದಿಗಳು (೮೩.೫೩%) ಹಾಗೂ ೧೫ ಜನ ಪ್ರತಿಸ್ಪಂದಿಗಳು (೮.೮೨%) ಮಹಿಳೆಯರು ಗ್ರಾಮಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

೪.1 ಗ್ರಾಮಸಭೆಗೆ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಲು ಹೇಗೆ ಸಾಧ್ಯವಾಯಿತು ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಮಹಿಳಾ ಶಿಕ್ಷಣ	೭೪	೫೨.೧೧೩
೨.	ಜಾಗೃತಿ	೫೯	೪೧.೫೪೯
೩.	ಆಧುನಿಕತೆಯ ಪ್ರಭಾವ	೦೯	೬.೩೩೮
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದ ಮೂಲಕ ಗ್ರಾಮಸಭೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಂದು ೧೪೨ ಜನ ಪ್ರತಿಸ್ಪಂದಿಗಳು (೮೩.೫೩%) ಹಾಗೂ ೧೫ ಜನ ಪ್ರತಿಸ್ಪಂದಿಗಳು (೮.೮೨%) ಮಹಿಳೆಯರು ಗ್ರಾಮಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

೪.2 ಇಲ್ಲವಾದರೆ ಏಕೆ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪುರುಷ ಪ್ರಧಾನ ವ್ಯವಸ್ಥೆ	೦೪	೨೭
೨.	ಮಹಿಳೆಯರ ಕುರಿತಾದ ಅಸಡ್ಡೆ	೦೯	೬೦
೩.	ಜಾಗೃತಿಯ ಕೊರತೆ	೦೨	೧೩
	ಒಟ್ಟು	೧೫	೧೦೦

ಪುರುಷ ಪ್ರಧಾನ ವ್ಯವಸ್ಥೆಯ ಗ್ರಾಮಸಭೆಯಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ತೊಡಕಾಗಿದೆ ಎಂದು ನಾಲ್ಕು ಜನ ಪ್ರತಿಸ್ಪಂದಿಗಳು (೨೭%), ಮಹಿಳೆಯರ ಕುರಿತಾದ ಅಸಡ್ಡೆ ಎಂದು ೯ ಜನ ಪ್ರತಿಸ್ಪಂದಿಗಳು (೬೦%), ೨ ಜನ ಪ್ರತಿಸ್ಪಂದಿಗಳ (೧೩%) ಪ್ರಕಾರ ಜಾಗೃತಿಯ ಕೊರತೆಯು ಮಹಿಳೆಯರ ಪಾಲ್ಗೊಳ್ಳುವಿಕೆ ತೊಡಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

೯. ಗ್ರಾಮಸಭೆಯಲ್ಲಿ ಹಿಂದುಳಿದ ವರ್ಗಗಳ ಸದಸ್ಯರ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ಏನು ಮಾಡಬಹುದು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಿಕ್ಷಣ ನೀಡುವುದು	೬೯	೪೦.೬
೨.	ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು	೫೫	೩೨.೪
೩.	ಕಡ್ಡಾಯ ಪಾಲ್ಗೊಳ್ಳುವಿಕೆಯ ಮಿತಿಯನ್ನು ಹೆಚ್ಚಿಸುವುದು	೩೩	೧೯.೪
೪.	ಸಂಬಂಧಿಸಿಲ್ಲ.	೧೩	೭.೬
	ಒಟ್ಟು	೧೭೦	೧೦೦

ಈ ಕೋಷ್ಟಕದ ಪ್ರಕಾರ ೬೧ ಜನ ಪ್ರತಿಸ್ಪಂದಿಗಳು (೪೦.೬%) ಶಿಕ್ಷಣ ನೀಡುವುದರ ಮುಖಾಂತರ, ೫೫ ಜನ (೩೨.೪) ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಮೂಲಕ, ೩೩ ಜನ (೧೯.೪%) ಕಡ್ಡಾಯ ಪಾಲ್ಗೊಳ್ಳುವಿಕೆಯ ಮಿತಿಯನ್ನು ಹೆಚ್ಚಿಸುವುದರ ಮೂಲಕ ಗ್ರಾಮಸಭೆಯಲ್ಲಿ

ಹಿಂದುಳಿದ ವರ್ಗಗಳ ಸದಸ್ಯರ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಬಹುದು ಎಂಬ ಅಭಿಪ್ರಾಯ ಪಟ್ಟಿದ್ದಾರೆ ಎಂದು ತಿಳಿದು ಬರುತ್ತದೆ.

10. ಗ್ರಾಮಸಭೆಯಲ್ಲಿ ನಿಮ್ಮ ಪಾತ್ರವೇನು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಅರ್ಹ ಸದಸ್ಯನಾಗಿ ಪಾಲ್ಗೊಳ್ಳುವುದು.	೫೭	೩೪
೨.	ಆದ್ಯತಾ ಯೋಜನೆಗಳನ್ನು ರೂಪಿಸುವುದು.	೬೨	೩೭
೩.	ಅಭಿವೃದ್ಧಿ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ಪಡೆಯುವುದು.	೨೪	೧೪
೪.	ಗ್ರಾಮೀಣ ಜನರ, ಜಾನುವಾರುಗಳ ಸ್ವಚ್ಛತೆ, ಆರೋಗ್ಯ ಕುರಿತು ಚರ್ಚಿಸುವುದು	೧೪	೮
೫	ಸಂಬಂಧಿಸಿಲ್ಲ	೧೩	೮
	ಒಟ್ಟು	೧೭೦	೧೦೦

ಈ ಕೋಷ್ಟಕದ ಪ್ರಕಾರ ಗ್ರಾಮಸಭೆಯಲ್ಲಿ ಪ್ರತಿಸ್ಪಂದಿಗಳ ಪಾತ್ರವೇನೆಂಬುದನ್ನು ತಿಳಿಯಬಹುದು. ಅರ್ಹ ಸದಸ್ಯನಾಗಿ ಪಾಲ್ಗೊಳ್ಳುತ್ತೇನೆಂದು ೫೭ಜನ (೩೪%), ಆದ್ಯತಾ ಯೋಜನೆಗಳನ್ನು ರೂಪಿಸುವುದಾಗಿ ೬೨ ಜನ (೩೬%). ಅಭಿವೃದ್ಧಿ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ಪಡೆಯುವದಾಗಿ ೨೪ ಜನ (೧೪%), ೧೪ ಜನ (೮%) ಗ್ರಾಮೀಣ ಜನರ ಜಾನುವಾರುಗಳ ಸ್ವಚ್ಛತೆ, ಆರೋಗ್ಯ ಕುರಿತು ಚರ್ಚಿಸುವುದಾಗಿ ಅಭಿಪ್ರಾಯಪಟ್ಟಿದ್ದಾರೆ.

11. ಗ್ರಾಮ ಸಭೆಯ ಮುಖಾಂತರ ಗ್ರಾಮೀಣಾಭಿವೃದ್ಧಿ ಅಂಶಗಳನ್ನು ಚರ್ಚೆ ಮಾಡುವುದು ಅವಶ್ಯಕವೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೪೪	೭೪.೭೦
೨.	ಇಲ್ಲ	೧೩	೭.೬೫
೪.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಗ್ರಾಮೀಣಾಭಿವೃದ್ಧಿ ಅಂಶಗಳ ಚರ್ಚೆಗೆ ಗ್ರಾಮಸಭೆ ಉತ್ತಮ ವೇದಿಕೆಯೆಂದು, ೧೪೪ ಜನ ಪ್ರತಿಸ್ಪಂದಿಗಳು (೭೪.೭೦%) ಅಭಿಪ್ರಾಯಪಟ್ಟರೆ, ಇದಕ್ಕೆ ತದ್ವಿರುದ್ಧವಾಗಿ ೧೩ ಜನ ಪ್ರತಿಸ್ಪಂದಿಗಳು (೭.೬೫%) ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ, ಎಂಬುದು ಈ ಕೋಷ್ಟಕದ ಮೂಲಕ ಅರ್ಥೈಸಿಕೊಳ್ಳಬಹುದು.

11.1. ಹೌದಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮದ ಅರ್ಹ ಸದಸ್ಯರ ಸಭೆ	೪೧	೨೮.೫
೨.	ಸಾಮೂಹಿಕ ತೀರ್ಮಾನಕ್ಕೆ ಸಹಕಾರಿಯಾಗಿದೆ.	೧೦೩	೭೧.೫
	ಒಟ್ಟು	೧೪೪	೧೦೦

ಈ ಕೋಷ್ಟಕದ ಮೂಲಕ ತಿಳಿದು ಬರುವುದೇನೆಂದರೆ, ೪೧ ಜನ ಪ್ರತಿಸ್ಪಂದಿಗಳ ಪ್ರಕಾರ (೨೮%) ಅರ್ಹ ಹಾಗೂ ಜವಾಬ್ದಾರಿಯುತ ಜನರ ಸಭೆಯಾಗಿದೆ. ೧೦೩ ಜನ ಪ್ರತಿಸ್ಪಂದಿಗಳ (೭೧.೫%) ಪ್ರಕಾರ ಸಾಮೂಹಿಕ ತೀರ್ಮಾನಕ್ಕೆ ಗ್ರಾಮಸಭೆ ಉತ್ತಮ ವೇದಿಕೆಯಾಗಬಲ್ಲದು. ಹೀಗಾಗಿ ಗ್ರಾಮೀಣಾಭಿವೃದ್ಧಿ ಅಂಶಗಳನ್ನು ಗ್ರಾಮಸಭೆಯಲ್ಲಿ ಚರ್ಚೆ ಮಾಡುವುದು ಅವಶ್ಯಕವೆಂದು ಅಭಿಪ್ರಾಯಪಟ್ಟಿದ್ದಾರೆ.

11.2. ಇಲ್ಲವಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮಸಭೆ ನೇಪತ್ಯದ ಸಭೆ	೬	೪೬.೨
೨.	ಪಕ್ಷಪಾತಿ ಸಭೆ	೭	೫೩.೮
	ಒಟ್ಟು	೧೩	೧೦೦

ಈ ಕೋಷ್ಟಕದ ಪ್ರಕಾರ ೧೩ ಜನ ಪ್ರತಿಸ್ಪಂದಿಗಳ ಪ್ರಕಾರ ಗ್ರಾಮಸಭೆ ಗ್ರಾಮೀಣಾಭಿವೃದ್ಧಿ ಚರ್ಚೆಗೆ ಉತ್ತಮವಾದುದಲ್ಲ ಏಕೆಂದರೆ, ೬ ಜನ ಪ್ರತಿಸ್ಪಂದಿಗಳ (೪೬.೨) ಪ್ರಕಾರ ಗ್ರಾಮಸಭೆ ನೇಪತ್ಯದ ಸಭೆ, ೭ ಜನ ಪ್ರತಿಸ್ಪಂದಿಗಳ (೫೩.೮%) ಪ್ರಕಾರ ಇದೊಂದು ಪಕ್ಷಪಾತಿ ಸಭೆ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂಬುದು ಅರ್ಥವಾಗುತ್ತದೆ.

12. ಗ್ರಾಮಸಭೆಯ ಕಾರ್ಯ ಚಟುವಟಿಕೆಗಳು ಯಾವವು ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪಂಚಾಯತಿಯ ವಾರ್ಷಿಕ ಯೋಜನೆಯ ಪರಿಶೀಲನೆ ಮತ್ತು ಅನುಮೋದನೆ	೦೪	೨.೩೫
೨.	ಆದ್ಯತಾ ಯೋಜನೆ ತಯಾರಿಸುವುದು.	೦೩	೧.೭೬
೩.	ಅರ್ಹ ಫಲಾನುಭವಿಗಳ ಪಟ್ಟಿಗೆ ಒಪ್ಪಿಗೆ ಸೂಚಿಸುವುದು.	೧೫	೮.೮೨
೪.	ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವುದು.	೦೧	೦.೫೯
೫.	ಗ್ರಾಮೀಣ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು.	೦೭	೪.೧೨
೬.	ಪಂಚಾಯತ ಜನರ ಮತ್ತು ಜಾನುವಾರುಗಳ ಆರೋಗ್ಯ ಅಭಿವೃದ್ಧಿ ಮಾಡುವುದು.	೦೨	೧.೧೮
೭.	ಮೇಲಿನ ಎಲ್ಲಾ	೧೨೫	೭೩.೫೩
೮.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಕೋಷ್ಟಕವು ಗ್ರಾಮಸಭೆಯ ಕಾರ್ಯಚಟುವಟಿಕೆಗಳ ಕುರಿತು ಪ್ರತಿಸ್ಪಂದಿಗಳಿಗೆ ಮಾಹಿತಿಯನ್ನು ನೀಡುತ್ತದೆ. ೪ ಜನ ಪ್ರತಿಸ್ಪಂದಿಗಳು (೨.೩೫%), ಪಂಚಾಯತಿ ವಾರ್ಷಿಕ ಯೋಜನೆ ಪರಿಶೀಲನೆ ಮತ್ತು ಅನುಮೋದನೆ, ೩ ಜನ ಪ್ರತಿಸ್ಪಂದಿಗಳು (೧.೭೬%) ಆದ್ಯತಾ ಯೋಜನೆ ತಯಾರಿಸುವುದು, ೧೫ ಜನ ಪ್ರತಿಸ್ಪಂದಿಗಳು (೮.೮೨%) ಅರ್ಹ ಫಲಾನುಭವಿಗಳನ್ನು ಗುರುತಿಸುವುದು.

ಓರ್ವ ಪ್ರತಿಸ್ಪಂದಿ (೦.೫೯%) ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ನೀಡುವುದು. ೭ ಜನ ಪ್ರತಿಸ್ಪಂದಿಗಳು (೪.೧೨%) ಗ್ರಾಮೀಣ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು. ೨ ಜನ ಪ್ರತಿಸ್ಪಂದಿಗಳು (೧.೧೮%) ಜನರ ಮತ್ತು ಜಾನುವಾರುಗಳ ಆರೋಗ್ಯ ಅಭಿವೃದ್ಧಿ ಮಾಡುವುದು. ೧೨೫ ಜನ ಪ್ರತಿಸ್ಪಂದಿಗಳ (೭೩.೫೩%) ಕೋಷ್ಟಕದಲ್ಲಿ ವಿವರಿಸಿದ ಎಲ್ಲಾ ಕಾರ್ಯಗಳನ್ನು ನೆರವೇರಿಸುವುದು ಗ್ರಾಮಸಭೆಯ ಚಟುವಟಿಕೆ ಎಂದು ಅಭಿಪ್ರಾಯಪಟ್ಟಿದ್ದಾರೆ.

13. ಗ್ರಾಮಸಭೆಯಲ್ಲಿ ಜಾತೀಯತೆ ಇದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೭೬	೪೪.೭೦
೨.	ಇಲ್ಲ	೮೧	೪೭.೬೫
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಕೋಷ್ಟಕದ ಪ್ರಕಾರ ೭೬ ಜನ ಪ್ರತಿಸ್ಪಂದಿಗಳ (೪೪.೭೦%) ಗ್ರಾಮಸಭೆಯಲ್ಲಿ ಜಾತೀಯತೆ ಇದೆ. ಆದರೆ ಬಹುಸಂಖ್ಯಾತ ಅಂದರೆ, ೮೬ ಪ್ರತಿಸ್ಪಂದಿಗಳ (೪೭.೬೫%) ಪ್ರಕಾರ ಗ್ರಾಮಸಭೆಯಲ್ಲಿ ಜಾತೀಯತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂದು ತಿಳಿಯುತ್ತದೆ.

14. ಗ್ರಾಮಸಭೆಯಲ್ಲಿ ಸ್ವಜನ ಪಕ್ಷಪಾತ ಇದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೨೮	೭೫.೨೯
೨.	ಇಲ್ಲ	೨೯	೧೭.೦೬
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಕೋಷ್ಟಕದ ಪ್ರಕಾರ ೧೨೮ ಪ್ರತಿಸ್ಪಂದಿಗಳು (೭೫.೨೯%) ಗ್ರಾಮಸಭೆಯಲ್ಲಿ ಸ್ವಜನ ಪಕ್ಷಪಾತ ಇದೆಯೆಂದು, ೨೯ ಜನ ಪ್ರತಿಸ್ಪಂದಿಗಳು (೧೭.೦೬) ಸ್ವಜನ ಪಕ್ಷಪಾತ ಇಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಎಂಬುದು ಸ್ಪಷ್ಟವಾಗುತ್ತದೆ.

15. ಗ್ರಾಮಸಭೆಯಲ್ಲಿ ರಾಜಕೀಯ ಇದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೩೧	೭೭.೦೬
೨.	ಇಲ್ಲ	೨೬	೧೫.೨೯
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

೧೩೧ ಜನ ಪ್ರತಿಸ್ಪಂದಿಗಳ (೭೭.೦೬) ಪ್ರಕಾರ ಗ್ರಾಮಸಭೆಯಲ್ಲಿ ರಾಜಕೀಯ ನಡೆಯುತ್ತದೆ. ೨೬ ಜನ ಪ್ರತಿಸ್ಪಂದಿಗಳ (೧೫.೨೯%) ಗ್ರಾಮಸಭೆಯಲ್ಲಿ ನಿರಪೇಕ್ಷ ಚರ್ಚೆ ನಡೆಯುತ್ತದೆ ಎಂಬ ಅಭಿಪ್ರಾಯವನ್ನು ಈ ಕೋಷ್ಟಕದ ಮೂಲಕ ತಿಳಿದುಕೊಳ್ಳಬಹುದು.

16. ನಡಾವಳಿ ಪುಸ್ತಕದ ಬಗ್ಗೆ ಮಾಹಿತಿ ಇದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೦೭	೬೨.೯೪
೨.	ಇಲ್ಲ	೫೦	೨೯.೪೧
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಕೋಷ್ಟಕದ ಮೂಲಕ ತಿಳಿಯುವದೇನೆಂದರೆ, ೧೦೭ ಜನ ಪ್ರತಿಸ್ಪಂದಿಗಳು (೬೨.೯೪%) ನಡಾವಳಿ ಪುಸ್ತಕದ ಕುರಿತು ಮಾಹಿತಿ ಹೊಂದಿದ್ದಾರೆ. ೫೦ ಜನ (೨೯.೪೧%) ಈ ಕುರಿತು ಅಗತ್ಯ ಮಾಹಿತಿ ಹೊಂದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

17. ಕಳೆದ ಎರಡು ವರ್ಷದಲ್ಲಿ ಗ್ರಾಮಸಭೆ ಕೈಗೊಂಡ ನಿರ್ಣಯಗಳು ಜಾರಿಯಾಗಿವೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಪೂರ್ಣವಾಗಿ	೨೧	೧೨.೩೫
೨.	ಭಾಗಶಃ	೧೦೬	೬೨.೩೫
೩.	ಅಪೂರ್ಣವಾಗಿ	೩೦	೧೭.೬೫
೪.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಕೋಷ್ಟಕದ ಪ್ರಕಾರ ೨೧ ಜನ ಪ್ರತಿಸ್ಪಂದಿಗಳು (೧೨.೩೫%) ಪ್ರಕಾರ ಗ್ರಾಮಸಭೆ ಕೈಗೊಂಡ ನಿರ್ಣಯಗಳು ಪೂರ್ಣವಾಗಿ ಜಾರಿಯಾಗಿವೆ ಎಂದು, ೧೦೬ ಜನ ಪ್ರತಿಸ್ಪಂದಿಗಳ (೬೨.೩೫%) ಭಾಗಶಃ, ಹಾಗೂ ೩೦ ಜನ ಪ್ರತಿಸ್ಪಂದಿಗಳ (೧೭.೬೫%) ಪ್ರಕಾರ ಗ್ರಾಮಸಭೆ ನಿರ್ಣಯಗಳು ಅಪೂರ್ಣವಾಗಿ ಜಾರಿಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾಗ-ಕ

1. ಗ್ರಾಮಸಭೆಯ ಬಗ್ಗೆ ಜನರಿಗೆ ಹೇಗೆ ಜಾಗೃತಿ ಮೂಡಿಸಬಹುದು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಸ್ಥಳೀಯ ಸಮೂಹ ಮಾಧ್ಯಮಗಳ ಮೂಲಕ	೪೪	೨೫.೮೮
೨.	ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳ ಮೂಲಕ	೪೮	೨೮.೨೪
೩.	ಸ್ವ-ಪ್ರಚೋದನೆ	೨೫	೧೪.೭೦
೪.	ಪರಿಣಾಮಕಾರಿ ಸಾರ್ವಜನಿಕ ಸಂವಹನ	೪೦	೨೩.೫೩
೫.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ. ೪೪ ಜನ ಪ್ರತಿಸ್ಪಂದಿಗಳು (೨೫.೮೮%) ಸ್ಥಳೀಯ ಸಮೂಹ ಮಾಧ್ಯಮದ ಮೂಲಕ. ೪೮ ಜನ ಪ್ರತಿಸ್ಪಂದಿಗಳು (೨೮.೨೪%), ಸಾರ್ವಜನಿಕ ಜಾಗೃತಿಯ ಕಾರ್ಯಕ್ರಮದ ಮೂಲಕ ೨೫ ಜನ ಪ್ರತಿಸ್ಪಂದಿಗಳು (೧೪.೭೦%) ಸ್ವ ಪ್ರಚೋದನೆಯ ಮೂಲಕ. ೪೦ ಜನ ಪ್ರತಿಸ್ಪಂದಿಗಳು (೨೩.೫೩%) ಪರಿಣಾಮಕಾರಿ ಸಾರ್ವಜನಿಕ ಸಂವಹನದ ಮೂಲಕ ಗ್ರಾಮಸಭೆಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬಹುದೆಂಬ ಅಭಿಪ್ರಾಯ ಪಟ್ಟಿದ್ದಾರೆಂಬುದು ಸ್ಪಷ್ಟವಾಗುತ್ತದೆ.

2. ಗ್ರಾಮಸಭೆಯಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸಹಕಾರಿಯಾಗುವ ಅಂಶಗಳು ಯಾವವು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮೀಣ ಅಭಿವೃದ್ಧಿ, ಗ್ರಾಮಸಭೆಯ ಶಿಕ್ಷಣ.	೬೦	೫೭.೬೪
೨.	ಪಂಚಾಯತ ವ್ಯವಸ್ಥೆಯ ತರಬೇತಿ	೫೦	೨೯.೪೧
೩.	ಜಾಗೃತಿ ಕಾರ್ಯಕ್ರಮಗಳು	೧೭	೧೦.೦೦
೪.	ಸಂಬಂಧಿಸಿಲ್ಲ	೧೩	೭.೩೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ. ೬೦ ಜನ ಪ್ರತಿಸ್ಪಂದಿಗಳು (೫೨.೬೪%) ಗ್ರಾಮೀಣ ಅಭಿವೃದ್ಧಿ ಗ್ರಾಮಸಭೆಯ ಶಿಕ್ಷಣ. ೫೦ ಜನ ಪ್ರತಿಸ್ಪಂದಿಗಳು (೨೯.೪೧%), ಪಂಚಾಯತಿ ವ್ಯವಸ್ಥೆ ತರಬೇತಿ. ೧೭ ಜನ ಪ್ರತಿಸ್ಪಂದಿಗಳು (೧೦.೦೦%) ಜಾಗೃತಿಯ ಕಾರ್ಯಕ್ರಮಗಳು, ಗ್ರಾಮಸಭೆಯಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗ ಸಹಕಾರಿಯಾಗುವ ಅಂಶಗಳು ಎಂದು ಅಭಿಪ್ರಾಯಪಟ್ಟಿದ್ದಾರೆ.

3. ಗ್ರಾಮಸಭೆಯ ಕಾರ್ಯಚಟುವಟಿಕೆಗಳು, ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿರಲು ಏನು ಮಾಡಬೇಕು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮೀಣಾಭಿವೃದ್ಧಿ ಕಾರ್ಯಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ಮಾಡುವುದು.	೭೯	೪೬.೪೭
೨.	ಸಾರ್ವಜನಿಕೆ ಒಮ್ಮತದ ಮೇರೆಗೆ ಕ್ರಿಯಾ ಯೋಜನೆ ತಯಾರಿಸುವುದು.	೪೩	೨೫.೨೯
೩.	ಗ್ರಾಮ ಸಭೆಯ ಸದಸ್ಯರು ನಿರಂತರ ಮೇಲ್ವಿಚಾರಣೆ ಮಾಡುವುದು.	೩೫	೨೦.೫೯
೪.	ಸಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೭೯ ಜನ ಪ್ರತಿಸ್ಪಂದಿಗಳು (೪೬.೪೭%) ಗ್ರಾಮೀಣಾಭಿವೃದ್ಧಿಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ಮಾಡುವದು ಎಂದು, ೪೩ ಜನ ಪ್ರತಿಸ್ಪಂದಿಗಳು (೨೫.೨೯%)ಸಾರ್ವಜನಿಕ ಒಮ್ಮತದ ಮೇರೆಗೆ ಕ್ರಿಯಾಯೋಜನೆ ತಯಾರಿಸುವುದು ಎಂದು, ೩೫ ಜನ ಪ್ರತಿಸ್ಪಂದಿಗಳು (೨೦.೫೯%) ಗ್ರಾಮಸಭೆಯ ಸದಸ್ಯರು ನಿರಂತರ ಮೇಲ್ವಿಚಾರಣೆ ಮಾಡುವ ಮೂಲಕ ಗ್ರಾಮ ಸಭೆಯ ಕಾರ್ಯಚಟುವಟಿಕೆಗಳು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಬಲ್ಲವು ಎಂದು ಅಭಿಪ್ರಾಯಪಟ್ಟಿದ್ದಾರೆ.

4. ಗ್ರಾಮಸಭೆಯ ಉಪಸಮಿತಿಗಳ ಬಲವರ್ಧನೆಗೆ ಏನು ಮಾಡಬಹುದು?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಅರ್ಹ ಸದಸ್ಯರ ಆಯ್ಕೆ ಮಾಡುವುದು	೭೬	೪೪.೭೦
೨.	ಉಪಸಮಿತಿಗೆ ಹೆಚ್ಚಿನ ನಿರ್ಣಯಾತ್ಮಕ ಅಧಿಕಾರ ನೀಡುವುದು	೨೩	೧೩.೫೩
೩.	ಸದಸ್ಯರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದು	೫೮	೩೪.೧೨
೪.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೭೩ ಜನ ಪ್ರತಿಸ್ಪಂದಿಗಳು (೪೪.೭೦%) ಅರ್ಹ ಸದಸ್ಯರ ಆಯ್ಕೆ ಮಾಡುವುದರ ಮೂಲಕ, ೨೩ ಜನ ಪ್ರತಿಸ್ಪಂದಿಗಳು (೧೩.೫೩%) ಉಪಸಮಿತಿಗೆ ಹೆಚ್ಚಿನ ನಿರ್ಣಯಾತ್ಮಕ ಅಧಿಕಾರ ನೀಡುವುದರ ಮೂಲಕ, ೫೮ ಜನ ಪ್ರತಿಸ್ಪಂದಿಗಳ (೩೪.೧೨%) ಸದಸ್ಯರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದರ ಮೂಲಕ ಗ್ರಾಮಸಭೆಯ ಉಪಸಮಿತಿಯನ್ನು ಬಲವರ್ಧನೆ ಮಾಡಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಭಾಗ-ಡ

1. ಗ್ರಾಮಸಭೆಯಿಂದ ಏನಾದರೂ ಉಪಯೋಗವಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೪೯	೮೭.೬೫
೨.	ಇಲ್ಲ	೦೮	೪.೭೦
೩.	ಸಂಬಂಧಿಸಿಲ್ಲ	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ಗ್ರಾಮಸಭೆಯಿಂದ ಉಪಯೋಗವಿದೆಯೆಂದು ೧೪೯ ಜನ (೮೭.೬೫) ಅಭಿಪ್ರಾಯಪಡುತ್ತಾರೆ. ೮ ಜನ (೪.೭೦) ಗ್ರಾಮಸಭೆಯಿಂದ ಯಾವುದೇ ಪ್ರಯೋಜನವಿಲ್ಲವೆಂದು ತಿಳಿಸುತ್ತಾರೆ.

1.1 ಹೌದಾದರೆ ಹೇಗೆ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮೀಣಾಭಿವೃದ್ಧಿ ಯೋಜನೆ ತಯಾರಿಸುವುದು	೪೨	೨೮.೧೯
೨.	ವಯುಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು	೧೦೭	೭೧.೮೧
	ಒಟ್ಟು	೧೪೯	೧೦೦

[illegible]

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೪೨ ಪ್ರತಿಸ್ಪಂದಿಗಳ (೨೮.೧೯%) ಪ್ರಕಾರ ಗ್ರಾಮೀಣಾಭಿವೃದ್ಧಿ ಯೋಜನೆ ತಯಾರಿಸುವುದು, ೧೦೭ ಪ್ರತಿಸ್ಪಂದಿಗಳ (೭೧.೮೧%) ವಯುಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು. ಹೀಗಾಗಿ ಗ್ರಾಮಸಭೆ ಅತ್ಯಂತ ಉಪಯುಕ್ತವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ.

1.2 ಇಲ್ಲವಾದರೆ, ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಇದೊಂದು ಔಪಚಾರಿಕ ಸಭೆ	೩	೩೭.೫
೨.	ಪಕ್ಷಪಾತಿಗಳ ಸಭೆ	೩	೩೭.೫
೩.	ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶವಿಲ್ಲ	೨	೨೫.೦೦
	ಒಟ್ಟು	೧೪೯	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ತಲಾ ೩ ಜನ ಪ್ರತಿಸ್ಪಂದಿಗಳ (೩೭.೫%) ಗ್ರಾಮಸಭೆ ಒಂದು ಔಪಚಾರಿಕ ಹಾಗೂ ಪಕ್ಷಪಾತಿಗಳ ಸಭೆ, ೨ ಜನ ಪ್ರತಿಸ್ಪಂದಿಗಳ (೨೫%) ಇಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ಅವಕಾಶವಿಲ್ಲ ಎನ್ನುವುದರ ಮೂಲಕ ಗ್ರಾಮಸಭೆ ಉಪಯುಕ್ತವಲ್ಲ ಎಂಬ ಅಭಿಪ್ರಾಯಪಟ್ಟಿದ್ದಾರೆ.

2. ಫಲಾನುಭವಿಗಳನ್ನು ಹೇಗೆ ಆಯ್ಕೆ ಮಾಡುತ್ತಾರೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ವಾರ್ಡ ಸಭೆಯ ಮೂಲಕ	೬೭	೩೯.೪೧
೨.	ಪಂಚಾಯತ ಸದಸ್ಯರ ಸ್ವ-ಆಯ್ಕೆಯ ಮೂಲಕ	೭೫	೪೪.೧೨
೩.	ಫಲಾನುಭವಿಗಳ ಅರ್ಜಿಯ ಮೂಲಕ	೧೫	೮.೮೨
೪.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ. ೬೭ ಜನ ಪ್ರತಿಸ್ಪಂದಿಗಳು (೩೯.೪೧%) ವಾರ್ಡ ಸಭೆಯ ಮೂಲಕ, ೭೫ ಜನ ಪ್ರತಿಸ್ಪಂದಿಗಳು (೪೪.೧೨%) ಪಂಚಾಯತ ಸದಸ್ಯರ ಸ್ವ ಆಯ್ಕೆಯ ಮೂಲಕ, ೧೫ ಜನ ಪ್ರತಿಸ್ಪಂದಿಗಳು (೮.೮೨%) ಫಲಾನುಭವಿಗಳ ಅರ್ಜಿಯ ಮೂಲಕ ಆಯ್ಕೆ ಮಾಡುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

3. ಗ್ರಾಮಸಭೆಯಲ್ಲಿ ನಡೆಯುವ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೮೫	೫೦.೦೦
೨.	ಇಲ್ಲ	೭೨	೪೨.೩೫
೩.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೮೫ ಜನ ಪ್ರತಿಸ್ಪಂದಿಗಳು (೫೦%) ಗ್ರಾಮಸಭೆಯಲ್ಲಿ ನಡೆಯುವ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿದೆಯೆಂದು, ೭೨ ಜನ ಪ್ರತಿಸ್ಪಂದಿಗಳು (೪೨.೩೫%) ಫಲಾನುಭವಗಳ ಪಾರದರ್ಶಕವಾಗಿರುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

4. ನಿಮ್ಮ ಗ್ರಾಮದಲ್ಲಿ ಗ್ರಾಮಸಭೆ ವ್ಯವಸ್ಥಿತವಾಗಿ ನಡೆಯುತ್ತಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೬೨	೩೬.೪೭
೨.	ಇಲ್ಲ	೯೫	೫೫.೮೮
೩.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೬೨ ಜನ ಪ್ರತಿಸ್ಪಂದಿಗಳು (೩೬.೪೭%) ಗ್ರಾಮಸಭೆ ವ್ಯವಸ್ಥಿತವಾಗಿ ನಡೆಯುತ್ತಿದೆಯೆಂದು, ೯೫ ಜನ ಪ್ರತಿಸ್ಪಂದಿಗಳು (೫೫.೮೮%) ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

4.1 ಇಲ್ಲವಾದರೆ ಏಕೆ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಜನರ ಪಾಲ್ಗೊಳ್ಳುವಿಕೆ ಉತ್ತಮಮಟ್ಟದ್ದಾಗಿಲ್ಲ	೪೮	೫೫.೫೧
೨.	ಕಾಟಾಚಾರದ ಸಭೆ	೩೩	೩೪.೭೩
೩.	ಸಭೆಯಲ್ಲಿ ದೊಂಬಿ ಗದ್ದಲಗಳೇ ಹೆಚ್ಚಾಗಿರುತ್ತವೆ.	೧೪	೧೪.೭೩
	ಒಟ್ಟು	೯೫	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೪೮ ಜನ ಪ್ರತಿಸ್ಪಂದಿಗಳು (೫೫.೫೧%) ಜನರ ಪಾಲ್ಗೊಳ್ಳುವಿಕೆ ಉತ್ತಮ ಮಟ್ಟದ್ದಾಗಿಲ್ಲ. ೩೩ ಜನ ಪ್ರತಿಸ್ಪಂದಿಗಳು (೩೪.೭೩%) ಗ್ರಾಮಸಭೆ ಕಾಟಾಚಾರದ ಸಭೆಯಾಗಿದೆ ಎಂದು, ೧೪ ಜನ ಪ್ರತಿಸ್ಪಂದಿಗಳು (೧೪.೭೩%) ಸಭೆಯಲ್ಲಿ ದೊಂಬಿ, ಗದ್ದಲಗಳೇ ಹೆಚ್ಚಾಗಿರುತ್ತವೆ. ಈ ಕಾರಣಕ್ಕಾಗಿ ಗ್ರಾಮಸಭೆ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

5. ಗ್ರಾಮಸಭೆಯ ಮೂಲಕ ಫಲಾನುಭವಿಗಳು ಲಾಭ ಪಡೆಯುತ್ತಿದ್ದಾರೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೧೩	೬೬.೫
೨.	ಇಲ್ಲ	೪೪	೨೫.೯
೪.	ಸಂಬಂಧಿಸಿಲ್ಲ.	೧೩	೭.೬
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೧೧೩ ಜನ ಪ್ರತಿಸ್ಪಂದಿಗಳು (೬೬.೫%) ಗ್ರಾಮ ಸಭೆಯ ಮೂಲಕ ಫಲಾನುಭವಿಗಳು ಲಾಭ ಪಡೆಯುತ್ತಾರೆಂದು, ೪೪ ಜನ ಪ್ರತಿಸ್ಪಂದಿಗಳು (೨೫.೯%) ಗ್ರಾಮ ಸಭೆಯ ಮೂಲಕ ಫಲಾನುಭವಿಗಳು ಲಾಭ ಪಡೆಯುತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು.

5.1 ಇಲ್ಲವಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಫಲಾನುಭವಿಗಳಿಗೆ ಸೌಲಭ್ಯಗಳ ಮಾಹಿತಿ ಇಲ್ಲ.	೧೨	೨೭.೩
೨.	ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರು ಲಾಭ ಪಡೆಯುತ್ತಿದ್ದಾರೆ.	೨೨	೫೦
೩.	ಫಲಾನುಭವಿಗಳು ಯೋಜನೆ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.	೦೪	೯.೧
೪.	ಮೇಲಿನ ಎಲ್ಲಾ	೦೬	೧೩.೬
	ಒಟ್ಟು	೪೪	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೧೨ ಜನ ಪ್ರತಿಸ್ಪಂದಿಗಳು (೨೭.೩%) ಫಲಾನುಭವಿಗಳಿಗೆ ಸೌಲಭ್ಯಗಳ ಮಾಹಿತಿಯಿಲ್ಲ, ೨೨ ಜನ ಪ್ರತಿಸ್ಪಂದಿಗಳ (೫೦%) ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರು ಲಾಭ ಪಡೆಯುತ್ತಿದ್ದಾರೆ. ೪ ಜನ ಪ್ರತಿಸ್ಪಂದಿಗಳು (೯.೧) ಫಲಾನುಭವಿಗಳು ಯೋಜನೆ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು, ಇನ್ನುಳಿದ ೬ ಜನ ಪ್ರತಿಸ್ಪಂದಿಗಳು (೧೩.೬%) ಕೋಷ್ಟಕದಲ್ಲಿ ವಿವರಿಸಿದ ಎಲ್ಲಾ ಕಾರಣಗಳಿಂದಾಗಿ ಫಲಾನುಭವಿಗಳು ಗ್ರಾಮಸಭೆಯ ಮೂಲಕ ಲಾಭ ಪಡೆಯುತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆಂಬುದು ಸ್ಪಷ್ಟವಾಗುತ್ತದೆ.

6. ಗ್ರಾಮಸಭೆ ಸೌಲಭ್ಯಗಳಿಂದ ಫಲಾನುಭವಿಗಳು ತೃಪ್ತರಾಗಿದ್ದಾರೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೦೫	೬೧.೮
೨.	ಇಲ್ಲ	೫೨	೩೦.೬
೩.	ಸಂಬಂಧಿಸಿಲ್ಲ	೧೩	೭.೬
	ಒಟ್ಟು	೧೭೦	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೧೦೫ ಜನ ಪ್ರತಿಸ್ಪಂದಿಗಳ (೬೧.೮%) ಗ್ರಾಮಸಭೆಯ ಸೌಲಭ್ಯಗಳಿಂದ ಫಲಾನುಭವಿಗಳು ತೃಪ್ತರಾಗಿದ್ದಾರೆಂದು, ೫೨ ಜನ ಪ್ರತಿಸ್ಪಂದಿಗಳು (೩೦.೬%) ಈ ಸಂಬಂಧ ಅತೃಪ್ತರಾಗಿದ್ದಾರೆಂಬುದು ತಿಳಿಯಪಡುತ್ತದೆ.

6.1 ಇಲ್ಲವಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಕಳಪೆ ಗುಣಮಟ್ಟದ ಯೋಜನಾ ಸೌಲಭ್ಯಗಳು	೨೯	೫೫.೭೭
೨.	ಯೋಜನಾ ಹಣ ಪೂರ್ಣವಾಗಿ ದೊರೆಯದೇ ಇರುವುದು	೦೯	೧೭.೩೧
೩.	ವ್ಯವಸ್ಥಿತ ಮೇಲ್ವಿಚಾರಣೆ ಇಲ್ಲ	೦೭	೧೩.೪೬
೪.	ನಿಗದಿತ ಅವಧಿಗೆ ಕಾಮಗಾರಿಗಳು ಮುಗಿಯುವದಿಲ್ಲ.	೦೭	೧೩.೪೬
	ಒಟ್ಟು	೫೨	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೨೯ ಜನ ಪ್ರತಿಸ್ಪಂದಿಗಳು (೫೫.೭೭%) ಕಳಪೆ ಗುಣಮಟ್ಟದ ಯೋಜನಾ ಸೌಲಭ್ಯಗಳು, ೯ ಜನ ಪ್ರತಿಸ್ಪಂದಿಗಳು (೧೭.೩೧%) ಯೋಜನಾ ಹಣ ಪೂರ್ಣವಾಗಿ ದೊರೆಯದೇ ಇರುವುದು, ತಲಾ ೭ ಜನ (೧೩.೪೬%) ವ್ಯವಸ್ಥಿತ ಮೇಲ್ವಿಚಾರಣೆ

[illegible]

[illegible]

[illegible]

[illegible]

ಇಲ್ಲದಿರುವುದು ಹಾಗೂ ನಿಗದಿತ ಅವಧಿಗೆ ಕಾಮಗಾರಿಗಳು ಮುಗಿದೆ ಇರುವದರಿಂದ ಗ್ರಾಮಸಭೆಯ ಸೌಲಭ್ಯಗಳಿಂದ ಫಲಾನುಭವಿಗಳು ತೃಪ್ತರಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

7. ಗ್ರಾಮಸಭೆಯ ನಿರ್ಣಯಗಳು ವ್ಯವಸ್ಥಿತವಾಗಿ ಜಾರಿಯಾಗುತ್ತಿವೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೬೭	೫೭.೧
೨.	ಇಲ್ಲ	೩೦	೩೫.೨
೩.	ಸಂಬಂಧಿಸಿಲ್ಲ.	೧೩	೭.೬೫
	ಒಟ್ಟು	೧೭೦	೧೦೦

ಈ ಮೇಲಿನ **ಕೋಷ್ಟಕದಿಂದ** ತಿಳಿಯುವದೇನೆಂದರೆ, ಗ್ರಾಮಸಭೆಯ ನಿರ್ಣಯಗಳು ವ್ಯವಸ್ಥಿತವಾಗಿ ಜಾರಿಯಾಗುತ್ತಿವೆ ಎಂದು ೬೭ ಜನ ಪ್ರತಿಸ್ಪಂದಿಗಳು (೫೭.೧%) ಹಾಗೂ ೩೦ ಜನ ಪ್ರತಿಸ್ಪಂದಿಗಳು (೩೫.೨%) ಇದಕ್ಕೆ ತದ್ವಿರುದ್ಧವಾದ ಹೇಳಿಕೆ ನೀಡಿದ್ದಾರೆಂಬುದು ಸ್ಪಷ್ಟವಾಗುತ್ತದೆ.

7.1 ಇಲ್ಲವಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಸಭೆಯ ನಂತರ ಜನರು ಹಿಂಬಾಲಿಸುವುದಿಲ್ಲ.	೪೭	೭೮.೩೩೩
೨.	ಉಪಸಮಿತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಿಲ್ಲ.	೧೩	೨೧.೬೬೭
	ಒಟ್ಟು	೪೪	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ. ೪೭ ಜನ ಪ್ರತಿಸ್ಪಂದಿಗಳು (೭೮.೩೩೩%) ಅಭಿಪ್ರಾಯಪಡುವಂತೆ ಸಭೆಯ ನಂತರ ಜನರು ಹಿಂಬಾಲಿಸದಿರುವುದು. ೧೩ ಜನ ಪ್ರತಿಸ್ಪಂದಿಗಳ

(೨೧.೬೬೭) ಪ್ರಕಾರ ಉಪಸಮಿತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವುದು ಗ್ರಾಮಸಭೆಯ ನಿರ್ಣಯಗಳು ವ್ಯವಸ್ಥಿತವಾಗಿ ಜಾರಿಯಾಗದೇ ಇರುವುದಕ್ಕೆ ಕಾರಣವಾಗಿದೆ.

8. ಅಭಿವೃದ್ಧಿ ಕಾಮಗಾರಿಗಳ ಯೋಜನೆ ರೂಪಿಸುವ ಕೆಲಸವನ್ನು ಗ್ರಾಮಸಭೆ ಮಾಡುತ್ತಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೧೦೯	೬೪.೧
೨.	ಇಲ್ಲ	೪೮	೨೮.೨
೩.	ಸಂಬಂಧಿಸಿಲ್ಲ	೧೩	೭.೬
	ಒಟ್ಟು	೪೪	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೧೦೯ ಜನ ಪ್ರತಿಸ್ಪಂದಿಗಳು (೬೪.೧%)ಅಭಿಪ್ರಾಯಪಡುವಂತೆ ಅಭಿವೃದ್ಧಿ ಕಾಮಗಾರಿಗಳ ಯೋಜನೆ ರೂಪಿಸುವ ಕೆಲಸಗಳನ್ನು ಗ್ರಾಮಸಭೆ ಮಾಡುತ್ತಿದೆ, ಇನ್ನುಳಿದ ೪೮ ಜನ ಪ್ರತಿಸ್ಪಂದಿಗಳು (೨೮.೨%) ಇದಕ್ಕೆ ತದ್ವಿರುದ್ಧವಾದ ಹೇಳಿಕೆ ನೀಡಿದ್ದಾರೆಂಬುದು ಸ್ಪಷ್ಟವಾಗುತ್ತದೆ.

8.1 ಇಲ್ಲವಾದರೆ ಏಕೆ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಗ್ರಾಮಸಭೆಯು ಕೇವಲ ಫಲಾನುಭವಿಗಳ ಆಯ್ಕೆಗೆ ಸೀಮಿತವಾಗಿದೆ.	೨೭	೫೬.೨೫
೨.	ಇದು ಕೇವಲ ಗ್ರಾಮ ಪಂಚಾಯತಿಯ ಆದಾಕಯ ವೆಚ್ಚ ಪರಿಶೀಲನ ಮಾಡುತ್ತದೆ	೨೧	೪೩.೭೫
	ಒಟ್ಟು	೪೮	೧೦೦

ಈ ಮೇಲಿನ ಕೋಷ್ಟಕದಿಂದ ತಿಳಿಯುವದೇನೆಂದರೆ, ೨೭ ಜನ ಪ್ರತಿಸ್ಪಂದಿಗಳು (೫೬.೨೫%) ಗ್ರಾಮಸಭೆಯು ಕೇವಲ ಫಲಾನುಭವಿಗಳ ಆಯ್ಕೆಗೆ ಸೀಮಿತವಾಗಿದೆ ಎಂದು, ಹಾಗೂ ೨೧ ಜನ ಪ್ರತಿಸ್ಪಂದಿಗಳು (೪೩.೭೫%) ಗ್ರಾಮಸಭೆ ಕೇವಲ ಗ್ರಾಮಪಂಚಾಯತಿಯ ಆದಾಯ ವೆಚ್ಚ ಪರಿಶೀಲನೆ ಮಾಡುವುದಕ್ಕೋಸ್ಕರ ಮಾತ್ರ ಸೇರುತ್ತದೆ ಹೀಗಾಗಿ ಅಭಿವೃದ್ಧಿ ಕಾಮಗಾರಿಗಳ ಯೋಜನೆ ರೂಪಿಸುವ ಕೆಲಸವನ್ನು ಗ್ರಾಮಸಭೆ ಮಾಡುತ್ತಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

5.1 ಸಂಶೋಧನಾ ಸಾರ

1. ಶೇ.100 ಜನ ಪ್ರತಿಸ್ಪಂದಿಗಳು ಗ್ರಾಮಪಂಚಾಯತಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಹೊಂದಿದ್ದಾರೆ.
2. ಗ್ರಾಮ ಪಂಚಾಯತಿ ಜಾರಿಗೊಳಿಸಿರುವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಶೇ.83.5 ಜನ ಜಾಗೃತಿ ಹೊಂದಿದ್ದಾರೆ.
3. ಶೇ.62.35 ರಷ್ಟು ಪ್ರತಿಸ್ಪಂದಿಗಳು ಗ್ರಾಮ ಪಂಚಾಯತಿ ಸಮಾಧನಕರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ಶೇ.14.71 ರಷ್ಟು ಜನ ಈ ಕುರಿತು ಅತೃಪ್ತರಾಗಿದ್ದಾರೆಂದು ತಿಳಿಯಲ್ಪಡುತ್ತದೆ.
4. ಶೇ.7.64 ರಷ್ಟು ಪ್ರತಿಸ್ಪಂದಿಗಳು ಗ್ರಾಮಸಭೆಯ ಕುರಿತು ಕನಿಷ್ಟ ಮಾಹಿತಿಯನ್ನೂ ಹೊಂದಿಲ್ಲವೆಂಬ ಮಹತ್ವಪೂರ್ಣ ಅಂಶ ಈ ಸಂಶೋಧನೆಯಿಂದ ತಿಳಿದುಬರುತ್ತದೆ.
5. ಗ್ರಾಮಸಭೆಯಲ್ಲಿ ಪಾಲ್ಗೊಳ್ಳಲು ಇರಬೇಕಾದ ಅರ್ಹತೆ ಕುರಿತು ಶೇ.46.5 ರಷ್ಟು ಜನ ಮಾತ್ರ ತಿಳಿದುಕೊಂಡಿದ್ದಾರೆ.
6. ಶೇ.66 ರಷ್ಟು ಜನ ಪ್ರತಿಸ್ಪಂದಿಗಳು ಗ್ರಾಮಸಭೆಯ ನಿಯೋಜನೆ ಕುರಿತಾದ ಪೂರ್ವ ಮಾಹಿತಿಯನ್ನು ಹೊಂದಿರುತ್ತಾರೆ.
7. ಗ್ರಾಮ ಸಭೆಯನ್ನು ಪಂಚಾಯತಿ ಕಾರ್ಯದರ್ಶಿ ಕರೆಯುತ್ತಾರೆಂಬ ಜಾಗೃತಿ ಶೇ.58.82ರಷ್ಟು ಜನರಿಗೆ ಇದೆ.
8. ಗ್ರಾಮ ಸಭೆ ನಡೆಸಲು ಬೇಕಾದ ಕೋರಂ ಬಗ್ಗೆ ಶೇ.67ರಷ್ಟು ಜನ ಸ್ಪಷ್ಟ ಮಾಹಿತಿ ಹೊಂದಿದ್ದಾರೆ. ಹಾಗೂ ಅಚ್ಚರಿಯ ಸಂಗತಿಯೆಂದರೆ, ಶೇ.5ರಷ್ಟು ಜನರ ಪ್ರಕಾರ ಗ್ರಾಮಸಭೆಗೆ ಗ್ರಾಮದ ಹಿರಿಯರ ಹಾಜರಾತಿ ಸಾಕು.
9. ಗ್ರಾಮಸಭೆಯನ್ನು ಗ್ರಾಮಪಂಚಾಯತಿಯ ಆವರಣದಲ್ಲಿಯೇ ನಡೆಸಬೇಕೆಂಬುದು ಶೇ.92.4ರಷ್ಟು ಜನರ ಅಭಿಪ್ರಾಯ.
10. ಬಹುಸಂಖ್ಯಾತ ಪ್ರತಿಸ್ಪಂದಿಗಳು ಗ್ರಾಮಸಭೆಯಲ್ಲಿ ಪಾಲ್ಗೊಂಡಿದ್ದಾರೆಂಬುದು ಈ ಸಂಶೋಧನೆಯಿಂದ ಸ್ಪಷ್ಟವಾಗುತ್ತದೆ.
11. ಗ್ರಾಮಸಭೆಯ ಕುರಿತಾದ ಮಾಹಿತಿಯ ಕೊರತೆ ಹಾಗೂ ವೈಯುಕ್ತಿಕ ಸಮಸ್ಯೆಗಳಿಂದಾಗಿ ಕೆಲವೊಂದಿಷ್ಟು ಜನರು ಗ್ರಾಮಸಭೆಯಲ್ಲಿ ಪಾಲ್ಗೊಳ್ಳ ವಿಫಲರಾಗಿದ್ದಾರೆ.
12. ಗ್ರಾಮಸಭೆಯಲ್ಲಿ ಮಹಿಳೆಯರೂ ಕೂಡ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಸಂಶೋಧನೆಯಿಂದ ತಿಳಿದು ಬಂದ ವಿಚಾರ.

13. ಇವೆಲ್ಲದರ ಹೊರತಾಗಿಯೂ ಮಹಿಳೆಯರ ಕುರಿತಾದ ಅಸಮಾಧಾನ, ಅಸಡ್ಡೆ ಇನ್ನೂ ಮುಂದುವರೆದಿದೆ.
14. ಬಹುಸಂಖ್ಯಾತ ಸದಸ್ಯರು ಗ್ರಾಮಸಭೆಯಲ್ಲಿ ತಮ್ಮ ಪಾತ್ರವೇನೆಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ.
15. ಶೇ.84.70ರಷ್ಟು ಪ್ರತಿಸ್ಪಂದಿಗಳ ಪ್ರಕಾರ ಗ್ರಾಮಸಭೆ, ಗ್ರಾಮೀಣಾಭಿವೃದ್ಧಿ ಅಂಶಗಳ ಚರ್ಚೆಗೆ ಉತ್ತಮ ವೇದಿಕೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.
16. ಶೇ.7.65 ಪ್ರತಿಸ್ಪಂದಿಗಳು ಗ್ರಾಮಸಭೆಯ ಕುರಿತಾಗಿ ಅತೃಪ್ತಿಯನ್ನು ತಿಳಿಸಿದ್ದಾರೆ.
17. ಗ್ರಾಮಸಭೆಯಲ್ಲಿ ಜಾತೀಯತೆ ಇದೆಯೆಂದು 47.65 ರಷ್ಟು ಜನ, ಸ್ವಜನ ಪಕ್ಷಪಾತವಿದೆಯೆಂದು 75.29ರಷ್ಟು ಜನ ಹಾಗೂ ರಾಜಕೀಯ ವಿದೆಯೆಂದು ಕೂಡ ಅಭಿಪ್ರಾಯಪಡುತ್ತಾರೆ.
18. ಶೇ.62.94ರಷ್ಟು ಜನರಿಗೆ ನಡಾವಳಿ ಪುಸ್ತಕದ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ ಎಂದು ತಿಳಿದು ಬರುತ್ತದೆ.
19. ಗ್ರಾಮಸಭೆ ನಿರ್ಣಯಗಳು ಪೂರ್ಣವಾಗಿಲ್ಲದಿದ್ದರೂ ಭಾಗಶಃ ನೆರವೇರುತ್ತವೆ ಎಂದು ಬಹುಸಂಖ್ಯಾತರ ಅಭಿಪ್ರಾಯವಾಗಿದೆ.
20. ಫಲಾನುಭವಿಗಳ ಆಯ್ಕೆಯಲ್ಲಿ ಅಪಾರದರ್ಶಕತೆ ಪಕ್ಷಪಾತತೆ ಹಾಗೂ ಪುನರಾವರ್ತನೆ ಇದೆಯೆಂಬುದು ಬಹುಸಂಖ್ಯಾತರ ಅಭಿಪ್ರಾಯ.
21. ಗ್ರಾಮಸಭೆ ವ್ಯವಸ್ಥಿತವಾಗಿ ನಡೆಯುತ್ತಿಲ್ಲವೆಂದು ಶೇ.55.88ರಷ್ಟು ಜನರ ಅಭಿಪ್ರಾಯ. ಗ್ರಾಮಸಭೆಯ ಸೌಲಭ್ಯಗಳಿಂದ ಸಾರ್ವಜನಿಕರು ತೃಪ್ತರಾಗಿದ್ದಾರೆಂದು ಶೇ.61.88ರಷ್ಟು ಸಂಖ್ಯೆ ಸ್ಪಷ್ಟಪಡಿಸುತ್ತದೆ.
22. ಗ್ರಾಮಸಭೆಯ ನಿರ್ಣಯಗಳು ವ್ಯವಸ್ಥಿತವಾಗಿ ಜಾರಿಯಾಗುತ್ತಿವೆಯೆಂಬುದು ಶೇ.57.1 ರಷ್ಟು ಜನರ ಅಭಿಪ್ರಾಯ
23. ಗ್ರಾಮಸಭೆಯ ಮೂಲಕ ಗ್ರಾಮೀಣಾಭಿವೃದ್ಧಿಯ ಯೋಜನೆಗಳನ್ನು ರೂಪಿಸುವ ಕಾರ್ಯ ನಡೆಯತ್ತಿದೆ ಎಂದು ಶೇ.56.25ರಷ್ಟು ಫಲಾನುಭವಿಗಳು ತಿಳಿಸಿದ್ದಾರೆ.

5.2 ಉಪಸಂಹಾರ ಮತ್ತು ಸಲಹೆಗಳು

ಗಾಂಧೀಜಿಯವರ ಗ್ರಾಮಸ್ವರಾಜ ಕಲ್ಪನೆ ಗ್ರಾಮಗಳಿಗೆ ಅವುಗಳ ಆಡಳಿತದದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುವುದಾಗಿತ್ತು. ಆ ನಿಟ್ಟಿನಲ್ಲಿ ಸರಕಾರಗಳು ಸ್ಥಳೀಯ ಸಂಸ್ಥೆಗಳಿಗೆ ಪಂಚಾಯತ ರಾಜ ವ್ಯವಸ್ಥೆಯ ಮೂಲಕ ಅಗತ್ಯ ಸ್ವಾತಂತ್ರ್ಯವನ್ನು ನೀಡುವ ಪ್ರಯತ್ನ ಮಾಡಿ ಗ್ರಾಮ ಪಂಚಾಯತ ಎಂಬ ವ್ಯವಸ್ಥೆಯನ್ನು ಗ್ರಾಮೀಣ ಮಟ್ಟದಲ್ಲಿ ಜಾರಿಗೊಳಿಸಲಾಯಿತು. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಕರ್ನಾಟಕ ಸರಕಾರ ತನ್ನ ಪಂಚಾಯತ ರಾಜ ಅಧಿನಿಯಮ 1993ರಲ್ಲಿ ಗ್ರಾಮಸಭೆ ಎಂಬ ಅಂಶವನ್ನು ಸೇರಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಗೆ ಅವಶ್ಯಕವಾದ ಯೋಜನೆಗಳನ್ನು ಗ್ರಾಮೀಣ ಜನರೇ ಅಗತ್ಯಕ್ಕೆ ತಕ್ಕಂತೆ ಯೋಜಿಸಲು ಸ್ವಾಯತ್ತತೆ ಮತ್ತು ಬೆಂಬಲ ನೀಡಿತು.

1994ರಿಂದ ಇದುವರೆಗೆ 15 ವರ್ಷಗಳಿಂದ ಗ್ರಾಮಸಭೆ ಎಂಬ ಕಲ್ಪನೆ ನಮ್ಮ ಪಂಚಾಯತ ವ್ಯವಸ್ಥೆಯಲ್ಲಿ ಇದೆ ಹೀಗಾಗಿ ಇದರ ಸಮರ್ಪಕ ಜಾರಿ ಹಾಗೂ ಆ ಮೂಲಕ ಗ್ರಾಮೀಣಾಭಿವೃದ್ಧಿ ಸಾಧಿಸಲಾಗಿದೆಯೇ ಎಂಬ ಅಂಶದ ವಿಶ್ಲೇಷಣೆ ಇಲ್ಲಿ ಅವಶ್ಯಕವಾಗಿ ಮಾರ್ಪಟ್ಟಿತು. ಆ ನಿಟ್ಟಿನಲ್ಲಿ ಸಂಶೋಧನೆಯನ್ನು ನಡೆಸಿದಾಗ ತೀರಾ ವಿಭಿನ್ನವಾದ ಕೆಲವು ಅಂಶಗಳನ್ನು ಇಲ್ಲಿ ಕಂಡುಕೊಳ್ಳಲಾಯಿತು. ಬಹುಸಂಖ್ಯಾತ ಜನರಿಗೆ ಗ್ರಾಮಸಭೆಯ ಕಾರ್ಯಚಟುವಟಿಕೆಗಳ ಕುರಿತು ಸಾಮಾನ್ಯವಾದ ಮಾಹಿತಿಯಿದೆ. ಹಾಗೂ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಕುರಿತಾಗಿ ಸಮರ್ಪಕವಾದ ಜ್ಞಾನವಿದೆ. ಅಷ್ಟಾಗಿಯೂ ಕೂಡ ಗ್ರಾಮೀಣಾಭಿವೃದ್ಧಿ ತುಂಬಾ ನೀರಸವಾಗಿದೆ. ಬಹುಸಂಖ್ಯಾತರು ಸುಶಿಕ್ಷಿತರಾಗಿದ್ದರೂ ಸಹ ಪಂಚಾಯತ ಅಥವಾ ಗ್ರಾಮಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ ಎಂಬುದು ಆಲೋಚಿಸಲೇಬೇಕಾದ ವಿಷಯವಾಯಿತು. ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾದಾಗ ಜಾತೀಯತೆ, ರಾಜಕೀಯ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕಾಮಗಾರಿಗಳ ವ್ಯವಸ್ಥಿತ ಮೇಲ್ವಿಚಾರಣೆ ಇಲ್ಲದೇ ಇರುವುದು, ಹಾಗೂ ಜನರ ಸಹಭಾಗಿತ್ವಕ್ಕೆ ಗ್ರಾಮಸಭೆ ಹೊರತಾದ ಉತ್ತಮ ವೇದಿಕೆ ಇಲ್ಲದಿರುವುದು ಸ್ಪಷ್ಟವಾಯಿತು.

ಗ್ರಾಮಸಭೆ ನೇಪತ್ಯದ ಸಭೆಯಾಗಿದೆ. ವಾರ್ಷಿಕ ಆದಾಯ ವೆಚ್ಚದ ಬಾಬುಗಳ ಕುರಿತು ಚರ್ಚಿಸುವ, ಹಾಗೂ ಫಲಾನುಭವಿಗಳನ್ನು ಗುರುತಿಸುವಮಟ್ಟಿಗಷ್ಟೇ ಅದು ಸೀಮಿತವಾಗಿದೆ. ಸಭೆಯಲ್ಲಿ ಅನವಶ್ಯಕ ವಾದ, ವಿವಾದ, ಜಗಳ, ತಂಟೆ ತಕರಾರು ಗದ್ದಲಗಳು ತೀರಾ ಸಾಮಾನ್ಯವೆನ್ನುವಷ್ಟರಮಟ್ಟಿಗೆ ನಮ್ಮ ಗ್ರಾಮೀಣ ಆಡಳಿತ ಕುಸಿದಿದೆ. ಕೆಲವು ವರ್ಗದ ಜನ ಸಭೆಯನ್ನು ಹಾಳು ಮಾಡಲೆಂದೇ ಅನೇಕ ಗೊಜಲುಗಳನ್ನು ಎತ್ತಿದರೆ, ಪ್ರಜ್ಞಾವಂತರ ವರ್ಗ ಭ್ರಷ್ಟ ವ್ಯವಸ್ಥೆಯಿಂದ ಬೇಸತ್ತು ಈ ಎಲ್ಲ ಬೆಳವಣಿಗೆಯಿಂದ ದೂರಾಗಿ ಗ್ರಾಮಸಭೆಗಳಿಗೆ ಹಾಜರಾತಿಯನ್ನೂ ಸಹ ನೀಡುವುದಿಲ್ಲ.

ತಮ್ಮ ವಾಸಿಸುವ ಗ್ರಾಮದ ಅಭಿವೃದ್ಧಿಯ ಹೊಣೆಹೊತ್ತ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಹಾಗೂ ಆಡಳಿತಾಧಿಕಾರಿಗಳು ವ್ಯವಸ್ಥಿತವಾದ ಭ್ರಷ್ಟಾಚಾರದಲ್ಲಿ ತೊಡಗಿ ಸ್ವ ಅಭಿವೃದ್ಧಿ ಹೊಂದುತ್ತಾರೆಂದು ಬಹಿರಂಗ ಸತ್ಯ. ಇಷ್ಟಾದರೂ ಸಾರ್ವಜನಿಕರು ಸಂಘಟಿತರಾಗಿ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗುತ್ತಿಲ್ಲ ಎಂಬುದು ತೀರಾ ಕಳವಳಕಾರಿಯಾದ ಬೆಳವಣಿಗೆಯಾಗಿದೆ.

ಈ ಸಂಶೋಧನೆಯ ಒಟ್ಟು ಅಧ್ಯಾಯಗಳಲ್ಲಿ ಪ್ರಥಮ ಅಧ್ಯಾಯದಲ್ಲಿ ಸಂಶೋಧನಾ ವಿಷಯ, ಉದ್ದೇಶ, ನಮೂನೆಗಳ ಕುರಿತು ಚರ್ಚಿಸಿದ್ದೇನೆ, ಧ್ವಿತೀಯ ಅಧ್ಯಾಯದಲ್ಲಿ ಗ್ರಾಮಪಂಚಾಯತಿಯ ಕಾರ್ಯಚಟುವಟಿಕೆಗಳು, ತೃತೀಯ ಅಧ್ಯಾಯದಲ್ಲಿ ಗ್ರಾಮಸಭೆಯ ಕಾರ್ಯಚಟುವಟಿಕೆಗಳು, ನಾಲ್ಕನೇ ಅಧ್ಯಾಯದಲ್ಲಿ ಗ್ರಾಮೀಣಾಭಿವೃಧ್ಧಿ ಜನರ ಸಹಭಾಗಿತ್ವ ಹಾಗೂ ಗ್ರಾಮೀಣಾಭಿವೃಧ್ಧಿಯಲ್ಲಿ ಗ್ರಾಮಪಂಚಾಯತಿಯ ಪಾತ್ರ. ಐದನೇ ಅಧ್ಯಾಯದಲ್ಲಿ ಮಾಹಿತಿಯ ಸಂಗ್ರಹಣೆ ಮತ್ತು ವಿಶ್ಲೇಷಣೆಯನ್ನು ಸಾದರಪಡಿಸಿದ್ದೇನೆ.

ಸಲಹೆಗಳು

1. ಗ್ರಾಮಸಭೆಯ ಪರಿಕಲ್ಪನೆಯ ಕುರಿತು ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ನಡೆಸಬೇಕು.
2. ಮತದಾರರ ಪಟ್ಟಿಯಲ್ಲಿ ಹೆಸರು ಇರುವವರನ್ನು ಹೊರತುಪಡಿಸಿ, ಗ್ರಾಮದ ಪ್ರತಿಯೊಬ್ಬ ನಾಗರಿಕರು ಸಕ್ರಿಯವಾಗಿ ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವಂತೆ ಸರಕಾರ ಹಾಗೂ ಪಂಚಾಯತಿಗಳು ಕಾರ್ಯ ಪ್ರವೃತ್ತರಾಗಬೇಕು.
3. ಗ್ರಾಮಸಭೆಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು, ಯುವಕ ಸಂಘಗಳ ಪಾಲ್ಗೊಳ್ಳುವಿಕೆಯನ್ನು ಕಡ್ಡಾಯಗೊಳಸಬೇಕು.
4. ಗ್ರಾಮಸಭೆಗಳಲ್ಲಿ ಹಿಂದುಳಿದ ವರ್ಗಗಳ ಜನರ ಪಾಲ್ಗೊಳ್ಳುವಿಕೆಯ ಮಿತಿಯನ್ನು ಹೆಚ್ಚಿಸಬೇಕು.
5. ಗ್ರಾಮದ ಪ್ರಜ್ಞಾವಂತ ಜನರಿಗೆ ಗ್ರಾಮಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳು ಉತ್ತಮ ರಾಜಕೀಯ ವಾತಾವರಣ ನಿರ್ಮಾಣವಾಗಬೇಕು.
6. ಗ್ರಾಮಸಭೆ ಕರ್ನಾಟಕ ಸರಕಾರದ ಮಾರ್ಗಸೂಚಿಗಳಿಗನುಗುಣವಾಗಿಯೇ ಕಾರ್ಯನಿರ್ವಹಿಸಬೇಕು.
7. ಗ್ರಾಮೀಣಾಭಿವೃಧ್ಧಿ ಸಲುವಾಗಿ ಗ್ರಾಮದ ಜನರು ರಾಜಕೀಯ, ಜಾತೀಯತೆ ಹಾಗೂ ಸ್ವಜನ ಪಕ್ಷಪಾತ ಮನೋಭಾವದಿಂದ ಹೊರಗಡೆ ಬರಬೇಕು.

8. ಗ್ರಾಮಸಭೆಯ ಕುರಿತು ಜಾಗೃತಿ ಮೂಡಿಸಲು, ಕೇಬಲ್ ಟಿ.ವಿ., ಸ್ಥಳೀಯ ಪತ್ರಿಕೆ, ಸಂಘ ಸಂಸ್ಥೆಗಳ ಸಹಾಯ ಪಡೆಯಬೇಕು.

ಗ್ರಾಮದ ಯುವಕರಿಗೆ ಹಂತ-ಹಂತವಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಗ್ರಾಮಸಭೆಯ ಕುರಿತು ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿ ನಡೆಸಬೇಕು.

9. ಗ್ರಾಮೀಣಾಭಿವೃದ್ಧಿ ಕಾರ್ಯಗಳ ಮೇಲೆ ಸಾರ್ವಜನಿಕರು ಒಂದು ನಿಗಾ ಇಡಬೇಕು.
10. ಉಪಸಮಿತಿಗಳಿಗೆ ರಾಜಕೀಯದಿಂದ ಹೊರತಾದ ಪ್ರಜ್ಞಾವಂತ ನಾಗರಿಕರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು.
11. ಫಲಾನುಭವಿಗಳ ಆಯ್ಕೆ ಮಾನವೀಯ ತಳಹದಿಗಳ ಮೇಲೆ ನಡೆಯಬೇಕು.
12. ಪಾರದರ್ಶಕ ಆಡಳಿತ ನಡೆಸುವ ಮೂಲಕ ಗ್ರಾಮಸಭೆಯಲ್ಲಿ ನಡೆಯುವ ದೊಂಬಿ, ಗದ್ದಲಗಳನ್ನು ತಡೆಗಟ್ಟಬೇಕು.
13. ಗ್ರಾಮಪಂಚಾಯತಿಯ ಕಳಪೆ ಕಾಮಗಾರಿಗಳ ಕುರಿತು ಸಾರ್ವಜನಿಕರು ಸಾಮಾಜಿಕ ಪ್ರಕ್ರಿಯೆಯಲ್ಲಿ ತೊಡಗಬೇಕು.

ಪ್ರಶ್ನಾವಳಿ

" ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಯ ಪಾತ್ರ" ಹಾರೂಗೇರಿ ಗ್ರಾಮಪಂಚಾಯಿತಿ ಒಂದು ಅಧ್ಯಯನ

ಸಂಶೋಧಕನ ಹೆಸರು ಮತ್ತು ವಿಳಾಸ : ಶ್ರೀ ಚಿದಾನಂದ ಉ. ಧವಳೇಶ್ವರ, ದರೂರ, ತಾ: ಅಥಣಿ
ಸಂಶೋಧನಾ ಕೇಂದ್ರದ ಹೆಸರು : ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ.

ಗ್ರಾಮಸಭೆಯ ಅರ್ಹ ಸದಸ್ಯರ ಪ್ರಶ್ನಾವಳಿ ಪಟ್ಟಿ

ಭಾಗ -1 : ಪ್ರತಿಸ್ಪಂದಿಗಳ ವೈಯುಕ್ತಿಕ ಮಾಹಿತಿ

1) ಹೆಸರು :
2) ಲಿಂಗ : ಗಂಡು (1) ಹೆಣ್ಣು (2)
3) ವಯೋಮಿತಿ : 18-28 (1) 29-38(2) 39-ಹೆಚ್ಚು(3)
4) ಧರ್ಮ : ಹಿಂದೂ(1) ಮುಸ್ಲಿಂ (2) ಜೈನ (3)
5) ಉದ್ಯೋಗ : ಒಕ್ಕಲುತನ (1) ವ್ಯಾಪಾರ (2) ನೌಕರಿ(3) ಕೂಲಿ(4) ಇತರೆ(5)
6) ಶಿಕ್ಷಣ : ಅಕ್ಷರಸ್ಥ (1) ಅನಕ್ಷರಸ್ಥ (2)
7) ಶಿಕ್ಷಣ ಮಿತಿ : 1-6(1) 7-10(2) ಪಿಯುಸಿ-ಪದವಿ(3) ಇತರೆ (4)
8) ಮನೆಯ ಮಾಲಿಕತ್ವ: ಸ್ವಂತ (1) ಬಾಡಿಗೆ (2)
   1) ಸ್ವಂತದ್ದಾದರೆ, ಮನೆಯ ಪ್ರಕಾರ : ಗುಡಿಸಲು (1) ಕಚ್ಚಾ(2) ಪಕ್ಕಾ(3)

ಭಾಗ - ಅ : ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳು

1) ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳ ಬಗ್ಗೆ ನಿಮಗೆ ತಿಳಿದಿದೆಯಾ?
ಹೌದು (1) ಇಲ್ಲ (2)

1) ಹೌದಾದರೆ ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳಾವವು?
ಕುಡಿಯುವ ನೀರು ಪೂರೈಸುವದು (1)
ಗ್ರಾಮೀಣ ರಸ್ತೆ ನಿರ್ಮಿಸುವುದು (2)
ಬೀದಿ ದೀಪಗಳ ವ್ಯವಸ್ಥೆ (3)
ಮೇಲಿನ ಎಲ್ಲಾ (4)

2) ಗ್ರಾಮ ಪಂಚಾಯತಿ ಜಾರಿಗೊಳಿಸುವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಿಳಿದಿದೆಯಾ?
ಹೌದು (1) ಇಲ್ಲ (2)

1) ಹೌದಾದರೆ ಯಾವವು?
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (1)
ಗಂಗಾ ಕಲ್ಯಾಣ ಯೋಜನೆ (2)
ಆಶ್ರಯ ಯೋಜನೆ (3)
ಜವಾಹರ ರೋಜಗಾರ ಯೋಜನೆ (4)
ಮೇಲಿನ ಎಲ್ಲಾ (5)

3) ನಿಮ್ಮ ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ತೃಪ್ತಿಕರವಾಗಿದೆ (1)
ಅತೃಪ್ತಿಕರವಾಗಿದೆ (2)
ಸಮಾಧಾನಕರವಾಗಿದೆ (3)

ಭಾಗ – ಬ : ಗ್ರಾಮಸಭೆಯ ಕಾರ್ಯಚಟುವಟಿಕೆಗಳು

1) ಗ್ರಾಮಸಭೆಯ ಬಗ್ಗೆ ಕೇಳಿದ್ದೀರಾ ?
ಹೌದು (1) ಇಲ್ಲ (2)

1) ಹೌದಾದರೆ ಗ್ರಾಮಸಭೆ ಎಂದರೇನು?
ಪಂಚಾಯತಿ ಸದಸ್ಯರ ಸಭೆ (1)
ಗ್ರಾಮದ ಜನತೆಯ ಸಭೆ (2)
ಅಧಿಕಾರಿಗಳ ಸಭೆ (3)
ಮತದಾರರ ಪಟ್ಟಿಯಲ್ಲಿ ಹೆಸರಿರುವ ಜನರ ಸಭೆ (4)
ಇತರೆ (5)

2) ಯಾವ ಮೂಲದಿಂದ ಗ್ರಾಮಸಭೆಡಯ ಬಗ್ಗೆ ತಿಳಿದುಕೊಂಡಿದ್ದೀರಿ?
ಕರಪತ್ರ, ಬಿತ್ತಿಚಿತ್ರ, ಡಂಗೂರ, ಪಂಚಾಯತ ಸೂಚನಾ ಫಲಕ (1)
ಪಂಚಾಯತ ಕಾರ್ಯದರ್ಶಿ ಮೂಲಕ (2)
ಪಂಚಾಯತ ಸದಸ್ಯರಿಂದ (3)
ಸಾರ್ವಜನಿಕರಿಂದ (4)
ಮೇಲಿನ ಎಲ್ಲಾ (5)

3) ಗ್ರಾಮಸಭೆಯನ್ನು ಯಾರು ಕರೆಯುತ್ತಾರೆ?
ಪಂಚಾಯತ ಕಾರ್ಯದರ್ಶಿ (1)
ಪಂಚಾಯತ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು (2)

4) ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರ ಅರ್ಹತೆ ಏನು?
18 ವರ್ಷ ಮೇಲ್ಪಟ್ಟವರಾಗಿರಬೇಕು (1)
ಗ್ರಾಮದ ನಿವಾಸಿಗಳಾಗಿರಬೇಕು (2)
ಮತದಾರರ ಪಟ್ಟಿಯಲ್ಲಿ ಹೆಸರಿರಬೇಕು. (3)

5) ಗ್ರಾಮಸಭೆ ನಡೆಸಲು ಎಷ್ಟು ಜನ ಅರ್ಹ ಸದಸ್ಯರ ಹಾಜರಾತಿ ಇರಬೇಕು?
ಒಟ್ಟು ಅರ್ಹ ಸದಸ್ಯರ 1/10 ಅಂಶ ಅಥವಾ 100ಜನ–
ಅಥವಾ ಯಾವುದು ಕಡಿಮೆಯೋ ಅದು (1)
100 ಅಥವಾ ಅದಕ್ಕಿಂತ ಹೆಚ್ಚು ಜನ (2)
ಊರಿನ ಹಿರಿಯರ ಹಾಜರಾತಿ ಸಾಕು (3)

6) ಗ್ರಾಮಸಭೆ ಎಲ್ಲಿ ನಡೆಸಲಾಗುತ್ತದೆ.
ಪಂಚಾಯತಿ ಆವರಣ (1)
ಸಾರ್ವಜನಿಕ ಸ್ಥಳಗಳಲ್ಲಿ (2)

7) ಗ್ರಾಮ ಸಭೆಯಲ್ಲಿ ನೀವು ಪಾಲ್ಗೊಂಡಿದ್ದೀರಾ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಮಾಹಿತಿ ಕೊರತೆ (1)

ವೈಯುಕ್ತಿಕ ಸಮಸ್ಯೆ (2)

8) ಗ್ರಾಮ ಸಭೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಯೇ?

ಹೌದು (1) ಇಲ್ಲ (2)

1) ಹೌದಾದರೆ ಅದು ಹೇಗೆ ಸಾಧ್ಯವಾಯಿತು?

ಮಹಿಳಾ ಶಿಕ್ಷಣ (1)

ಜಾಗೃತಿ (2)

ಆಧುನಿಕ ಪ್ರಭಾವ (3)

2) ಇಲ್ಲವಾದರೆ ಏಕೆ?

ಪುರುಷ ಪ್ರಧಾನ ವ್ಯವಸ್ಥೆ (1)

ಮಹಿಳೆಯ ಕುರಿತಾದ ಅಸಡ್ಡೆ (2)

ಜಾಗೃತಿಯ ಕೊರತೆ (3)

9) ಗ್ರಾಮಸಭೆಯಲ್ಲಿ ಹಿಂದುಳಿದ ವರ್ಗದ ಸದಸ್ಯರ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ಏನು ಮಾಡಬಹುದು?

ಶಿಕ್ಷಣ ನೀಡುವುದು (1)

ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು (2)

ಕಡ್ಡಾಯ ಪಾಲ್ಗೊಳ್ಳುವಿಕೆಯ ಮಿತಿಯನ್ನು ಹೆಚ್ಚಿಸುವುದು (3)

10) ಗ್ರಾಮಸಭೆಯಲ್ಲಿ ನಿಮ್ಮ ಪಾತ್ರವೇನು?

ಅರ್ಹ ಸದಸ್ಯನಾಗಿ ಪಾಲ್ಗೊಳ್ಳುವುದು (1)

ಆದ್ಯತಾ ಯೋಜನೆಗಳನ್ನು ರೂಪಿಸುವುದು (2)

ಅಭಿವೃದ್ಧಿ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ಪಡೆಯುವುದು (3)

ಗ್ರಾಮೀಣ ಜನ-ಜಾನುವಾರುಗಳ ಸ್ವಚ್ಛತೆ, ಆರೋಗ್ಯ ಕುರಿತು ಚರ್ಚೆ (4)

11) ಗ್ರಾಮಸಭೆಯ ಮುಖಾಂತರ ಗ್ರಾಮೀಣಾಭಿವೃದ್ಧಿಯ ಅಂಶಗಳನ್ನು ಚರ್ಚೆ ಮಾಡುವುದು ಅವಶ್ಯಕವೇ?

ಹೌದು (1) ಇಲ್ಲ (2)

1) ಹೌದಾದರೆ ಏಕೆ?

ಗ್ರಾಮದ ಅರ್ಹ ಸದಸ್ಯರ ಸಭೆ (1)

ಸಾಮೂಹಿಕ ತೀರ್ಮಾನಕ್ಕೆ ಸಹಕಾರಿಯಾಗಿದೆ (2)

2) ಇಲ್ಲವಾದರೆ ಏಕೆ?

ಗ್ರಾಮಸಭೆ ನೇಪತ್ಯದ ಸಭೆ (1)

ಪಕ್ಷಪಾತಿ ಸಭೆ (2)

12) ಗ್ರಾಮಸಭೆಯ ಕಾರ್ಯಚಟುವಟಿಕೆಗಳಾವವು?

ಗ್ರಾಮ ಪಂಚಾಯತ ತಯಾರಿಸಿದ ವಾರ್ಷಿಕ ಯೋಜನೆಯ
ಪರಿಶೀಲನೆ ಮತ್ತು ಅನುಮೋದನೆ (1)

ಆದ್ಯತಾ ಯೋಜನೆಗಳನ್ನು ತಯಾರಿಸುವುದು (2)
ಅರ್ಹ ಫಲಾನುಭವಿಗಳ ಪಟ್ಟಿಗೆ ಒಪ್ಪಿಗೆ ಸೂಚಿಸುವುದು (3)
ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆಯುವುದು (4)
ಗ್ರಾಮೀಣ ಮೂಲ ಸೌಕರ್ಯಗಳನ್ನು ಅಭಿವೃದಿಪಡಿಸುವುದು (5)
ಜನ-ಜಾನುವಾರುಗಳ ಆರೋಗ್ಯ ಅಭಿವೃದ್ಧಿ ಮಾಡುವುದು (6)
ಮೇಲಿನ ಎಲ್ಲಾ (7)

13) ಗ್ರಾಮಸಭೆಯಲ್ಲಿ ಜಾತೀಯತೆ ಇದೆಯೇ?
ಹೌದು (1) ಇಲ್ಲ (2)

14) ಗ್ರಾಮಸಭೆಯಲ್ಲಿ ಸ್ವಜನ ಪಕ್ಷಪಾತ ಇದೆಯೇ?
ಹೌದು (1) ಇಲ್ಲ (2)

15) ಗ್ರಾಮಸಭೆಯಲ್ಲಿ ರಾಜಕೀಯ ಇದೆಯೇ?
ಹೌದು (1) ಇಲ್ಲ (2)

16) ನಡಾವಳಿ ಪುಸ್ತಕದ ಬಗೆಗೆ ನಿಮಗೆ ಮಾಹಿತಿ ಇದೆಯೇ?
ಹೌದು (1) ಇಲ್ಲ (2)

17) ಕಳೆದ ಎರಡು ವರ್ಷದ ಗ್ರಾಮಸಭೆಗಳಲ್ಲಿ ಕೈಗೊಂಡ ನಿರ್ಣಯಗಳು ಯಾವ ರೀತಿ ಜಾರಿಯಾಗಿವೆ?
ಪೂರ್ಣವಾಗಿ (1)
ಭಾಗಶಃ (2)
ಅಪೂರ್ಣವಾಗಿ (3)

ಭಾಗ – ಕ : ಸಹಭಾಗಿತ್ವ

1) ಗ್ರಾಮ ಸಭೆಯ ಬಗ್ಗೆ ಸಾರ್ವಜನಿಕರಿಗೆ ಹೇಗೆ ಜಾಗೃತಿ ಮೂಡಿಸಬಹುದು?
ಸ್ಥಳೀಯ ಸಮೂಹ ಮಾಧ್ಯಮಗಳ ಮೂಲಕ (1)
ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳ ಮೂಲಕ (2)
ಸ್ವ ಪ್ರಚೋದನೆ (3)
ಪರಿಣಾಮಕಾರಿಯಾದ ಸಾರ್ವಜನಿಕ ಸಂವಹನ (4)

2) ಗ್ರಾಮಸಭೆಗಳಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸಹಕಾರಿಯಾಗುವ ಅಂಶಗಳಾವವು?
ಗ್ರಾಮೀಣಾಭಿವೃದ್ಧಿ, ಗ್ರಾಮಸಭೆ ಶಿಕ್ಷಣ (1)
ಪಂಚಾಯತ ರಾಜ್ ವ್ಯವಸ್ಥೆ ತರಬೇತಿ (2)
ಜಾಗೃತಿ ಕಾರ್ಯಕ್ರಮಗಳು (3)

3) ಗ್ರಾಮಸಭೆಯ ಕಾರ್ಯಚಟುವಟಿಕೆಗಳು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿರಲು ಏನು ಮಾಡಬೇಕು?
ಗ್ರಾಮೀಣಾಭಿವೃದ್ಧಿ ಕಾರ್ಯಗಳಲ್ಲಿ ಸಾರ್ವಜನಿಕರು
ಪಾಲ್ಗೊಳ್ಳುವಂತೆ ಮಾಡುವುದು (1)
ಸಾರ್ವಜನಿಕ ಒಮ್ಮತದ ಮೇರೆಗೆ ಕ್ರಿಯಾಯೋಜನೆ ತಯಾರಿಸುವುದು (2)
ಗ್ರಾಮಸಭೆಯ ಸದಸ್ಯರು ನಿರಂತರ ಮೇಲ್ವಿಚಾರಣೆ ಮಾಡುವುದು (3)

4) ಗ್ರಾಮಸಭೆಯ ಉಪಸಮಿತಿಗಳ ಬಲವರ್ಧನೆಗೆ ಏನು ಮಾಡಬಹುದು?

ಅರ್ಹ ಸದಸ್ಯರ ಆಯ್ಕೆ ಮಾಡುವುದು (1)
ಸಮಿತಿಗೆ ಹೆಚ್ಚಿನ ನಿರ್ಣಯಾತ್ಮಕ ಅಧಿಕಾರ ನೀಡುವುದು (2)
ಸದಸ್ಯರಿಗೆ ಶಿಕ್ಷಣ ಹಾಗೂ ತರಬೇತಿ ನೀಡುವುದು (3)

ಭಾಗ-ಡ : ಜನಾಭಿಪ್ರಾಯ

1) ಗ್ರಾಮಸಭೆಯಿಂದ ಏನಾದರೂ ಉಪಯೋಗವಿದೆಯೇ?

ಹೌದು (1) ಇಲ್ಲ (2)

1) ಹೌದಾದರೆ ಹೇಗೆ?

ಗ್ರಾಮೀಣಾಭಿವೃದ್ಧಿಯ ಯೋಜನೆ ತಯಾರಿಸುವುದು (1)
ವಯುಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು (2)

2) ಇಲ್ಲವಾದರೆ ಏಕೆ?

ಇದು ಔಪಚಾರಿಕ ಸಭೆ (1)
ಪಕ್ಷಪಾತಿಗಳ ಸಭೆ (2)
ಅಧಿಕಾರಿಗಳು, ಜನಪ್ರತಿನಿಧಿಗಳ ಸಭೆ (3)
ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶವಿಲ್ಲ (4)

2) ಫಲಾನುಭವಿಗಳನ್ನು ಹೇಗೆ ಆಯ್ಕೆ ಮಾಡುತ್ತಾರೆ?

ವಾರ್ಡ ಸಭೆಯ ಮೂಲಕ (1)
ಪಂಚಾಯತ ಸದಸ್ಯರ ಸ್ವ ಆಯ್ಕೆಯ ಮೂಲಕ (2)
ಫಲಾನುಭವಿಗಳ ಅರ್ಜಿಯ ಮೂಲಕ (3)

3) ಗ್ರಾಮಸಭೆಯಲ್ಲಿ ನಡೆಯುವ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿದೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಪುನರಾವರ್ತಿತ ಫಲಾನುಭವಿಗಳು (1)
ಪಕ್ಷಪಾತತೆ (2)

4) ನಿಮ್ಮ ಗ್ರಾಮದಲ್ಲಿ ಗ್ರಾಮಸಭೆ ವ್ಯವಸ್ಥಿತವಾಗಿ ನಡೆಯುತ್ತಿದೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಜನರ ಪಾಲ್ಗೊಳ್ಳುವಿಕೆ ಉತ್ತಮ ಮಟ್ಟದ್ದಾಗಿಲ್ಲ (1)
ಕಾಟಾಚಾರದ ಸಭೆ (2)
ಸಭೆಯಲ್ಲಿ ದೊಂಬಿ, ಗದ್ದಲಗಳೇ ಹೆಚ್ಚಾಗಿರುತ್ತವೆ (3)

5) ಗ್ರಾಮಸಭೆಯ ಮೂಲಕ ಫಲಾನುಭವಿಗಳು ಲಾಭ ಪಡೆಯುತ್ತಿದ್ದಾರೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಫಲಾನುಭವಿಗಳಿಗೆ ಸೌಲಭ್ಯಗಳ ಮಾಹಿತಿ ಇಲ್ಲ (1)
ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರು ಲಾಭ ಪಡೆಯುತ್ತಿದ್ದಾರೆ. (2)
ಫಲಾನುಭವಿಗಳು ಯೋಜನೆ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ (3)
ಮೇಲಿನ ಎಲ್ಲಾ (4)

6) ಗ್ರಾಮಸಭೆಯು ನೀಡಿರುವ ಸೌಲಭ್ಯಗಳಿಂದ ಫಲಾನುಭವಿಗಳು ತೃಪ್ತರಾಗಿದ್ದಾರೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಕಳಪೆ ಮಟ್ಟದ ಯೋಜನಾ ಸೌಲಭ್ಯಗಳು (1)
ಯೋಜನಾ ಹಣ ಪೂರ್ಣವಾಗಿ ದೊರೆಯುತ್ತಿಲ್ಲ (2)
ವ್ಯವಸ್ಥಿತ ಮೇಲ್ವಿಚಾರಣೆ ಇಲ್ಲ (3)
ನಿಗದಿತ ಅವಧಿಗೆ ಕಾಮಗಾರಿಗಳು ಮುಗಿಯುವದಿಲ್ಲ (4)
ಇತರೆ (5)

7) ಗ್ರಾಮಸಭೆಯ ನಿರ್ಣಯಗಳು ವ್ಯವಸ್ಥಿತವಾಗಿ ಜಾರಿಯಾಗುತ್ತವೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಸಭೆಯ ನಂತರ ಜನರು ಹಿಂಬಾಲಿಸುವುದಿಲ್ಲ (1)
ಉಪಸಮಿತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಿಲ್ಲ. (2)

8) ಅಭಿವೃದ್ಧಿ ಕಾಮಗಾಗಿಗಳ ಯೋಜನೆ ರೂಪಿಸುವ ಕೆಲಸವನ್ನು ಗ್ರಾಮಸಭೆ ಮಾಡುತ್ತಿವೆಯೇ?

ಹೌದು (1) ಇಲ್ಲ (2)

1) ಇಲ್ಲವಾದರೆ ಏಕೆ?

ಗ್ರಾಮಸಭೆಯು ಕೇವಲ ಫಲಾನುಭವಿಗಳ ಆಯ್ಕೆಗೆ ಸೀಮಿತವಾಗಿದೆ (1)
ಇದು ಕೇವಲ ಪಂಚಾಯತಿಯ ಆದಾಯ ವೆಚ್ಚ ಪರಿಶೀಲನೆ
ಮಾಡುತ್ತದೆ (2)

ಗ್ರಂಥ ಋಣ

1) ಪ್ರಜೆಗಳೇ ಪ್ರಭುಗಳು- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ

2) ನಮ್ಮ ಗ್ರಾಮಾಡಳಿತ - ಪ್ರೊ. ಡಿ.ಶಿವರುದ್ರಪ್ಪ -2004

3) ಮಾಹಿತಿ ಕೈಪಿಡಿ ಮಾಲೆ - ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ- ಕನ್ನಡ ಅಭಿವೃದ್ಧಿ ಪ್ರಾಧಿಕಾರ 2004

4) ನಮ್ಮ ಗ್ರಾಮಾಡಳಿತ - ಪ್ರೊ. ಡಿ. ಶಿವರುದ್ರಪ್ಪ –**Karnataka Institute for Law & Parlimentary reform -2008**

5) ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993

6) ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ – ಎಸ್.ಜಿ.ಹಿರೇಮಠ

7) ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ – ಸಿ.ಎನ್.ಶಂಕರ್‌ರಾವ, ಮಂಗಳೂರು

8) ತಮಿಳುನಾಡು ಪಂಚಾಯತ್ ರಾಜ್ ಕಾಯ್ದೆ 1994

9) **Gram Sabha to be base for development- Govt. of A.P**

10) **Guidelines for the conduct of *Gram Sabha*- Govt. *of* Karnataka**

11) **People participation in rural development - A Critical analysis E.Desingu Setty, I.J. of S.W., 1985, Vol.46-1-4-73-83.**

12) **Development of Womens and Childrens in rural areas "Successful Case studies"- C. Hemalata Prasad.I.J.of R.D., Vol.14(1) PP6587HYD**

13) **Local Governance and peoples participation in decentralized planning for rural development- G.V.Joshi, Mumbai**

14) **People participation – Some Psychological dimensions – M.L.Santanama, C. Yogananda, S. Vijayakumar, I.J. of R.D.Vol.3 July84**

15) **Participation of Dalits and Women in Gram Panchayat- S.Deviprasad and S. Haranath, NIRD, I.J of R.D. Vol.23(3)2004 Hyd.**